ಡಾ. ಸಿದ್ಧಯ್ಯ ಪುರಾಣಿಕರ
(ಕಾವ್ಯಾನಂದ)

# ಸಮಗ್ರ ಮಕ್ಕಳ ಸಾಹಿತ್ಯ

ಶ್ರೀಗಿರಿ ಪ್ರಕಾಶನ
'ಶ್ರೀಗಿರಿ' 4/5ಎ, ಆಲಿ ಆಸ್ಕರ್ ರಸ್ತೆ
ಬೆಂಗಳೂರು–560 052

# ಸಮಗ್ರ ಮಕ್ಕಳ ಸಾಹಿತ್ಯ : ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ)
**(ಕಾವ್ಯ, ನಾಟಕ, ಪ್ರವಾಸಗಳ ಸಂಪುಟ)**


**ಪ್ರಕಾಶಕರು**
**ಶ್ರೀಗಿರಿ ಪ್ರಕಾಶನ**
'ಶ್ರೀಗಿರಿ' 4/5ಎ, ಆಲಿ ಆಸ್ಕರ್ ರಸ್ತೆ
ಬೆಂಗಳೂರು–560 052
ದೂರವಾಣಿ : 080–22264361



© **ಪ್ರಸನ್ನ ಕುಮಾರ ಪುರಾಣಿಕ**



ಮೊದಲ ಮುದ್ರಣ : 2016

ಕಾಗದ : 80 GSM Maplitho paper
Book size : Crown 1/4th , Two colour

**ಬೆಲೆ** : **ರೂ. 200/–**
**ಪುಟಗಳು** : **vi + 192=198**

ಛಾಯಾಕ್ಷರ ಜೋಡಣೆ : ವರ್ಷಿಣಿ ಗ್ರಾಫಿಕ್ಸ್
ಮುಖಪುಟ ವಿನ್ಯಾಸ ಹಾಗೂ ಒಳಚಿತ್ರಗಳು : ಶ್ರೀ ಹೆಚ್.ಎಸ್. ಮೋನಪ್ಪ
ಪುಟಗಳ ವಿನ್ಯಾಸ : ಶ್ರೀ ಕೃಷ್ಣಮೂರ್ತಿ ಇ.ಎಂ.
ಮುದ್ರಕರು : ಸ್ನೇಹಾ ಪ್ರಿಂಟರ್ಸ್
ಬೆಂಗಳೂರು

# ಪರಿವಿಡಿ


| | | |
|---|---|---|
| 1. | ಪ್ರಕಾಶಕರ ಮಾತು | iv |
| 2. | ತುಪ್ಪ ರೊಟ್ಟಿ ಗೇ ಗೇ ಗೇ | 1–22 |
| 3. | ಗಿಲ್ ಗಿಲ್ ಗಿಲಗಚ್ಚಿ | 25–40 |
| 4. | ತಿರುಗಲೆ ತಿರುಗಲೆ ತಿರುಗುಯ್ಯಾಲೆ | 43–58 |
| 5. | ಬಣ್ಣ ಬಣ್ಣದ ಓಕುಳಿ | 61–84 |
| 6. | ಭಾರತವೆಲ್ಲಕೆ ಬಾವುಟವೊಂದೇ | 87–112 |
| 7. | ನ್ಯಾಯ ನಿರ್ಣಯ | 115–144 |
| 8. | ಮಕ್ಕಳ ಲೋಕ ಸಂಚಾರ | 147–172 |
| 9. | ಸರ್ವರ ಕವಿ ಸರ್ವಜ್ಞ | 175–184 |
| 10. | ಅನುಬಂಧಗಳು | 185–190 |
| 11. | ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ | 191 |
| 12. | ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ | 192 |

# ಪ್ರಕಾಶಕರ ಮಾತು

ನಮ್ಮ ತಂದೆಯವರಾದ ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದರು) ನಾಡಿನ ಪ್ರಮುಖ ಲೇಖಕರಲ್ಲಿ ಒಬ್ಬರು. ಅವರು ತಮ್ಮ 55 ವರ್ಷಗಳ ಸಾಹಿತ್ಯ ಸೇವೆ ಮಾಡುತ್ತ ಕಾವ್ಯ, ವಚನ, ಗದ್ಯ, ನಾಟಕ, ಮಕ್ಕಳ ಸಾಹಿತ್ಯ ಮತ್ತು ಕಾದಂಬರಿ ಕೃತಿಗಳನ್ನು ಬರೆದಿರುವರು. ಅವರು ಒಬ್ಬ ಉನ್ನತ ಐ.ಎ.ಎಸ್. ಅಧಿಕಾರಿ ಆಗಿ ಕನ್ನಡ ನಾಡಿಗೆ ಮತ್ತು ಜನತೆಗೆ ಅಪೂರ್ವ ಸೇವೆ ಮಾಡಿ ಎಲ್ಲರ ಪ್ರೀತಿ ಗಳಿಸಿದ್ದಾರೆ. ಪುರಾಣಿಕರು 5–9–1994ರಲ್ಲಿ ಲಿಂಗೈಕ್ಯರಾದರು. ಅವರ ಎಲ್ಲಾ ಕೃತಿಗಳನ್ನು ಮರು ಪ್ರಕಟನೆ ಮಾಡಿ ಜನರಿಗೆ ಲಭಿಸುವ ಕಾರ್ಯವನ್ನು ನಮ್ಮದೇ ಆದ 'ಶ್ರೀಗಿರಿ' ಪ್ರಕಾಶನದಿಂದ ಪ್ರಾರಂಭ ಮಾಡಿರುವೆ. ಅವರ "ವಚನೋದ್ಯಾನ" ವಚನ ಸಂಕಲನ ಎರಡನೇಯ ಮುದ್ರಣ 2000ರಲ್ಲಿ ಮೂರನೆಯ ಮುದ್ರಣ 2011ರಲ್ಲಿ ಮತ್ತು ಅವರ "ವಚನ ನಂದನ" ವಚನ ಸಂಕಲನ ಎರಡನೇಯ ಮುದ್ರಣ 2000ರಲ್ಲಿ ಪ್ರಕಟಿಸಿರುವೆವು.

ಅವರ 90ನೇ ಜನ್ಮ ವಾರ್ಷಿಕೋತ್ಸವ 2008ರಲ್ಲಿ ನಡೆಯಿತು. ಅಂದು ನಾವು ಪುರಾಣಿಕರ ಎಲ್ಲಾ ಕೃತಿಗಳನ್ನು ಸಮಗ್ರ ರೂಪದಲ್ಲಿ ತರಬೇಕೆಂದು ನಿರ್ಧರಿಸಿದೆವು. 2008ರಲ್ಲಿ "ಸಮಗ್ರ ಕಾವ್ಯ" 2009ರಲ್ಲಿ "ಸಮಗ್ರ ವಚನ" ಮತ್ತು 2010ರಲ್ಲಿ "ಸಮಗ್ರ ನಾಟಕ"ವನ್ನೂ ಪ್ರಕಟಿಸಿರುವೆವು.

ಮಕ್ಕಳ ಸಾಹಿತ್ಯ ಪುರಾಣಿಕರಿಗೆ ತುಂಬ ಪ್ರಿಯವಾದುದು. ಅವರ ಸಮಗ್ರ ಮಕ್ಕಳ ಸಾಹಿತ್ಯ ಕೃತಿ ತರುವ ಕಾರ್ಯ ಮಾರ್ಚ್ 2011ರಲ್ಲಿ ಡಾ. ಎಸ್. ವಿದ್ಯಾಶಂಕರ ರವರ ಮಾರ್ಗದರ್ಶನದಲ್ಲಿ ಪ್ರಾರಂಭ ಮಾಡಿದೆವು. ನನ್ನ ತಂಗಿಯಾದ ಶ್ರೀಮತಿ ಭಾರತಿ ಮೃತ್ಯುಂಜಯಪ್ಪ "ತುಪ್ಪಾ ರೊಟ್ಟಿ ಗೇ ಗೇ ಗೇ" ಕೃತಿ ದೊರಕಿಸಿ ಕೊಟ್ಟು ನೆರವಾದಳು. ಹಾಗೆಯೆ ನನ್ನ ಅಕ್ಕ ಶ್ರೀಮತಿ ವಿಜಯಾ ನಂದೀಶ್ವರ ಪ್ರೋತ್ಸಾಹಿಸಿದರು.

ಪುರಾಣಿಕರ ಮಕ್ಕಳ ಸಾಹಿತ್ಯವನ್ನು ಹಿಂದಿಯಲ್ಲೂ ಅನುವಾದಿಸಬೇಕೆಂದು ನಾವು ಹಿಂದಿ ಮತ್ತು ಕನ್ನಡ ಲೇಖಕರಾದ ಡಾ. ಟಿ.ಜಿ. ಪ್ರಭಾಶಂಕರ 'ಪ್ರೇಮಿ'ರವರಿಗೆ ಕೋರಿದಾಗ ಅವರು ಒಪ್ಪಿಕೊಂಡು ಸುಂದರವಾಗಿ ಅನುವಾದ ಮಾಡಿಕೊಟ್ಟಿದ್ದಾರೆ. ಅವರಿಗೆ ನಮ್ಮ ಅಂತಃಕರಣದ ಕೃತಜ್ಞತೆಗಳು. ಮಕ್ಕಳ ಪುಸ್ತಕಕ್ಕೆ ಒಳ್ಳೆಯ ಚಿತ್ರಗಳು ಬಹಳ ಮಹತ್ವದ್ದು. ಖ್ಯಾತ ಕಲಾವಿದ ಶ್ರೀ ಎಚ್.ಎಸ್. ಮೋನಪ್ಪನವರು ಈ ಪುಸ್ತಕಕ್ಕೆ ಸುಂದರವಾದ ಚಿತ್ರಗಳು ಮತ್ತು ಮುಖಪುಟ ವಿನ್ಯಾಸ ಕೊಟ್ಟಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳು. ಇದರ ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್, ಪುಟಗಳ ವಿನ್ಯಾಸ ಮಾಡಿದ ಶ್ರೀ ಕೃಷ್ಣಮೂರ್ತಿ ಇ.ಎಂ. ಅವರಿಗೆ ಮತ್ತು ಮುದ್ರಣ ಮಾಡಿದ ಸ್ನೇಹಾ ಪ್ರಿಂಟರ್ಸ್ ರವರಿಗೆ ವಂದನೆಗಳು. ಈ ಕಾರ್ಯದಲ್ಲಿ ನನ್ನೊಂದಿಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕರು ಸಮನಾಗಿ ದುಡಿದಿರುವರು.

ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ಮಕ್ಕಳಿಗೆ ಒಂದು ಒಳ್ಳೆಯ ಕೃತಿ ದೊರೆಯಿತೆಂದು ನಾವು ಭಾವಿಸಿದ್ದೇವೆ.

**ಪ್ರಸನ್ನ ಕುಮಾರ ಪುರಾಣಿಕ**

# ನನ್ನ ಕುದುರೆ



ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ ॥

ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥

ಚಂದಪ್ಪನಿಗೆ ಚಿಗರಿಯೆ ಕುದುರೆ
ಮಾದೇವನಿಗೆ ನಂದಿಯೆ ಕುದುರೆ
ರಾಮಚಂದ್ರನಿಗೆ ಹನುಮನೆ ಕುದುರೆ
ಹೊಟ್ಟೆಯ ಗಣಪಗೆ ಇಲಿಯೇ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥



ನಿಂತರೆ ನಿಲ್ಲುವ ಒಳ್ಳೆಯ ಕುದುರೆ
ಓಡಿದರೋಡುವ ನನ್ನಿಯ ಕುದುರೆ
ಕಾಡದ ಬೇಡದ ಕರುಳಿನ ಕುದುರೆ
ನೋಡಲು ಬಿಡದಿಹ ಬೆತ್ತದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥

ಅರಬರ ದೇಶದಿ ದೊರೆಯದ ಕುದುರೆ
ಕಾಠೇವಾಡದಿ ಕಾಣದ ಕುದುರೆ
ಅರಸು ಮಕ್ಕಳಿಗು ಸಿಕ್ಕದ ಕುದುರೆ
ನನಗೇ ಸಿಕ್ಕಿದೆ ನನ್ನೀ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ



# ಸರಪಳಿ

ಹಕ್ಕಿ ಹಕ್ಕಿ
ಎಂಥ ಹಕ್ಕಿ?
ಕೊಕ್ಕಿನ ಹಕ್ಕಿ
ಎಂಥ ಕೊಕ್ಕು?
ಡೊಂಕು ಕೊಕ್ಕು
ಎಂಥ ಡೊಂಕು?
ಬಾಳೆಯ ಡೊಂಕು
ಎಂಥ ಬಾಳೆ?
ರಸಬಾಳೆ
ಎಂಥ ರಸ?
ವೀರರಸ
ಎಂಥ ವೀರ?
ಭಾರತ ವೀರ

# ಬಾಲನ ಬಯಕೆ



ಗಗಾರಿನ್ ಕಾಯ್ದ
ಗಂಡಿನ ಮಾನ
ವೆಲೆಂಟೀನಾ
ಹೆಣ್ಣಿನ ಮಾನ
ನಾನು ಕಾಯುವೆನು
ಬಾಲರ ಮಾನ
ಕೊಡಿಸೌ ನನಗೆ ತರಬೇತು,
ನಾನೂ ಆಗುವೆ ಮನೆಮಾತು!

ಏನೋ ಎಂತೋ
ಎನ್ನದಿರು
ಮನದೊಳು ಸಂಶಯ
ತಾರದಿರು

ಮೀನಾ ಮೇಷಾ
ಮಾಡದಿರು
ಬೇಗನೆ ಕೊಡಿಸೌ ತರಬೇತು,
ನಾನೂ ಆಗುವೆ
ಮನೆಮಾತು!

ನಾನೂ ಕ್ಷಿಪಣಿಯ
ಹತ್ತುವೆನು
ಪೃಥ್ವಿಯ ಸುತ್ತಲು
ಸುತ್ತುವೆನು
ಬಾಲರ ಬಾವುಟ
ಎತ್ತುವೆನು
ತಡೆಯದೆ ಕೊಡಿಸೌ ತರಬೇತು
ನಾನೂ ಆಗುವೆ ಮನೆಮಾತು!

ದೂರದಿ ಹಾರುತ
ನಿನ್ನೊಡನೆ
ಮಾತಾಡುವೆನು
ನಿನ್ನಾಣೆ
ಕಳಿಸುವೆ ಚಂದ್ರನ
ಚಿತ್ರವನೆ
ಈಗಲೆ ಕೊಡಿಸೌ ತರಬೇತು,
ನಾನೂ ಆಗುವೆ ಮನೆಮಾತು!

ಬೇರೆಯ ಬಾಲರು
ಹೋದಾರು
ಮೊದಲಿನ ಮಾನವ
ಪಡೆದಾರು
ನಂತರ ಹೋದರೆ
ಕೇಳುವರಾರು?
ಈ ಕ್ಷಣ ಕೊಡಿಸೌ ತರಬೇತು,
ನಾನೂ ಆಗುವೆ ಮನೆಮಾತು!



# ಅ ಆ ಇ ಈ ಗೀತೆ

ಅಜ್ಜಿಯು ಕತೆಗಳ ಹೇಳಿದಳೆಂದರೆ
ಆಟದ ನೆನಪೂ ಹಾರುವದು

ಇಂದ್ರಜಾಲವೇ ಇಳಿಯುವದು
ಈಶ್ವರನೇ ನರರೂಪವ ತೊಟ್ಟು

ಉಂಬುವ ಜಂಗಮನಾಗುವನು
ಊಟಕೆ ಮಕ್ಕಳ ಕರೆಯುವನು

ಎಲ್ಲೆಲ್ಲಿಂದಲೊ ಯಾರೋ ಏನೋ
ಏನೇನೋ ಪಶು ಪಕ್ಷಿಗಳು

ಐರಾವತವೂ ಕಾಮಧೇನುವೂ
ಐತರುವವು ಸಡಗರದಿಂದ

ಒಮ್ಮೆಂದೊಮ್ಮೆಗೆ ರೆಕ್ಕೆಯ ಕುದುರೆಯು
ಓಡುತ ಬರುವುದು ಮುಗಿಲಿಂದ

ಔಡನು ಕಚ್ಚುತ ದೈತ್ಯರು ಬರುವರು
ಅಂಜಿಕೆ ಬರುವುದು ನಮಗೆಲ್ಲ!

ಆಃ ಆಃ ಅಜ್ಜಿ ಸಾಕು ಕತೆ
ಮುಗಿಯಿತು "ಅ ಆ ಇ ಈ" ಗೀತೆ



# ಸಿ ದ್ದಿ ದ್ದಿ ಬಾವಾ

ಕರಡಿಯ ತಕ ತಕ ಕುಣಿಸುತ ಬಂದನು
ಸಿ ದ್ದಿ ದ್ದಿ ಬಾವಾ ಬಾಲರ ಬಾವಾ ॥

ಬಾವಾ ಬಾವಾ ಬಾಲರ ಜೀವಾ
ಕರಡಿಯ ಕುಣಿಸುತ ಬಾಬಾ
ಊರಿನ ಮಕ್ಕಳ ಹಿಗ್ಗನು ಹೆಚ್ಚಿಸಿ
ಉಬ್ಬಿಸಿ ಹಾರಿಸಿ ಬಾಬಾ
ಬಾಬಾ ಬಾವಾ ಬಾಲರ ಜೀವಾ ॥

ಕರಡಿಯ ಕೊರಳೊಳು ಕವಡೆಯ ಸರವು
ಕಾಲಿನ ಗೆಜ್ಜೆಯ ನುಡಿಸುತ ಬಾ
ಎರಡೇ ಕಾಲಲಿ ನಿಲ್ಲಿಸಿ ನಡೆಸುತ
ನಮ್ಮನು ನಗಿಸಲು ಬಾಬಾ
ಬಾಬಾ ಬಾವಾ ಬಾಲರ ಜೀವಾ ॥

ಮೂಗಿನ ಮೇಗಡೆ ಮುಂಗಾಲಿರಿಸಿ
ಸಲಾಮು ಹೊಡೆಸಲು ಬಾಬಾ
ಮೈಯ ಕೂದಲನು ಪಟ ಪಟ ಜಾಡಿಸಿ
ನಮ್ಮನು ನಲಿಸಲು ಬಾಬಾ
ಬಾಬಾ ಬಾವಾ ಬಾಲರ ಜೀವಾ ॥

ಡಮ ಡಮ ಡಮರುಗ ಬಾರಿಸಿ ಬಾವಾ
ಊರಿಗೆ ಊರನೆ ಎಬ್ಬಿಸಿ ಬಾ
ವರುಷಕ್ಕೊಮ್ಮೆ ಕರಡಿಯ ಕುಣಿಸಿ
ನಮ್ಮನು ತಣಿಸಲು ಬಾಬಾ
ಬಾಬಾ ಬಾವಾ ಬಾಲರ ಜೀವಾ
ಕರಡಿಯ ಕುಣಿಸುತ ಬಾಬಾ॥



# ಮಂಗತನ

ಮಂಗತನ ಸಾಕೆಂದು ಅಪ್ಪ ಎಚ್ಚರಿಸುವನು
ಶಾಲೆಯಲಿ ಕಲಿಸುವುದೆ ಬೇರೆಯಾಗಿಹುದು
'ಮಾನವನ ಮುತ್ತಜ್ಜ ಮಂಗ'ನೆಂಬರು ಮೇಸ್ತ್ರು
ಅವರ ಮುಖವೇ ಇದಕೆ ಸಾಕ್ಷಿಯಾಗಿಹುದು ॥
'ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು?'
ಎಂದು ಹಾಡಿಯೆ ಪಾಠ ಪ್ರಾರಂಭಿಸುವೆವು!
ಹನುಮನೀ ನಾಡಿನಲಿ ಮಂಗತನ ಬೇಡವೆ?
ಬೇಕೆಂದೆ ಕಪಿತನವ ತೋರುತ್ತಲಿಹೆವು॥
ಸಂಜೆಯಾಗುತ್ತಲೇ ಎಣ್ಣೆ ಬತ್ತಿಯ ಕೊಂಡು
ಅಮ್ಮ ಹೋಗುವುದಿಲ್ಲೆ ಮಾರುತಿಯ ಗುಡಿಗೆ?
ಹೊಲದಿಂದ ಬರುವಾಗ ಎತ್ತುಗಳ ನಿಲ್ಲಿಸುತ
ಅಪ್ಪ ಬಾಗುವುದಿಲ್ಲೆ ಹನುಮಪ್ಪನಡಿಗೆ?
ಇಂಥ ಹನುಮನ ಗುಣವ ಕಲಿಯೆ ರೇಗುವನೇಕೊ
ಅಪ್ಪನೊಬ್ಬನೆ ಹುಬ್ಬು ಗಂಟಿಕ್ಕುತ?
ಯಾರ ಸಿಟ್ಟನೊ ತಂದು ಯಾರ ಮೇಲೆಯೊ ಹಾಕಿ
ಮಂಗತನ ಹಳಿಯುವುದೆ ಸಾಕೆನ್ನುತ?





# ಮಗುವಿನ ಮೊರೆ

ಚಂದ್ರಲೋಕದೊಳಿನ್ನು ಮನೆಯ ಕಟ್ಟುವರಂತೆ!
ಇರುವೊಬ್ಬ ಚಂದ್ರನನು ಅಂದಗೆಡಿಸುವರೆ?
'ಚಂದಮಾಮಾ' ಎಂದು ಕರೆವುದಾರನು ಅಮ್ಮ?
ಬಾಲರಾನಂದಕ್ಕೆ ಬರೆಯ ಕೊಡಿಸುವರೆ?
ಸಾಕಾಗದಾಯಿತೇ ಈ ಲೋಕ ಈ ಜನಕೆ?
ಏಕೆ ಚಂದ್ರನ ಬೆನ್ನು ಹತ್ತಿರುವರಮ್ಮ?
ಇಲ್ಲಿ ಸಲ್ಲದ ಜನರು ಅಲ್ಲಿ ಸಲ್ಲುವರೆಂತು?
ಇಷ್ಟು ಸಹ ಈ ಜನಕೆ ಗೊತ್ತಿರದೆ ಅಮ್ಮ?
ಚಂದ್ರನೇ ಮಸಕಾಗೆ ಮುಸುಕುವದು ಕತ್ತಲೆಯು,
ಬೆಳದಿಂಗಳಾಗುವುದು ಕನಸು ಕಾಣಮ್ಮ!
ಹುಣ್ಣಿವೆಯ ಹಿಗ್ಗಿರಲಿ, ಬೆಳದಿಂಗಳೂಟವೇ
ನಮಗಿಲ್ಲದಾಗುವದು! ಅಲ್ಲವೇನಮ್ಮ?
ಇದು ತಿಳಿಯದೇ ನಮ್ಮ ಈ ದಡ್ಡ ಜನಗಳಿಗೆ?
ನೀನಾದರೂ ಇದನು ತಿಳಿಸಿ ಹೇಳಮ್ಮ!
ಇವರ ಹುಚ್ಚಿಗೆ ಚಂದ್ರ ಬಲಿಯಾಗದಂದದಲಿ
ಏನಾದರೂ ಮಾಡಿ ಉಳಿಸಿಕೊಳ್ಳಮ್ಮಾ!



# ಕೊಡು ಖಡ್ಗವ ಕೈಗೆ

ಕೊಡು ಖಡ್ಗವ ಕೈಗೆ ತಾಯೆ
ಕೊಡು ಕೋವಿಯ ಕೈಗೆ!
ತೋರಿಸುವೆನು ನನ್ನಯ ಕೈ
ಆ ಚೌ-ಎನ್-ಲೈಗೆ
ಕೊಡು ಖಡ್ಗವ ಕೈಗೆ! ॥

ಅಭಿಮನ್ಯುವು ಈಗಿಲ್ಲವೆ
ಈಗಿಲ್ಲವೆ ಭರತ?
ಇಂದಿಲ್ಲವೆ ಲವ-ಕುಶರು?
ನಾನಿರುವೆನು ಮಾತಾ!

ಕೊಡು ಅಪ್ಪಣೆ ಗಡಿ ಯುದ್ಧಕೆ
ಜಯ ತರುವೆನು ತಾಯ್ಗೆ
ಕೊಡು ಖಡ್ಗವ ಕೈಗೆ!

ಹಿಮಗಿರಿಯಲಿ ಹೂಣರ ಪಡೆ
ಇದ ಸೈರಿಸಲಾರೆ!
ಚೀಣೀಯರ ಸೊಕ್ಕಿಳಿಸದೆ
ನಾ ನಿದ್ರಿಸಲಾರೆ!

ನಾ ಕಲಿಸುವೆ ಪಾಠವನು
ಆ ಹಳದಿಯ ನಾಯ್ಗೆ
ಕೊಡು ಖಡ್ಗವ ಕೈಗೆ!

ಮ್ಯಾಕ್ ಮೋಹನ್ ಗಡಿ ನನ್ನದು
ನನ್ನದು ಹಿಮಗಿರಿಯು!
ಈ ಗಿರಿಯನು ಕಬಳಿಪುದೆ
ಆ ಚೀಣದ ನರಿಯು?
ಇದೊ ಹೊರಟೆನು ಸಿಡಿಲಾಗಿ
ಪೀಕಿಂಗಿನ ಬಾಯ್ಗೆ
ಕೊಡು ಖಡ್ಗವ ಕೈಗೆ! ॥

ಹಾಲುಣಿಸಿದ ಕೈ ಕಚ್ಚಿದ
ಈ ಹಳದಿಯ ಹಾವ
ಸೀಳುವೆನು ಹೂಳುವೆನು
ತಡೆಯುವವ ನಿದ ನಾವ?
ಗರುಡನ ಮರಿ ಹೆದರುವುದೆ
ಇಲಿ ತಿನ್ನುವ ಹಾವ್ಗೆ?
ಕೊಡು ಖಡ್ಗವ ಕೈಗೆ! ॥

ನೀನುಣಿಸಿದ ಹಾಲಿನ ಋಣ
ತೀರಿಸುವೆನು ತಾಯೆ!
ಹಾರಿಸುವೆನು ಗೆಲವಿನ ಗುಡಿ
ಗಡಿಯಾಚೆಗೆ ತಾಯೆ!
ಹಗೆಯಳಿಯದೆ ಮಗ ಮರಳನು
ಮಿಂಚಳಿದಿದೆ ಮೈಗೆ
ಕೊಡು ಖಡ್ಗವ ಕೈಗೆ!



# ಆಟವಾಡ ಬನ್ನಿರಿ



ಆಟವಾಡ ಬನ್ನಿರಿ
ಪಾಠ ಮುಗಿಸಿ ಬನ್ನಿರಿ ॥

ತಿಳ್ಳಿ ಖೋಖೊ ಚೆಂಡು ಬುಗರಿ ಚಿಣಿಗಳಾಡ ಬನ್ನಿರಿ
ಗಾಳಿಯಲ್ಲಿ ತೇಲಿ ಬಿಡಲು ನೂಲು ಪಟವ ತನ್ನಿರಿ
ಸೋಲು ಗೆಲವು ಸವಿಯಿರಿ, ಬಿದ್ದು ಪೆಟ್ಟು ತಿನ್ನಿರಿ
ಆಟಕಾಗಿ ಆಟ ಹೇವ ಪಂಥಕಲ್ಲವೆನ್ನಿರಿ
ಆಟವಾಡ ಬನ್ನಿರಿ.... ॥

ನೆಳಲು ಬೆಳಕಿನಾಟವಾಡೆ ಎಳೆಯರೆಲ್ಲ ಬನ್ನಿರಿ
ಬಾಳಿದೊಂದು ನೆಳಲು ಬೆಳಕಿನಾಟವೆಂದು ಅನ್ನಿರಿ
ಬೆಳದಿಂಗಳು ಕುಡಿಯೆಬನ್ನಿ ಬಿಸಲ ಹಣ್ಣು ತಿನ್ನಿರಿ
ಆಟ ಪಾಟ ದುಡಿತಗಳಲಿ ಒಂದೆ ಒಲವ ತೋರಿರಿ
ಆಟವಾಡ ಬನ್ನಿರಿ.... ॥

ಕುಂಟುವಾಟ ಬೇಕೆ ನಿಮಗೆ? ಬೇಗ ಗೆರೆಯ ಬರೆಯಿರಿ
ಖೋಖೊ ಬೇಕೆ? ಕುಳಿತುಕೊಳ್ಳಿ, ಆಟ ಸಾಕೆ? ಸರಿಯಿರಿ!
ಗೋಲಿ ಗಜುಗ ಆಡಬೇಕೆ? ಚಿಕ್ಕ ಕುಣಿಯ ಕೊರೆಯಿರಿ
ಕಾಸುಕೂಡ ಕೈಯ ಬಿಡದ ಆಟವಾಡಿ ನಲಿಯಿರಿ
ಆಟವಾಡ ಬನ್ನಿರಿ.... ॥

ಕವಣೆಗಲ್ಲಿನಂತೆ ಬಿಟ್ಟ ಬಾಣದಂತೆ ಓಡಿರಿ
ಮರದ ರೆಂಬೆಗಳಿಗೆ ಜೋತು ಮಂಗನಾಟವಾಡಿರಿ
ಬಿದಿರ ಬಿಲ್ಲ ಹೆದೆಯ ಮಿಡಿದು ಸುಳ್ಳು ಯುದ್ಧ ಮಾಡಿರಿ
ಭರತ ಧ್ರುವರ ಬಳಗ ನಾವು ಎಂದು ಹಿಗ್ಗಿ ಹಾಡಿರಿ
ಆಟವಾಡ ಬನ್ನಿರಿ.... ॥

ನೆಗೆದು ಜಿಗಿದು ಬನ್ನಿರಿ, ತೂರಿ ಹಾರಿ ಬನ್ನಿರಿ
ಚಿಣಿಯ ಚಿಮ್ಮಿ ಬನ್ನಿರಿ, ಚೆಂಡು ಪುಟಿಸಿ ಬನ್ನಿರಿ
ಕೇಕೆ ಹಾಕಿ ಕೈಯ ತಟ್ಟಿ ಕುಣಿದು ತೊನೆದು ಬನ್ನಿರಿ
ಬರುವ ಪಂದ್ಯಗಳಲಿ ನಿಮ್ಮ ಮತಕೆ ಗೆಲವ ತನ್ನಿರಿ
ಆಟವಾಡ ಬನ್ನಿರಿ
ಪಾಠ ಮುಗಿಸಿ ಬನ್ನಿರಿ ॥

# ಚೆಂದಪ್ಪ ಚೆಂದಪ್ಪ ಚಾರೀ ಕಾಯಿ

ಚೆಂದಪ್ಪ ಚೆಂದಪ್ಪ ಚಾರೀ ಕಾಯಿ
ಬಟ್ಟಲ ತುಂಬ ಬಾರೀ ಕಾಯಿ ॥

ಚೆಂದಪ್ಪ ಚೆಂದಪ್ಪ ಚೆಲುವ
ಚುಂಗ ಬಿಟುಕೊಂಡು ಬರುವ
ಚಿಗರಿಯ ಮೇಲೆ ಬರುವ
ಹಬ್ಬ ಹೋಳಿಗೆ ತರುವ
ಹಿಟ್ಟು ಚೆಲ್ಲುತ ಬರುವ
ಹಾಲು ಹರಿಸುತ ಬರುವ
ಎಲ್ಲಿ ಹೋದರು ಇರುವ
ನಮ್ಮ ಜತೆಗೇ ಬರುವ
ಚೆಂದಪ್ಪ ಚೆಂದಪ್ಪ ಚಾರೀ ಕಾಯಿ
ಬಟ್ಟಲ ತುಂಬ ಬಾರೀ ಕಾಯಿ ॥





ಮುಗಿಲು ಮಣ್ಣಿನ ತಳಿಗೆ
ಚಂದ್ರ ಬೆಣ್ಣೆಯ ಗುಳಿಗೆ
ಬರುವೆ ನಿನ್ನಯ ಬಳಿಗೆ
ಬರುವೆ ಒಂದೇ ಗಳಿಗೆ
ಕರೆದುಕೊಳ್ಳೋ ಬಳಿಗೆ
ತರುವೆ ತುಪ್ಪ ಹೋಳಿಗೆ
ಚೆಂದಪ್ಪ ಚೆಂದಪ್ಪ ಚಾರೀ ಕಾಯಿ
ಬಟ್ಟಲ ತುಂಬ ಬಾರೀ ಕಾಯಿ ॥

ಬಿದಿಗೆ ಚಂದಿರ ಬೆಳೆಯಲಿ
ಬೆಳ್ಳಿಯಂತೆ ಹೊಳೆಯಲಿ
ಜನರ ತಾಪವ ಕಳೆಯಲಿ
ಮನದ ಪಾಪವ ತೊಳೆಯಲಿ
ಮೇಲಕೇರಲಿ ಇಳಿಯಲಿ
ಮತ್ತೆ ಮುಳುಗದೆ ಉಳಿಯಲಿ
ಚೆಂದಪ್ಪ ಚೆಂದಪ್ಪ ಚಾರೀ ಕಾಯಿ
ಬಟ್ಟಲ ತುಂಬ ಬಾರೀ ಕಾಯಿ ॥

# ತುಪ್ಪಾ ರೊಟ್ಟಿ ಗೇ ಗೇ ಗೇ!

ಮರದ ಕೊಂಬೆಯಲಿ ಕುಳಿತವಗೆ
ತುಪ್ಪಾ ರೊಟ್ಟಿ ಗೇ ಗೇ ಗೇ! ॥
ಮರದಿಂ ಮರಕ್ಕೆ ಹಾರುವನೆ
ಹಾರುತ ಹಲ್ಲನು ಕಿರಿವವನೆ
ಕಿರಿಯುತ ಮೈಯನು ಕೆರೆವವನೆ
ಕೆಂಜಿಗೆ ಮೋರೆಯ ಕಾಮನಿನೆ
ತುಪ್ಪಾ ರೊಟ್ಟಿ ಗೇ ಗೇ ಗೇ! ॥

ಸುಮ್ಮನೆ ಕಾಯ್ಗಳ ಕಡಿವವನೆ
ತೆಂಗಿನ ನೀರನು ಕುಡಿವವನೆ
ಕಿರ್ರ್ ಕಿರ್ರ್ ನುಡಿವವನೆ
ಬಾಲದ ಕೊಡೆಯನು ಹಿಡಿವವನೆ
ತುಪ್ಪಾ ರೊಟ್ಟಿ ಗೇ ಗೇ ಗೇ! ॥

ಟಣ್ಣನೆ ಹಾರುತ ಬರುವವನೆ
ತಿನಿಸನು ಕಸಿಯುತ ಓಡುವನೆ
ತೋರಿಸಿ ಅಣಕಿಸಿ ತಿನ್ನುವನೆ
ಉಳಿದುದ ಮೋರೆಗೆ ಎಸೆಯುವನೆ
ತುಪ್ಪಾ ರೊಟ್ಟಿ ಗೇ ಗೇ ಗೇ! ॥



# ದೋಸೆ



ದೋಸೆ ದೋಸೆ
ತಿನ್ನಲು ಆಸೆ ॥

ಮೂರು ಆಣೆಗೆ ಸಾದಾ ದೋಸೆ
ನಾಲ್ಕು ಆಣೆಗೆ ಮಸಾಲೆ ದೋಸೆ
ಐದು ಆಣೆಗೆ ಬೆಣ್ಣೆಯ ದೋಸೆ
ದೋಸೆ ದೋಸೆ–ತಿನ್ನಲು ಆಸೆ ॥

ಬೆಳಗಿನ ತಿಂಡಿಗೆ ಅಕ್ಕಿಯ ದೋಸೆ
ಹಗಲಿನ ಊಟಕೆ ರವೆಯ ದೋಸೆ
ಸಂಜೆಗೆ ಹೆಸರಿನ ಬೇಳೆಯ ದೋಸೆ
ದೋಸೆ ದೋಸೆ–ತಿನ್ನಲು ಆಸೆ ॥

ಹಸಿಯ ಕೊಬ್ಬರಿಯ ಚಟ್ನಿಯ ದೋಸೆ
ಬಟಾಟೆ ಪಲ್ಯೆಯ ಬಿಸಿ ಬಿಸಿ ದೋಸೆ
ಚಟ್ನಿ ಪಲ್ಯೆಯ ರುಚಿ ರುಚಿ ದೋಸೆ
ದೋಸೆ ದೋಸೆ–ತಿನ್ನಲು ಆಸೆ ॥



# ಹೊಗೆ ಬಂಡಿಯ ಹಾಡು

ಉಗಿ ಕಾರುತ
ಮಿಗೆ ಚೀರುತ
ಗಿರಿ ಏರುತ
ದರಿ ಇಳಿಯುತ
ತೊರೆ ದಾಟುತ
ಪುರ ದಾಟುತ
ನೆನೆಯುತ ಗುರಿ ಗೊತ್ತು
ಯಾರಾರನೊ ಹೊತ್ತು
ಬಂದಿಹೆ ನೀ ಹೊತ್ತು ॥

ಇದೊ ಬಡವರು
ಅದೊ ಒಡೆಯರು
ಇದೊ ಭಿಕ್ಷುಕ
ಅದೊ ಶಿಕ್ಷಕ
ಇದೊ ವರ್ತಕ
ಅದೊ ನರ್ತಕ
ಎಲ್ಲರಿಗೂ ಎಡೆಯಿತ್ತು
ಎಲ್ಲರನೂ ಹೊತ್ತು
ಬಂದಿಹೆ ನೀ ಹೊತ್ತು ॥



ದಿಬ್ಬಣಿಗರು
ತಬ್ಬಲಿಗಳು
ನಗುತಿರುವರು
ಅಳುತಿರುವರು
ಹೆಂಗಸರು
ಗಂಡಸರು
ಎಲ್ಲರಿಗೂ ಎಡೆಯಿತ್ತು
ಎಲ್ಲರನೂ ಹೊತ್ತು
ಬಂದಿಹೆ ನೀ ಹೊತ್ತು ॥

# ಇವರ ಬಿಟ್ಟು ಇವರ್ಯಾರು?

ಇವರ ಬಿಟ್ಟು ಇವರ ಬಿಟ್ಟು ಇವರ್ಯಾರು?
ಮೇಲಿನ ಓಣಿಯ ಮಾತಂಗಿಯೊ?
ಕೆಳಗಣ ಓಣಿಯ ಬಸಲಿಂಗಿಯೊ?
ನಡುವಿನ ಓಣಿಯ ಶಿವಗಂಗಿಯೊ?
ಮುಡದಾರ ಶಿಂಗಿ ಆ ತುಂಗಿಯೊ?
ಇವರ ಬಿಟ್ಟು ಇವರ ಬಿಟ್ಟು ಇವರ್ಯಾರು? ॥

ಮೂಲೆಯ ಮನೆಯ ಮೂಗಪ್ಪನೊ?
ಮೇಲಿನ ಮನೆಯ ನಾಗಪ್ಪನೊ?
ಗಚ್ಚಿನ ಮನೆಯ ಭೋಗಪ್ಪನೊ?
ಜಗುಲಿಯ ಮನೆಯ ಜೋಗಪ್ಪನೊ?
ಇವರ ಬಿಟ್ಟು ಇವರ ಬಿಟ್ಟು ಇವರ್ಯಾರು? ॥

ಉಡಾಳಟೊಪ್ಪ ಮಾನಪ್ಪನೊ?
ಮಾತಿನ ಮಲ್ಲ ಮೌನಪ್ಪನೊ?
ಬುದ್ಧಿಯ ವೈರಿ ಗ್ಯಾನಪ್ಪನೊ?
ಸಿಡುಕಿನ ಮರಿ ಸೀನಪ್ಪನೋ?
ಇವರ ಬಿಟ್ಟು ಇವರ ಬಿಟ್ಟು ಇವರ್ಯಾರು? ॥

ಹೋಗೊ ಬಸಲಿಂಗಿ ಬಾರೊ ಬಡೇಸಾಬ
ಹೋಗೊ ಮದರಂಗಿ ಬಾರೊ ಹೇಜೀಬ
ಹೋಗೊ ಹನುಮಂತ ಬಾರೊ ಅಲಿಬಾಬ
ಹೇಳು ಇವರಾರು? ಹೇಳದಿದ್ರೆ ಬೇಖೂಬ!
ಇವರ ಬಿಟ್ಟು ಇವರ ಬಿಟ್ಟು ಇವರ್ಯಾರು? ॥



# ಪ್ರಶ್ನೆ



ಸೂರ್ಯ ಮೂಡುತ್ತಲೇ ಎಬ್ಬಿಸುವ ಅಪ್ಪನು
ಸೂರ್ಯ ಮುಳುಗುತ್ತಲೇ ಮಲಗೆನ್ನಲೇಕೆ?

ತುಂಟತನ ಮಾಡಿದರೆ ಕಿವಿಯ ಹಿಂಡುವನಲ್ಲ
ಒಳ್ಳೆತನ ತೋರಿದರೆ ಭಲೆಯೆನ್ನನೇಕೆ?

ಜಗಳಾಡ ಬೇಡಿರೆಂದೆಮಗೆ ಬುದ್ಧಿಯ ಹೇಳಿ
ತಾನೆ ಅವ್ವನ ಕೂಡ ಜಗಳವಾಡುವನೇಕೆ?

ಆಟವಾಡುತಲಿರಲು "ಹೋಗಿ, ಓದಿರಿ" ಎಂದು
ತಾನೆ ಗೆಳೆಯರಕೂಡ ಹರಟೆ ಕೊಚ್ಚುವನೇಕೆ?



# ಹಣ್ಣು ಮಾರುವವನ ಹಾಡು

ನಂಜನಗೂಡಿನ ರಸಬಾಳೆ
ತಂದಿಹೆ ಕೊಡಗಿನ ಕಿತ್ತೇಳೆ
ಬೀದರ ಜಿಲ್ಲೆಯ ಸೀಬೆಯ ಹಣ್ಣು
ಬೆಂಗಳೂರಿನ ಸೇಬಿನ ಹಣ್ಣ
    ಕೊಳ್ಳಿರಿ ಹಿಗ್ಗನು ಹರಿಸುವವು
    ಕಲ್ಲು ಸಕ್ಕರೆಯ ಮರೆಸುವವು ॥

ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಲ ಬಯಲಿನ ಸಿಹಿಲಿಂಬೆ
ಬೆಳಗಾವಿಯ ಸವಿ ಸಪ್ಪೋಟ
ದೇವನ ಹಳ್ಳಿಯ ಚಕ್ಕೋತ
    ನಾಲಿಗೆ ಬರುವನು ಕಳೆಯುವವು
    ದೇಹದ ಬಲವನು ಬೆಳೆಸುವವು ॥

ಗಂಜಾಮ್ ಅಂಜೀರ್ ತುಮಕೂರ್ ಹಲಸು
ಧಾರವಾಡದ ಅಪೂಸು
ಮಲೆನಾಡಿನ ಅನನ್ನಾಸು
ಕೊಳ್ಳಿರಿ ಮರೆತು ಸಿಹಿ ತಿನಿಸು
    ಸವಿಯಿರಿ ಬಗೆ ಬಗೆ ಹಣ್ಣುಗಳ
    ಕನ್ನಡನಾಡಿನ ಹಣ್ಣುಗಳ!



# ಬುಡಬುಡಕಿ



ದೇವ ದೇವನಾ
ದೇವರ ಮಗನು
ದೇವ ಲೋಕದಾ
ಬುಡ ಬುಡಕಿ ನಾನು
ನನಗೊಂದು ರೊಟ್ಟಿ
ಕೊಡಿರೆಮ್ಮ ತಂಗಿ
ನಿಮಗೊಳ್ಳೆಯ ಗಂಡ
ದೊರಿತಾನೆ ॥

ದೇವ ಲೋಕದಾ
ಬುಡ ಬುಡಕಿ ನಾನು

ಹೇಳುವೆ ನಿಮ್ಮ ಹಿಂದಿನ ಕತೆಯ
ಹೇಳುವೆ ನಿಮ್ಮ ಇಂದಿನ ಕತೆಯ
ಹೇಳುವೆ ನಿಮ್ಮ ಮುಂದಿನ ಕತೆಯ
ನನಗೊಂದು ರೊಟ್ಟಿ ಕೊಡಿರೆಮ್ಮ ತಂಗಿ
ನಿಮಗೊಳ್ಳೆಯ ಮಗ ಹುಟ್ತಾನೆ ॥

ಹಿಂದೆ ಹೋದುದಕೆ ಹಳ ಹಳಿ ಬೇಡ
ಇಂದು ಇರುವುದಕೆ ಕಳವಳ ಬೇಡ
ಮುಂದೇನೋ ಎಂದು ತಳಮಳ ಬೇಡ
ನನಗೊಂದು ಬಟ್ಟೆ ಕೊಡಿರೆಮ್ಮ ತಂಗಿ
ನಿಮಗೊಳ್ಳೆಯ ಸೊಸೆಯು ಸಿಗ್ತಾಳೆ ॥

ಬಂದುದನ್ನು ಬೇ ಡೆ ನ್ನ ದಿ ರಿ
ಬಾರದುದೇ ಬೇ ಕೆ ನ್ನ ದಿ ರಿ
ದಾನ ಧರ್ಮ ಸಾ ಕೆ ನ್ನ ದಿ ರಿ
ನನಗೊಂದು ತಟ್ಟೆ ಕೊಡಿರಮ್ಮ ತಂಗಿ
ನಿಮಗೊಳ್ಳೆಯ ಮೊಮ್ಮಗ ಬರತಾನೆ ॥

# ಚು ಟ ಕ ಗ ಳು

ಅಪ್ಪ ಹೇಳುವ ರೀತಿ
ಮೇಸ್ಟ್ರು ಹೇಳ್ವರು ನೀತಿ
  ನನಗೆ ಮಾತ್ರ
  ಬೇಕು ಅಮ್ಮ
ತೋರುತಿರುವ ಪ್ರೀತಿ

ಅಪ್ಪ ಕೂಗಲು ಎದ್ದೆ
ಮುಗಿದಿರಲಿಲ್ಲ ನಿದ್ದೆ
  ಎದ್ದು ಮುಂದೆ
  ಸಾಗುತಿರಲು
ತೂಕಡಿಸುತ್ತ ಬಿದ್ದೆ

* * *

ಮಳೆ ಬಂತು ರಪರಪ
ತೊಯಿಕೊಂಡೆ ತಪತಪ
  ಮನೆಗೆ ಬರಲು
  ಮರುಗುವ ಬದಲು
ಅಪ್ಪ ಹೊಡೆದ ಧಪಧಪ

ನೀರಿನಲ್ಲಿ ಮೀನು
  ಹಿಡಿಯ ಹೋಗಿ ನಾನು
  ತಂದೆನೇನು?
  ಹೇಳಲೇನು–
  ಶೀತ ನೆಗಡಿ ಸೀನು!

* * *

ಅಕ್ಕಗೆ ಬೇಕು ಚೆಕ್ಕ
ಅಣ್ಣಗೆ ಬೇಕು ರೊಕ್ಕ
  ತಂಗಿಗೆ ಸಾಕು
  ನನಗೂ ಸಾಕು
ಪಾತರಗಿತ್ತಿ ಪಕ್ಕ

'ಓದು' ಎಂದರೆ ಬೇಸರ
'ಬರೆ' ಎಂದರೆ ಕೇಸರ
  ಆಡು, ಓಡು,
  ಕುಣಿ, ಹಾಡು
  ಎನ್ನೆ ಹಾಲು ಕೇಶರ



# ಕತ್ತೆಯ ಗತ್ತು... ಕೊನೆಗೆ ವಿಪತ್ತು

ಒಂದು ಊರಿನಲ್ಲಿ ಒಬ್ಬ
ಉಪ್ಪು ಮಾರುವವನು
ಕತ್ತೆ ಸಾಕಿ ಅದರ ಮೇಲೆ
ಉಪ್ಪು ಹೇರುತ್ತಿದ್ದನು ॥

ಹಾದಿಯಲ್ಲಿ ಹಳ್ಳ ದಾಟಿ
ಬೇರೂರಿಗೆ ಹೋಗಿ
ಉಪ್ಪು ಮಾರಿ ಮರಳುತಿದ್ದ
ಕೊಂಡು ಬೇಳೆ ರಾಗಿ ॥

ಒಂದು ದಿವಸ ಹಳ್ಳದಲ್ಲಿ
ಬರಲು ಹೆಚ್ಚು ನೀರು
ಕತ್ತೆ ಹೊತ್ತ ಉಪ್ಪು ತೊಯ್ದು
ಹಗುರಾಯಿತು ಹೇರು ॥

ಕತ್ತೆಯಿದನು ತಿಳಿದು ಮುಂದೆ
ಮಾಡಿತೊಂದು ಗತ್ತು
ಹಳ್ಳ ಬರಲು ನೀರಿನಲ್ಲಿ
ಮುಳುಗಿ ಏಳುತಿತ್ತು ॥



ಉಪ್ಪು ಕರಗಿ ಹೇರು ಹಗುರ–
ವಾಗುತಿತ್ತು ಅದಕೆ
ಉಪ್ಪಿನವಗೊ ಹಾನಿ ಹೆಚ್ಚು–
ತಿತ್ತು ದಿನಕೆ ದಿನಕೆ ॥

ಇದನು ಕಂಡು ಉಪ್ಪಿನವನು
ಒಮ್ಮೆ ಉಪ್ಪು ಬಿಟ್ಟು
ಸುಣ್ಣಕಲ್ಲ ಹೇರಿ ಬಿಟ್ಟ
ಭಟ್ಟಿಯಲ್ಲಿ ಸುಟ್ಟು ॥

ಎಂದಿನಂತೆ ಕತ್ತೆ ನೀರಿ–
ನಲ್ಲಿ ಮುಳುಗಿ ಎದ್ದಿತು
ಸುಣ್ಣಕಲ್ಲು ಕುದಿಯ ತೊಡಗೆ
ಮತ್ತೆ ಜಲದಿ ಬಿದ್ದಿತು ॥

ಕತ ಕತ ಕತ ಕುದಿದುವಣ್ಣ
ಸುಣ್ಣಕಲ್ಲು ಬೆನ್ನಲಿ
ತಕ ಪಕ ತಕ ಕುಣಿಯಿತಣ್ಣ
ಕತ್ತೆ, ಏನ ಹೇಳಲಿ! ॥

ಉಪ್ಪಿನವಗೆ ಕರುಣೆ ಬಂತು
ಕೋಲಿನಿಂದ ಹೇರನು
ಕೆಡವಿಬಿಟ್ಟ, ಕತ್ತೆಯೊಡನೆ
ಸೇರಿಕೊಂಡ ಊರನು ॥

ಅಂದಿನಿಂದ ಮುಂದೆ ಕತ್ತೆ
ತನ್ನ ಕಳ್ಳ ಗತ್ತು
ಬಿಟ್ಟಿತಣ್ಣ ಬುದ್ಧಿ ಬಂದು
ಗತ್ತು ಕೊನೆಗೆ ವಿಪತ್ತು ॥



# ಶಾಲೆಯೆ ವನ

ನಮ್ಮಯ ಶಾಲೆಯ ಕೈತೋಟದಲಿ
ನಾನೇ ಬೆಳೆಸಿಹೆ ಸಸಿಯೊಂದ
ನಾನೇ ನೀರನ್ನೆರೆಯುವೆ ದಿನದಿನ
ಏನು ಹೇಳಲಿ ಅದರಂದ
ದಿನ ದಿನ ಎತ್ತರ ಬೆಳೆಯುತಲಿರುವುದು
ದಿನವೂ ಒಂದೆಡೆ ಚಿಗುರುವುದು
ಇನ್ನೇನೆರಡೇ ವಾರಗಳಲ್ಲಿ
ನನ್ನಷ್ಟೆತ್ತರವಾಗುವುದು ॥

ಗುರುಗಳು ಹೇಳುವರೆಳೆಯರು ಬೆಳೆಯುವ
ಸಸಿಗಳು, ಶಾಲೆಯೆ ವನವೆಂದು
ಇದರ ಗುರುತಿಗೆ ಬೆಳೆಯುತಲಿಹುದು
ಶಾಲೆಯ ಸುತ್ತಲು ಬನವೊಂದು ॥

ಶಾಲೆಯ ಒಳಗೆ ಬಾಲರು ಬೆಳೆಯಲಿ
ತಮ್ಮ ತಮ್ಮೊಳಗೆ ಹೆಣಗದಲೆ
ಬೆಳೆಯಲಿ ಹೊರಗೆ ಶಾಲೆಯ ವನವು
ಒಂದೂ ಸಸಿಯೂ ಒಣಗದಲೆ

ಹೂಗಳು ಬಿಟ್ಟರೆ ದೇವರಿಗೇರಿಸಿ
ವಿದ್ಯಾ ಬುದ್ಧಿಯ ಬೇಡುವೆವು
ಹಣ್ಣುಗಳಾದರೆ ಎಲ್ಲರು ಸೇವಿಸಿ
ಹರುಷದಿಂದ ಕುಣಿದಾಡುವೆವು ॥



# ಗಿಲ್ ಗಿಲ್ ಗಿಲ್ ಗಿಲ್ ಗಿಲಗಚ್ಚಿ

ಗಿಲ್ ಗಿಲ್ ಗಿಲ್ ಗಿಲ್
ಗಿಲಗಚ್ಚಿ
ಕೊಡುವೆನು ಬಾರೇ
ಪಾಪಚ್ಚಿ
ಬಂದೆಯಾದರೆ
ಒಪ್ಪಚ್ಚಿ

ದೊರೆವುದು ನಿನಗೆ
ಅಪ್ಪಚ್ಚಿ

ಗಿಲ್ ಗಿಲ್ ಗಿಲ್ ಗಿಲ್
ಗಿಲಗಚ್ಚಿ
ಕೊಡುವೆನು ಬಾರೇ
ಪಾಪಚ್ಚಿ

ತಾಳದ ಗರಿಯಲಿ
ಹೆಣೆದಿಹುದು
ಹರಳು ಹವಳಗಳ
ತಳೆದಿಹುದು

ಹಿಡಿಕೆಗೆ ಬಣ್ಣದ
ಬೇಗಡೆ ಹಚ್ಚಿ
ಮಾಡಿದ ಸೊಬಗಿನ
ಗಿಲಗಚ್ಚಿ

ಗಿಲ್ ಗಿಲ್ ಗಿಲ್ ಗಿಲ್
ಗಿಲಗಚ್ಚಿ
ಕೊಡುವೆನು ಬಾರೇ
ಪಾಪಚ್ಚಿ



# ನೀನು ನಕ್ಕು ಜಗವ ನಗಿಸು

ನೀನು ನಕ್ಕು ಜಗವ ನಗಿಸು
ನಕ್ಕ ಮುಖವು ಅರಳಲಿ
ಮೋರೆ ಗಂಟು ಹಾಕುವಂಥ
ಚಾಳಿ ದೂರ ತೆರಳಲಿ

ನೀನು ನಗಲು ನಿನ್ನ ಕೂಡ
ಎಲ್ಲ ಜನರು ನಗುವರು
ನಿನ್ನ ಜೊತೆಗೆ ಅಳಲು ಮಾತ್ರ
ಯಾರೊಬ್ಬರು ದೊರೆಯರು

ಸೃಷ್ಟಿಯಲ್ಲಿ ಸರ್ವವೂ
ನಗುತಲಿಹವು ಗೆಳೆಯನೆ
ಹೂವು ಹಕ್ಕಿ ಚಂದ್ರ ಚಿಕ್ಕೆ
ನಗುವುವೆಲ್ಲ ಕೆಳೆಯನೆ

ನಕ್ಕು ನಲಿದು ಹಾಡಿ ಕೆಲೆದು
ಹಿಗ್ಗಿನೊಡನೆ ಬಾಳಲು
ಕಲಿಯಬೇಕು ಗೆಳೆಯ ಕಷ್ಟ-
ನಷ್ಟಗಳನು ತಾಳಲು

ನಗೆಮಲ್ಲಿಗೆ ಬಾಡದಿರಲಿ
ಮೊಗದ ಮೇಲೆ ಸೋದರ
ನಗುವ ಮೊಗವೆ ಜಗದ ಜನದಿ
ಹೆಚ್ಚಿಸುವುದು ಆದರ







# ಬಣ್ಣದ ಗರಿ



ಬಣ್ಣದ ಗರಿಯಿದು
ಮಣ್ಣೊಳು ದೊರೆಯಿತು
ಅಣ್ಣಗೆ ಆಟದಿ ನೋಡಮ್ಮ

ಚಿಣ್ಣರ ಚೆಣ್ಣರ
ಕಣ್ಣನು ತಣಿಸುವ
ಬಣ್ಣಗಳೆಂತಿವೆ ನೋಡಮ್ಮ

ಹೊಳೆಯುವ ದೇಟು
ಎಳೆಗಳ ಥಾಟು
ಥಳಥಳ ಹೊಳೆಯುವ ಬಣ್ಣಗಳಮ್ಮ

ಚೆಲುವಿನ ಚವರಿ
ಒಲವಿನ ಈ ಗರಿ
ನಲವಿನ ಚಿಲುಮೆಯು–ಅಲ್ಲೇನಮ್ಮ

ನಡುವಿದೆ ಬೊಟ್ಟು
ಕೊನೆಗಿದೆ ಜುಟ್ಟು
ಸುತ್ತಲು ಝುಲ್ಲರಿ ಹೇಗಿವೆಯಮ್ಮ

ತಲೆಗಿದೆ ಕಟ್ಟು
ಕೊಳಲನು ಕೊಟ್ಟು
ನಾನೂ ಕೃಷ್ಣನೆ ಆಗುವೆನಮ್ಮ

ಗೋಪಿಯ ಬೇಡದ
ಯಾರನು ಕಾಡದ
ನಂದಕಿಶೋರ ನಾನಾಗುವೆನಮ್ಮ

ಬೆಣ್ಣೆಯ ಕದಿಯದ
ಮಾವನ ಸದೆಯದ
ಮುರಲೀ ಮೋಹನನಾಗುವೆನಮ್ಮ

ಬಣ್ಣದ ಗರಿಯಿದು
ಮಣ್ಣೊಳು ದೊರೆಯಿತು
ಅಣ್ಣಗೆ ಆಟದಿ ನೋಡಮ್ಮ



# ಗೆಳೆಯರ ಊಟಕೆ ಕರೆಯುವೆನಮ್ಮ

ಗೆಳೆಯರ ಊಟಕೆ ಕರೆಯುವೆನಮ್ಮ
ತರತರದಡಿಗೆಯ ಮಾಡಮ್ಮ
ಒಬ್ಬರ ರುಚಿ ಇನ್ನೊಬ್ಬರಿಗಿಲ್ಲವು
ಏನು ಬೇಡಿದರು ನೀಡಮ್ಮ

ಉತ್ತರ ಕರ್ನಾಟಕದ ಗೆಳೆಯರಿಗೆ
ಹೋಳಿಗೆ ಕರಜೀಕಾಯಿ
ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ
ಎಣ್ಣೆ ಬದನೆಕಾಯಿ

ಮೆಂತೆಯ ಪಲ್ಯ ಸೌತೆ ಟೊಮಾಟೊ
ಮೂಲಂಗಿಯ ಪಚ್ಚಡಿ
ಅಗಸಿಯ ಚಟ್ನಿ ಕೆನೆಕೆನೆ ಮೊಸರು
ಬಿಳಿ ಜೋಳದ ಕಿಚ್ಚಡಿ

ದಕ್ಷಿಣ ಕರ್ನಾಟಕದ ಗೆಳೆಯರಿಗೆ
ಪೇಣಿ ಚಿರೋಟಿ ಕೀರು
ಇಡ್ಡಲಿ ಸಾಂಬರು ಮಸಾಲೆ ದೋಸೆಯು
ಮುದ್ದಿ ಅನ್ನ ತಿಳಿಸಾರು

ಪುಳಿಯೋಗರ ಬಿಸಿಬೇಳೆ ಭಾತು
ಕೇಸರಿಯ ಭಾತು ಕ್ಷೀರಾನ್ನ

ಕೊಬ್ಬರಿತುರಿ ಬೆರೆಸಿದ ಕೋಸಂಬರಿ
ಬಜ್ಜಿ ಗೊಜ್ಜು ಮೊಸರನ್ನ

ಕೊಡವ ಗೆಳೆಯನಿಗೆ ತಳಿಯ ಪುಟ್ಟು
ಕೇರಳದ ಗೆಳೆಯನಿಗೆ ಆಡು

ಯಾರು ಯಾರಿಗೆ ಏನು ಇಷ್ಟವೋ
ಅದನೆ ಅವರಿಗೆ ನೀಡು

ಎಲ್ಲರು ಉಂಡು ಕೈತೊಳಕೊಂಡು
ಕುಣಿವೆವು ಸುತ್ತಲು ನಿನ್ನ

ಕೊಂಡಾಡುವೆವು ಮುಂಡಾಡುವೆವು
ಹಾಡಿ ಹೊಗಳುವೆವು ನಿನ್ನ

ನನ್ನಯ ತಾಯಿ ಎಲ್ಲರ ತಾಯಿ
ಆಗಿ ಉಣಿಸುವಳು ನಾಳೆ

ಎಳೆಯರು ನಾವು ಗೆಳೆಯರು ಇಂದು
ಅಣ ತಮ್ಮದಿರು ನಾಳೆ



# ಮಜಾ ಅಂದ್ರೆ ಮಜಾ

ಸಾಲೆಗೆ ಇಂದು ರಜಾ
ಓದು ಬರಹಾ ವಜಾ
ಮಜಾ ಅಂದ್ರೆ ಮಜಾ

ಆಟದ ಬಯಲಿಗೆ
ಓಡೋಣ
ಗುಂಡೂ ಗಜುಗಾ
ಆಡೋಣ
ಜಗಳಾಡೋಣ
ಕೂಡೋಣ
ಮಕ್ಕಳ ಪದಗಳ
ಹಾಡೋಣ

ಸಾಲೆಗೆ ಇಂದು ರಜಾ
ಓದು ಬರಹಾ ವಜಾ
ಮಜಾ ಅಂದ್ರೆ ಮಜಾ

ಕೆರೆಗೋ ಭಾವಿಗೊ
ಹೋಗೋಣ
ಈಸುವ ಹಂಸಗ–
ಳಾಗೋಣ

ಮೂಗನು ಹಿಡಿದು
ಮುಳುಗೋಣ
ಏಳುತ ಮನೆಗೆ
ಸಾಗೋಣ

ಸಾಲೆಗೆ ಇಂದು ರಜಾ
ಓದು ಬರಹಾ ವಜಾ
ಮಜಾ ಅಂದ್ರೆ ಮಜಾ

ತೋಟಕೆ ಊಟಕೆ
ಹೋಗೋಣ

ಉಂಡು ಹಿಗ್ಗಿನಲಿ
ಕೂಗೋಣ

ಟೊಂಗೆಯ ಹಿಡಿದು
ತೂಗೋಣ
ಬಾಲ ಹನುಮರು
ಆಗೋಣ

ಸಾಲೆಗೆ ಇಂದು ರಜಾ
ಓದು ಬರಹಾ ವಜಾ
ಮಜಾ ಅಂದ್ರೆ ಮಜಾ



# ಓ ಮೋಡ ಓಡಿ ಬಾರ!

ಓ ಮೋಡ ಓಡಿ ಬಾರ,
ನಮ್ಮೂರ ನೋಡು ಬಾರ!

ಓ ಮೋಡ ಓಡಿ ಬಾರ
ನಮ್ಮೊಡನೆ ಆಡು ಬಾರ
ನಮ್ಮೊಡನೆ ಹಾಡು ಬಾರ



ಓ ಮೋಡ ಓಡಿ ಬಾರ,
ನಮ್ಮೂರ ನೋಡು ಬಾರ!

ನೀನಾಗು ನಮ್ಮ ತೇರು
ನವ ಖಂಡಗಳನು ತೋರು
ನಮ್ಮೂರ ಮತ್ತೆ ಸೇರು

ಓ ಮೋಡ ಓಡಿ ಬಾರ,
ನಮ್ಮೂರ ನೋಡು ಬಾರ!

ನೀನಾಗು ನಮ್ಮ ನೌಕೆ
ಕರೆದೊಯ್ಯಿ ಕಡಲ ಕುಲಕೆ
ಮರಳಿ ಬಿಡು ನಮ್ಮ ಸ್ಥಳಕೆ

ಓ ಮೋಡ ಓಡಿ ಬಾರ,
ನಮ್ಮೂರ ನೋಡು ಬಾರ!

ನೀನಾಗು ನಮ್ಮ ಕ್ಷಿಪಣಿ
ಗ್ರಹದಿಂದ ಗ್ರಹಕೆ ಪಯಣ
ಅದು ಮುಗಿಯೆ ನಮ್ಮ ತಾಣ

ಓ ಮೋಡ ಓಡಿ ಬಾರ,
ನಮ್ಮೂರ ನೋಡು ಬಾರ!

# ಕಾರ ಮಳೆಯೆ ಕಪ್ಪತ್ತ ಮಳೆಯೆ



ಕಾರ ಮಳೆಯೆ ಕಪ್ಪತ್ತ ಮಳೆಯೆ
ಬೇಗನೆ ಬಾರೋ ಸುರಿಮಳೆಯೆ
ಸುರಿಮಳೆಯೇ ಬಿರುಮಳೆಯೇ
ಗರ್ಜಿಸಿ ಬಾರೋ ಮರಮಳೆಯೇ!
ಒಣಗಿವೆ ಹೊಲಗಳು, ಬತ್ತಿವೆ ಗದ್ದೆ
ತಡೆಯದೆ ಬಾರೋ ಜಡಿಮಳೆಯೆ
ಮುರುಟಿವೆ ತೋಟ, ಸುರುಟಿವೆ ಕಾಡು
ತಳುವದೆ ಬಾರೋ ನಿಡುಮಳೆಯೆ
ಕುಡಿಯಲು ನೀರು ತಿನ್ನಲು ಹುಲ್ಲು
ಸಾಲದೆ ಪಶುಗಳು ಸೊರಗಿಹವು
ಹಣ್ಣುಗಳಿಲ್ಲದ ಹೂವುಗಳಿಲ್ಲದೆ
ಗಿಡಗಳು ಅಳಿಗಳು ಕೊರಗಿಹವು

ಜಳಕವ ಮಾಡಲು ಬಟ್ಟೆಯ ತೊಳೆಯಲು
ಊರಲಿ ನೀರೇ ಸಾಲುವುದಿಲ್ಲ
ಗುಡಿಯಲಿ ಈಶ್ವರ ಮಿಂದೇ ಇಲ್ಲ
ಹನುಮಪ್ಪನಿಗೆ ಮಜ್ಜನವಿಲ್ಲ

ಬಾರೋ ಮಳೆಯೆ, ಎಲ್ಲರ ಕಳೆಯೆ,
ಎಲ್ಲಾ ಸೊಗಸಿನ ಸೆಲೆಯೆ
ಮಕ್ಕಳ ಮಾತನು ಕೇಳದೆ ಹೋದರೆ
ನಿನಗೂ ಕೇಡಿದೆ ಎಲೆ ಮಳೆಯೆ

ಯಾರ ಮಾತನೂ ಕೇಳದ ನೀನು
ಮಕ್ಕಳ ಮಾತನು ಕೇಳುತಿರು
ಕರೆದು ಕೊಳ್ಳುವೆವು ಆಟಕೆ ನಿನ್ನನು
ನಮ್ಮ ಮಾತುಗಳ ಕೇಳುತಿರು



# ಕುರಿಮರಿ ಬೇಕೇ ಕುರೀಮರಿ?

ಕುರಿಮರಿ ಬೇಕೇ ಕುರೀಮರಿ?
ಕಂಡರೆ ಬಿಡದಿಹ ಕುರೀಮರಿ

ಜಾಣಮರಿ ಮುದ್ದುಮರಿ
ಪುಟ್ಟಮರಿ ದಿಟ್ಟಮರಿ
ಕುರಿಮರಿ ಬೇಕೇ ಕುರೀಮರಿ?

ಕೂಲೂ ಕಣಿವೆಯ ಕುರೀಮರಿ
ಬನ್ನೂರ್ ಬಂದೂರ್ ಕುರೀಮರಿ
ಮರೀನೋ ಕಾರಿಡೇಲ್ ಮೀರಿದ ತಳಿಯಲಿ
ಹುಟ್ಟಿದ ಹೆಮ್ಮೆಯ ಕುರೀಮರಿ
ಕುರಿಮರಿ ಬೇಕೇ ಕುರೀಮರಿ?

ಎರಡೇ ಕಾಲಿನ ಕುರೀಮರಿ
ಸವಿ ಮಾತಾಡುವ ಕುರೀಮರಿ
ಉಣ್ಣೆಯೆ ಇಲ್ಲದ ನುಣ್ಣನೆ ಮೈಯ
ಕಣ್ಣನು ಸೆಳೆಯುವ ಕುರೀಮರಿ
ಕುರಿಮರಿ ಬೇಕೇ ಕುರೀಮರಿ?

ಹುಲ್ಲನೆ ತಿನ್ನದ ಕುರೀಮರಿ
ಬ್ಯಾ ಬ್ಯಾ ಎನ್ನದ ಕುರೀಮರಿ
ಕರೆದರೆ ಸಾಕು ಬೆನ್ನನು ಏರುವ
ಕರೆಕರೆ ಮಾಡುವ ಕುರೀಮರಿ
ಕುರಿಮರಿ ಬೇಕೇ ಕುರೀಮರಿ?

ಆಡುವ ಹಾಡುವ ಕುರೀಮರಿ
ಕಾಡುವ ಬೇಡುವ ಕುರೀಮರಿ
ತೋಳನ ಅಂಜಿಕೆ ಕುರುಬನ ಹಂಗು
ಎರಡೂ ಇಲ್ಲದ ಕುರೀಮರಿ
ಕುರಿಮರಿ ಬೇಕೇ ಕುರೀಮರಿ?

ಜಾಣಮರಿ ಮುದ್ದುಮರಿ
ಪುಟ್ಟಮರಿ ದಿಟ್ಟಮರಿ
ಕುರಿಮರಿ ಬೇಕೇ ಕುರೀಮರಿ?



# ಮಿಠಾಯಿ ಮಕ್ಕಳೇ

ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಳೆ
ಬಿಟ್ಟರೆ ಮತ್ತಿವು ಸಿಗಲಿಕ್ಕಿಲ್ಲ
ಇವುಗಳ ಬೆಲೆಯೂ ಹೆಚ್ಚಿಲ್ಲ
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಳೆ

ಗೋಕಾಕದ ಕರಿದಂಟು
ರಾಜಧಾನಿಯ ಪೆಪ್ಪರಮೆಂಟು
ಬೆಳಗಾವಿಯ ಕುಂದ
ಹೈದರಾಬಾದಿನ ಕಲಕಂದ
ಬಾಯೊಳು ನೀರನು ಬರಿಸುವುವು
ಕೈಯೊಳು ಕಾಸನು ತರಿಸುವುವು
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಳೆ

ಬಿಟ್ಟರೆ ಮತ್ತಿವು ಸಿಗಲಿಕ್ಕಿಲ್ಲ
ಇವುಗಳ ಬೆಲೆಯೂ ಹೆಚ್ಚಿಲ್ಲ
ಧಾರವಾಡದ ಪೇಡೆ
ಬೆಂಗಳೂರಿನ ಪೇಣಿ
ಉತ್ತರದೇಶದ ಬರ್ಫಿ
ಚೌಪಾಟಿಯ ಕುಲ್ಫಿ
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಳೆ

ಬಿಟ್ಟರೆ ಮತ್ತಿವು ಸಿಗಲಿಕ್ಕಿಲ್ಲ
ಇವುಗಳ ಬೆಲೆಯೂ ಹೆಚ್ಚಿಲ್ಲ



# ಹತ್ತಿಯ ಹೊಲದಲಿ

ಹತ್ತಿಯ ಹೊಲದಲಿ ಬಿಳಿಜೋಳದ ತೆನೆ
ಬಾಗುತ ಕರೆಯುತಿವೆ
ಹಾಲು ತುಂಬಿರುವ ಎಳೆಬೆಳಸಿಯ ಕೋ
ಎನ್ನುತ ಒರೆಯುತಿವೆ

ರವದಿಗೆ ರವದಿಗೆ ಸಕ್ಕರೆ ಪೆಂಟೆ
ಔತಣ ನೀಡುತಿದೆ
ಸಿಗುರನು ಸುಲಿದರೆ ಸವಿಕಬ್ಬೆನ್ನುತ
ದಂಟದು ಹಾಡುತಿದೆ

ಸಿಪ್ಪೆಯು ಸೋಗೆಯು ನನಗಿರಲೆನ್ನುತ
ಹೋರಿಯು ಹಾರುತಿದೆ
ಉಳಿದಿಹ ಸಕ್ಕರೆ ನಮಗಿರಲೆನ್ನುತ
ಇರುವೆಗಳೇರುತಿವೆ

ಎಲ್ಲವ ಕೇಳಿದ ಒಕ್ಕಲಿಗನ ಎದೆ
ಮುದದಲಿ ಹಿಗ್ಗುತಿದೆ
ಒಬ್ಬನು ದುಡಿದರೆ ಹಲವರು ಪಡೆವರು
ಎನ್ನುತ ಕುಗ್ಗದಿದೆ
ಮುದದಲಿ ಹಿಗ್ಗುತಿದೆ



# ಒಡೆಯಗೆ ಸಿಟ್ಟು, ಬೆಕ್ಕಿಗೆ ಪೆಟ್ಟು!

ಒಂದು ಊರೊಳೊಂದು ಮನೆಯೊ–
ಳೊಬ್ಬನಿದ್ದನು
ಮಾತು ಮಾತಿಗವನು ಸಿಟ್ಟಿ–
ಗೇಳುತಿದ್ದನು

ಒಮ್ಮೆ ತನ್ನ ಸತಿಯ ಮೇಲೆ
ಸಿಟ್ಟಿಗೆದ್ದನು
ಬಾಯ್ಗೆ ಬಂದ ಹಾಗೆ ಬೈದು
ಹೊರಟು ಹೋದನು

ಮಡದಿ ರೇಗಿ ಮಗಳ ಮೇಲೆ
ಸಿಟ್ಟಿಗೆದ್ದಳು
ಸುಮ್ಮ ಸುಮ್ಮನವಳ ಜಡಿದು
ಎದ್ದು ಹೋದಳು

ಮಗಳು ಹಲ್ಲು ಕಡಿದು ತನ್ನ–
ಸಿಟ್ಟನಾರ ಮೇಲೆ
ಕಾರಿಕೊಳ್ಳುವದೆನುತ ಯೋಚಿ
ಸುತ್ತಲಿದ್ದ ವೇಳೆ

ಕೆಲಸದಜ್ಜಿ ಬಂದಳಣ್ಣ
ಕೆಲಸ ಮಾಡಲು
ಪೊರಕೆಯೆತ್ತಿ ಕೊಂಡಳವಳು
ಕಸವ ದೂಡಲು

ಸಿಕ್ಕಳಿವಳು ತಕ್ಕ ಸಮಯ–
ಕೆಂದು ಮಗಳು ಕಿನಿದು
ಸಿಕ್ಕಹಾಗೆ ರೇಗಿ ಕೂಗಿ
ಜರೆದಳವಳ ಮುನಿದು.

ಅಜ್ಜಿ ಮನುಜಳಲ್ಲವೇನು?
ಸಿಟ್ಟು ಬಂದಿತವಳಿಗೂ!
ಸಿಟ್ಟ ತೀರ್ಚಿಕೊಳುವ ಕೆಟ್ಟ
ಬುದ್ಧಿ ಬಂದಿತವಳಿಗೂ

ಇಲಿಯ ಬೆನ್ನು ಹತ್ತಿ ಬೆಕ್ಕು
ಬಂದಿತದೇ ಸಮಯಕೆ
ಅಜ್ಜಿ ಝಾಡಿಸಿದಳು ಅದನು
ಎತ್ತಿ ತನ್ನ ಪೊರಕೆ

ಒಡೆಯ ಸಿಟ್ಟಿಗೇಳೆ ಪಾಪ
ಪೆಟ್ಟು ಬಿತ್ತು ಬೆಕ್ಕಿಗೆ
ಬಲದ ಸಿಟ್ಟಿಗಬಲ ಗುರಿ–
ಯಾಗಬೇಕೆ ಶಿಕ್ಷೆಗೆ?



# ಏಳು ಕಂದ

ಎದ್ದೇಳು ಎದ್ದೇಳು ಮುದ್ದಕಂದ–ಇನ್ನು
ನಿದ್ದೆಯು ಸಾಕೇಳು ರವಿ ಬಂದ ॥ ಪ ॥

ಬಂಗಾರ ಬಾಲರವಿ ಇದೊ ಬಂದ–ತನ್ನ
ಸಿಂಗಾರ ತೇರನು ಏರಿಬಂದ
ಚೆಂಗನೆ ಎದ್ದೇಳು ನಿನಗೀಗ–ಶುಭ
ಮಂಗಲ ಕೋರಲು ತಾಬಂದ
ಏಳು ಎದ್ದೇಳು.....

ಹಾಡುವ ಹಕ್ಕಿಗಳ ಕೂಡಿ ಬಂದ ಹೊಸ
ಕಾಡಿನ ಹೂಗಳ ಸೂಡಿ ಬಂದ
ಮೋಡದ ಮನೆ ದಾಟಿ ಓಡಿ ಬಂದ–ಎದ್ದು
ಆಡುವ ಮಕ್ಕಳ ಬೇಡಿ ಬಂದ
ಏಳು ಎದ್ದೇಳು......

ಜಗವನ್ನೆ ಎಬ್ಬಿಸಿ ಸಾಗಿ ಬಂದ–ಸುತ್ತು
ಬೆಳಕನ್ನು ಹಬ್ಬಿಸಿ ಬೀಗಿ ಬಂದ
ಮೊಗ್ಗೆಗಳನುಬ್ಬಿಸಿ ತೂಗಿ ಬಂದ–ಗಿಡ
ಬಳ್ಳಿಗಳ ಕೊಬ್ಬಿಸಿ ಈಗ ಬಂದ
ಏಳು ಎದ್ದೇಳು......



ಹೋದಲ್ಲಿ ಹೊಸ ಹಿಗ್ಗು ಹರಿಸಿ ಬಂದ–ತನ್ನ
ಹೊನ್ನಿನ ಹುಡಿಯನ್ನು ಸುರಿಸಿ ಬಂದ
ಲೋಕಕ್ಕೆ ಹೊಸ ಮೆರಗು ಬರಿಸಿ ಬಂದ–ನಿನ್ನೆ
ಸಹಿಸಿದ್ದ ನೋವನ್ನು ಮರೆಸಿ ಬಂದ
ಎದ್ದೇಳು ಎದ್ದೇಳು ಮುದ್ದು ಕಂದ

# ಯಾವುದು ಬೇಕು ಆರಿಸಿಕೋ

ಇಲ್ಲಿದೆ ಕವಿತೆ
ಒಳ್ಳೆಯ ಸವಿಕತೆ
ಯಾವುದು ಬೇಕು ಆರಿಸಿಕೋ

ಅರಿವಿನ ಬಾಳು
ಮರವೆಯ ಗೋಳು–
ಯಾವುದು ಬೇಕು ಆರಿಸಿಕೋ

ಇಲ್ಲಿದೆ ವಿದ್ಯೆ
ಅಲ್ಲಿದೆ ನಿದ್ದೆ–
ಯಾವುದು ಬೇಕು ಆರಿಸಿಕೋ

ಇಲ್ಲಿದೆ ಮುತ್ತು
ಇಲ್ಲವೆ ಹೊತ್ತು–
ಯಾವುದು ಬೇಕು ಆರಿಸಿಕೋ

ಇಲ್ಲಿದೆ ಗುಣವು
ಅಲ್ಲಿದೆ ಹಣವು–
ಯಾವುದು ಬೇಕು ಆರಿಸಿಕೋ

ಇಲ್ಲಿದೆ ಕುಲವು
ಇಲ್ಲವೆ ಒಲವು
ಯಾವುದು ಬೇಕು ಆರಿಸಿಕೋ



# ಕನ್ನಡಿಗರಾಗಿ ಬೆಳೆಯೋಣ

ಕನ್ನಡಿಗರಾಗಿ ಬೆಳೆಯೋಣ
ಕನ್ನಡಿಗರಾಗಿ ಉಳಿಯೋಣ
ಕನ್ನಡ ತೇಜದಿ ಹೊಳೆಯೋಣ
ಕನ್ನಡ ತೇರನು ಎಳೆಯೋಣ

ನಾವು ಹುಟ್ಟಿರುವ ಕುಲವೇನಿರಲಿ
ಕನ್ನಡ ಕುಲವನೆ ಅಪ್ಪೋಣ
ಕನ್ನಡ ನಾಡೊಳಗಿರುವವರೆಲ್ಲ
ಕನ್ನಡಿಗರೆಂದು ಒಪ್ಪೋಣ



ವೇಷವು ಬೇರೆ ಭೂಷಣ ಬೇರೆ
ಭಾಷೆಯು ಒಂದೇ–ಕನ್ನಡವು
ಕನಸಿನೊಳಿಹುದೂ ಮನಸಿನೊಳಿಹುದೂ
ನನಸಿನೊಳಿಹುದೂ ಕನ್ನಡವು

ಮನೆಯೊಳು, ಮಠದೊಳು, ಮಸೀದೆ, ಚರ್ಚಿನೊಳು
ಕನ್ನಡಿಗರಾಗಿಯೇ ಬಾಳೋಣ
ಒಬ್ಬರೊಬ್ಬರ ಹಬ್ಬ ಉತ್ಸವದಿ
ಸೇರುತ ಹರುಷವ ತಾಳೋಣ

ಕನ್ನಡ ಕುಲವನು ಒಡೆಯುವ ಯಾರನು
ನಂಬದೆ ನಮ್ಮನೆ ನಂಬೋಣ
ಕನ್ನಡದೇಳ್ಗೆಗೆ ದುಡಿಯದವರನು
ಮರಹಿನ ಕಣಜದಿ ತುಂಬೋಣ

ಕನ್ನಡ ಕಲಿಸದ ವಿದ್ಯಾಲಯಗಳೆ
ಕನ್ನಡ ಬಳಸದ ಸರಕಾರ
ಕನ್ನಡ ತೀರ್ಪನು ಕೊಡದ ಕೋರ್ಟುಗಳೆ
ನಿಮಗಿದೊ ನಮ್ಮಯ ಧಿಕ್ಕಾರ

ಕನ್ನಡ ಭಕ್ತರು ಯಾರೇ ಇರಲಿ
ಅವರಿಗೆ ನಮ್ಮಯ ಸತ್ಕಾರ
ಕನ್ನಡ ಪ್ರೇಮಿಗಳೆಲ್ಲಿಯೆ ಇರಲಿ
ಅವರಿಗೆ ನಮ್ಮ ನಮಸ್ಕಾರ

ಕನ್ನಡಿಗರಾಗಿ ಬೆಳೆಯೋಣ
ಕನ್ನಡಿಗರಾಗಿ ಉಳಿಯೋಣ
ಕನ್ನಡ ತೇಜದಿ ಹೊಳೆಯೋಣ
ಕನ್ನಡ ತೇರನು ಎಳೆಯೋಣ

# ಬಾಲರು ನಾವು

ಕಲಿಯುವಾಗ ಏಕಲವ್ಯರು
ಕದನದಿ ವೀರ ಅಭಿಮನ್ಯು
ತಪಕೆ ತೊಡಗಿದರೆ ಧ್ರುವರೇ ನಾವು
ನಾವು ಬಾಲರು!!

ಗಿರಿಯನೇರಲು ತೇನ್‌ಸಿಂಗ್
ಕ್ಷಿಪಣಿಯನೇರೆ ಆರ್ಮ್‌ಸ್ಟ್ರಾಂಗ್
ಆಟದಿ ಸೇರೆ ಅರ್ಜುನ ಅವಾರ್ಡ್
ನಾವು ಬಾಲರು!!

ಕೃಷಿಪಂಡಿತರು ಹೊಲದಲ್ಲಿ
ಶ್ರಮವೀರರು ಗಣಿ ಗಿರಣಿಗಳಲ್ಲಿ
ಪ್ರಯೋಗಶಾಲೆಯಲಿ ಭಾಭಾ ನಾವು
ನಾವು ಬಾಲರು!!

ನಾಡಿನ ನರದಲಿ ನೆತ್ತರು ನಾವು
ನುಡಿಯ ಬಳ್ಳಿಯಲಿ ನಾವೇ ಹೂವು
ನಾಳಿನ ಕನಸಿನ ಅರ್ಥವು ನಾವು
ನಾವು ಬಾಲರು!!

ನಮಗೆ ಮೀರಿದುದು ಯಾವುದಿದೆ?
ನಮ್ಮ ಸಾಹಸಕೆ ಎಲ್ಲಿ ಕೊನೆ?
ಸಕಲಲೋಕವೇ ನಮ್ಮ ಮನೆ
ನಾವು ಬಾಲರು!!



# ಏನಾದರೂ ಕೊಡಿಸಪ್ಪ

ಅಪ್ಪಾ ಅಪ್ಪಾ
  ಏನಪ್ಪ?
ಏನಾದರೂ
  ಕೊಡಿಸಪ್ಪ!

ಏನು ಬೇಕು
  ಹೇಳಪ್ಪ
ಹೊರತು ಮಾಡಿ
  ಹೋಳಿಗೆ ತುಪ್ಪ

ದೋಸೆಯಾದರೆ
  ಒಂದೇ ಸಾಕು
ಇಡ್ಲಿಯಾದರೆ
  ಎರಡು ಬೇಕು

ವಡೆ ಮೂರು
  ಪಕೋಡೆ
ನಾಲ್ಕು
ಬಿಸ್ಕಿಟ್ಟಾದರೆ
  ಐದೇ ಸಾಕು

ಪೆಪ್ಪರಮೆಂಟು
  ಆರಿರಲಿ
ಚಾಕಲೇಟು
  ಏಳಿರಲಿ

ಜೆಮ್ಸ ಎಂಟು
  ಗೇರೊಂಭತ್ತು
ಕಡಲೇಕಾಯಿ
  ಇರಲಿ ಹತ್ತು

ಹೆಚ್ಚಿಗೆ ನಾನು
  ಬೇಡೊಲ್ಲ
ಬೇಡಿದರೂ ನೀ
  ಕೊಡಿಸಲ್ಲ!



# ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ

ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಕುಳಿತಿಹೆ ನಾನು
ಕುದುರೆಯ ಮೇಲೆ
ತಂಗಿ ಶಾರದೆಯು
ನವಿಲಿನ ಮೇಲೆ
ತಮ್ಮಂದಿರಿಬ್ಬರು
ತೊಟ್ಟಿಲದೊಳಗೆ

ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಓರಿಗೆಯವರು
ಸೇರಿಹರು
ಸಿಕ್ಕಿದ ವಾಹನ
ಏರಿಹರು
ಸುತ್ತಲು ಹಿಗ್ಗನು
ಬೀರಿಹರು
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ



ಉಟ್ಟಿಹರೆಲ್ಲರು
ಬಣ್ಣದ ಬಟ್ಟೆ
ಕಾಮನ ಬಿಲ್ಲಿನ
ಕಲ್ಪನೆ ಹುಟ್ಟೆ
ತಿರುಗು ತಿರುಗು ನೀ
ಸಿಕ್ಕಾ ಪಟ್ಟೆ
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ



ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

ಗಿರಿ ಗಿರಿ ತಿರುಗು
ಸರ ಸರ ತಿರುಗು
ಗಿಮಿ ಗಿಮಿ ಗಿಮಿ ಗಿಮಿ
ಯಮಕಿಲೆ ಮಿರುಗು
ಗಾಳಿಯ ಹೊಲವನು
ಸೀಳದೆ ಹರಗು
ತಿರುಗೆಲೆ ತಿರುಗೆಲೆ
ತಿರುಗುಯ್ಯಾಲೆ
ಆಡುತ ನೀನೂ
ಅಪ್ಪಾಲೆ
ತಿಪ್ಪಾಲೆ

# ಕಲಿಸಲಿ ಕನ್ನಡ

ಅ ಆ ಇ ಈ ಕಲಿಯುವ ಮೊದಲೆ
ಎ ಬಿ ಸಿ ಡಿ ಕಲಿಸುವರು

ಅವ್ವಾ ಅಪ್ಪಾ ಎನ್ನುವ ಮೊದಲೇ
ಮಮ್ಮಿ ಡ್ಯಾಡಿ ಎನಿಸುವರು

ನಾಚಿಕೆ–ಗೀಚಿಕೆ ಇಲ್ಲೇನಮ್ಮ
ಇಂಗ್ಲೀಷ ಹುಚ್ಚಿನ ಈ ಜನಕೆ?

ಯಾಕೆ ಎರೆಯುವರು ನಂಜನ್ನಿವರು
ಕನ್ನಡ ಮಕ್ಕಳ ಕನ್ನಡತನಕೆ

ಕನ್ನಡವನ್ನೇ ಕಲಿಯದ ಮಕ್ಕಳು
ಇನ್ನೇನನ್ನು ಕಲಿತಾರು?

ತಮ್ಮ ತಾಯಿಯೆದೆ ಹಾಲನು ಕುಡಿಯದೆ
ಅನ್ಯರನ್ನವರು ಮೆಲಿದಾರು!

ಕಲಿಸಲಿ ಕನ್ನಡ ಬಳಸಲಿ ಕನ್ನಡ
ಅದಕೂ ಇದಕೂ ಎದಕೂ

ಕನ್ನಡದಿಂದಲೆ ಚೆನ್ನವೆ ಆಗಲಿ
ಕನ್ನಡಿಗರ ಬಾಳೂ ಬದುಕೂ!



## ?

ಊರೂರಿಗಿವೆ ಶಾಲೆ
ಇದ್ದರೇನು?

ನಮ್ಮ ಶಾಲೆಯೆ ನಮಗೆ
ಮೆಚ್ಚಲ್ಲವೇನು?

ಊರೂರಿಗಿವೆ ಗುಡಿಯು
ಇದ್ದರೇನು?

ನಮ್ಮೂರ ಗುಡಿ ನಮಗೆ
ಹೆಚ್ಚಲ್ಲವೇನು?

ಊರೂರಿಗಿವೆ ಮನೆಯು
ಇದ್ದರೇನು?

ನಮ್ಮ ಮನೆಯೇ ನಮಗೆ
ಅಂದವಲ್ಲೇನು?

ಮನೆ–ಮನೆಯೊಳಿದೆ ಪಾಪಾ
ಇದ್ದರೇನು?

ನಮ್ಮ ಪಾಪಾ ನಮಗೆ
ಚೆಂದಲ್ಲವೇನು?





# ಕಾಡಿನ ದೀಪ

ಮನುಜನು ದೀಪವ
ಹುಡುಕುವ ಮೊದಲೇ
ಕಾಡಿನ ದೀಪವು ಹುಟ್ಟಿತ್ತು

ಕಾಡಿನ ಆಳದಿ
ಮುಸುಕಿದ ಕಾಳದಿ
ಮಿನುಗುವ ಬೆಳಕನು ಕೊಟ್ಟಿತ್ತು

ಎಣ್ಣೆಯ ಬೇಡದ
ಬತ್ತಿಗೆ ಕಾಡದ
ಕೈಯನು ಸುಡದ ದೀಪವಿದು

ತಾನೇ ಹೊತ್ತುವ
ತಾನೇ ಆರುವ
ಎಲ್ಲೆಡೆ ಹಾರುವ ದೀಪವಿದು

ಮೆಳೆಗಳ ಮೇಲೆ
ಮಿಂಚಿನ ಲೀಲೆ
ಹುಲ್ಲಿಗೆ ಹೊಳೆಯುವ ಕಣ್ಣುಗಳು

ಮರ-ಮರಕೆನಿತೋ
ಕಿರು ಹಣತೆಗಳು
ಬೆಳಕನು ಬರೆಯುವ ಪೆನ್ನುಗಳು

ಹುಳವೇ ದೀಪ
ಏನಿದು ರೂಪ
ಹೆಸರು ಮಿಂಚಿನ ಹುಳವೆಂದು

ಸಣ್ಣದು ಸೊಡರು
ದೊಡ್ಡದೆ ಅಬುರು
ಕೊಡುವದು ಸ್ವಂತದ ಬೆಳಕೆಂದು

ಬೊಗಸೆಯೊಳಿಟ್ಟು
ಹಾರಲು ಬಿಟ್ಟು
ನೋಡಿರಿ ಇದರ ಪ್ರಕಾಶವನು

ನಿಮ್ಮೊಳ ಬೆಳಕನು
ನೀವೇ ಬೆಳೆಸಿ
ಗಳಿಸಿರಿ ನಿಮ್ಮ ವಿಕಾಸವನು.



# ತಾಯಿ

ಅರ್ಜುನನೇನೊ ಬಹಳ ದೊಡ್ಡವನು
ವಿಶ್ವರೂಪವನು ನೋಡಿದನು
ನಾನು ಸಣ್ಣವನು ದೇವರ ನಾನು
ತಾಯಿಯ ರೂಪದಿ ನೋಡುವೆನು

ಕಾಣದ ದೇವರ ಕಂಡವರಾರೊ
ಕಾಣುವ ದೇವರು ತಾಯಿಯೇ
ಕಲ್ಲಿನ ದೇವರು ಕೊಡುವದು ಏನೋ
ಎಲ್ಲ ಕೊಡುವಳು ತಾಯಿಯೇ

ಜನ್ಮವ ಕೊಡುವಳು ಮಮತೆಯ ಕೊಡುವಳು
ಕೊಡುವಳು ಅಮೃತವ ಎದೆಯಿಂದ
ಲಾಲನೆ ಪಾಲನೆ ಲಲ್ಲೆ ಲಾಲಿಗಳ
ದಿನ ದಿನ ಕೊಡುವಳು ಮುದದಿಂದ



ತೋಳ ತೊಟ್ಟಿಲಲಿ ತೂಗುವಳೊಮ್ಮೆ
ತೊಡೆಯ ಮಂಚದಲಿ ಮಲಗಿಪಳು
ಬಣ್ಣ-ಬಣ್ಣದ ಬಟ್ಟೆಯ ತೊಡಿಸಿ
ದೃಷ್ಟಿಯಾದರದ ತೊಲಗಿಪಳು

ಅಂದದ ಚಂದದ ಆಟಿಗೆಗಳನು
ಕೊಟ್ಟು ಆಡಲು ಕಲಿಸುವಳು
ಮೆಲ್ಲನೆ ಮೆಲ್ಲನೆ ಹೆಜ್ಜೆಯನಿಡಿಸಿ
ನಲಿಯುತ ನಡೆಯಲು ಒಲಿಸುವಳು

ಅಕ್ಷರ ಕಲಿಸಲು ಮೊದಲನೆ ಗುರುವು
ನಡೆ-ನುಡಿ ತಿದ್ದಲು ಸಹಕಾರಿ
ಬಾಲತನದ ಮೃದು ಹಾಲುಗಲ್ಲಿನಲಿ
ಮನುಜನ ಕೆತ್ತುವ ರೂವಾರಿ

ಅಂತೆಯೆ ನಾನು ತಾಯಿಯೆ ದೇವರು
ಎಂಬ ನಂಬಿಕೆಯನು ಬಿಟ್ಟಿಲ್ಲ
ಕೆಟ್ಟ ಮಕ್ಕಳು ಹುಟ್ಟಿರಬಹುದು
ಕೆಟ್ಟ ತಾಯಿಯು ಹುಟ್ಟಿಲ್ಲ

# ನೀ ಮುಂದಿದ್ದರೆ ಸೋಲೆ ಇಲ್ಲ

ನಮ್ಮಯ ಶಾಲೆಯ ವಾರ್ಷಿಕೋತ್ಸವಕೆ
ದೊಡ್ಡ ದೊಡ್ಡವರು ಬರಲಿಹರು

ಅಧ್ಯಕ್ಷರು ಉದ್ಘಾಟಕರಾಗಿ
ಶಾಲೆಯ ಖ್ಯಾತಿಯ ತರಲಿಹರು

ನಾನೂ ಭಾಗವ ವಹಿಸಿಹೆನಮ್ಮ
ಆಟ–ಪಾಟದಲಿ, ಓಟದಲಿ

ಚರ್ಚೆ–ಭಾಷಣದಿ ವೇಷ–ಭೂಷಣದಿ
ಆಶು ಕವಿತೆಯಲಿ, ನಾಟಕದಿ

ಎಲ್ಲ ಸ್ಪರ್ಧೆಗಳ ಗೆಲ್ಲುವೆನಮ್ಮ
ನಿನ್ನ ಹರಕೆಯಿರೆ, ಈ ಬಾರಿ



ಮನೆಯ ತುಂಬುವೆನು ಮೆಚ್ಚುಗಳಿಂದ
ಪದಕ ಫಲಕ ಪುಸ್ತಕ ಸೇರಿ

ನೀನೂ ನೋಡಲು ಬರಬೇಕಮ್ಮ
ನಾನು ಮೆಚ್ಚುಗಳ ಪಡೆವುದನು

ನೋಡುವೆ ನಾನು ಎಲ್ಲರ ಮಧ್ಯದಿ
ನಿನ್ನಯ ಅರಳಿದ ವದನವನು

ನಾಟಕದಲ್ಲಿ ನಾನೇ ಭೀಮನು
ಕುಟ್ಟಿ ಕೆಡಹುವೆನು ಕೀಚಕನ

ಕುಳಿತವರೆಲ್ಲ ಹೊಗಳದಿರರು ಈ
ಹೆಣ್ಣಿನ ಮಾನದ ರಕ್ಷಕನ !

ಭಾವಗೀತೆಗಳ ಹಾಡುವೆನಮ್ಮ
ಸುಗ್ಗಿಯ ಕುಣಿತವ ಕುಣಿಯುವೆನು

ಯೋಗಾಸನಗಳ ಹಾಕಿ ಮೂಳೆಗಳೆ
ಇಲ್ಲವೆನ್ನುವೊಲು ಮಣಿಯುವೆನು

ಬಿಲ್ಲನು ಹಿಡಿವೆ ಗುರಿಯನು ಹೊಡೆವೆ
ಕತ್ತಿಯ ವರಸೆಯ ತೋರುವೆನು

ಇನ್ನೂ ಕೆಲವು ಸರ್‌ಪ್ರೈಜ ಕಾದಿವೆ
ಅವುಗಳ ಬೆರಗನು ಬೀರುವೆನು

ನೀ ಮುಂದಿದ್ದರೆ ಸೋಲೇ ಇಲ್ಲ
ನಿನ್ನ ಮಗನಿಗೀ ಜಗದಲ್ಲಿ

ನೋಡುವಿಯಂತೆ ನನ್ನ ಹೆಸರನೇ
ಎಲ್ಲ ಕಡೆಗೆ ಈ ಯುಗದಲ್ಲಿ

# ಹೊತ್ತಿಲ್ಲ

ಆಟಕೆ ಹೊತ್ತಿದೆ
ಊಟಕೆ ಹೊತ್ತಿದೆ
ಪಾಠಕೆ ಹೊತ್ತಿಲ್ಲ
ಯಾಕಿಲ್ಲ?
ಯಾಕೊ ಗೊತ್ತಿಲ್ಲ.

ಅಲೆಯಲು ಹೊತ್ತಿದೆ
ನಲಿಯಲು ಹೊತ್ತಿದೆ
ಕಲಿಯಲು ಹೊತ್ತಿಲ್ಲ
ಯಾಕಿಲ್ಲ?
ಯಾಕೊ ಗೊತ್ತಿಲ್ಲ.

ಜಗಳಕೆ ಹೊತ್ತಿದೆ
ರಗಳೆಗೆ ಹೊತ್ತಿದೆ
ಓದಲು ಹೊತ್ತಿಲ್ಲ,
ಯಾಕಿಲ್ಲ?
ಯಾಕೊ ಗೊತ್ತಿಲ್ಲ.

ಮೋಜಿಗೆ ಹೊತ್ತಿದೆ
ಜೂಜಿಗೆ ಹೊತ್ತಿದೆ
ಬರೆಯಲು ಹೊತ್ತಿಲ್ಲ
ಯಾಕಿಲ್ಲ?
ಯಾಕೊ ಗೊತ್ತಿಲ್ಲ.

ಎಲ್ಲರಿಗಿರುವದು
ಅಷ್ಟೇ ಹೊತ್ತು
ನಿನಗೂ ಇದು ಗೊತ್ತು

ಬಲ್ಲವರಿದನು
ಕಳೆಯದೆ ಬಳಸಿ
ಪಡೆವರು ಸಂಪತ್ತು

ಹೊತ್ತಿನ ಬೆಲೆಯು
ಗೊತ್ತಿರದಿದ್ದರೆ
ಹಾಳು ಬೀಳು ಬಾಳು!

ಹೊತ್ತೇ ಮುತ್ತು
ಹೊತ್ತೇ ರತ್ನ
ಎಂದು ಗೆದ್ದು ಆಳು!



# ಭರತಭೂಮಿ ಕರುನಾಡು

ಭರತ ಭೂಮಿಯನುಳಿದು
ಕರುನಾಡು ಇಲ್ಲ

ಕರ್ನಾಟಕವ ಬಿಟ್ಟು
ಭಾರತವು ಇಲ್ಲ!

ನಮ್ಮ ತಾಯಿಯ ತಾಯಿ
ಭಾರತಾಂಬೆ

ಭಾರತಿಗೆ ಭೂಷಣಳು
ಕರ್ನಾಟಕಾಂಬೆ

ಸಂಕ್ಷಿಪ್ತ ಬ್ರಹ್ಮಾಂಡ
ಭಾರತದ ಭೂಮಿ

ಸಂಕ್ಷಿಪ್ತ ಭಾರತವು
ಕನ್ನಡದ ಭೂಮಿ

ಏನುಂಟು ಏನಿಲ್ಲ
ಕನ್ನಡದ ನೆಲದಿ?

ಹುಟ್ಟಿಹರು ಶ್ರೇಷ್ಠರು
ಕನ್ನಡದ ಕುಲದಿ

ಸಕಲ ಭುವಿಗೇ ಬೆಳಕು
ಭಾರತದ ಕತದಿಂದ

ಸಾರ್ಥಕವೆ ಭಾರತಕೆ
ಕರುನಾಡಿನಿಂದ

ಜಯವೆನ್ನಿ ಭಾರತಕೆ
ಕರ್ನಾಟಕಕ್ಕೆ

ಈ ಎರಡು ಶುಭಕರವು
ಸಕಲ ಲೋಕಕ್ಕೆ



# ಸ್ವಾಮಿ ನಮ್ಮಪ್ಪ

ಸ್ವಾಮಿ ನಮ್ಮಪ್ಪ
ವಿದ್ಯಾ ಕೊಡಪ್ಪ
ಬುದ್ಧಿ ಕೊಡಪ್ಪ
ಶುದ್ಧಿ ನೀಡಪ್ಪ
ಸಿದ್ಧಿ ನೀಡಪ್ಪ
ಸ್ವಾಮಿ ನಮ್ಮಪ್ಪ

ಸ್ವಾಮಿ ಹನುಮಪ್ಪ
ಹೊಟ್ಟೆ ಬೆನಕಪ್ಪ
ಈಶ್ವರ ಪಿನಾಕೆಪ್ಪ
ಕೇಶವ ಜಿನೇಶಪ್ಪ
ವಿದ್ಯಾ ಕೊಡಪ್ಪ
ಬುದ್ಧಿ ಕೊಡಪ್ಪ
ಸ್ವಾಮಿ ನಮ್ಮಪ್ಪ

ಸ್ವಾಮಿ ಬೀರಪ್ಪ
ಜೋಕುಮಾರಪ್ಪ
ಏಸು ಪೀರಪ್ಪ
ಬಸವಾ ಭೈರಪ್ಪ
ವಿದ್ಯಾ ಕೊಡಪ್ಪ
ಬುದ್ಧಿ ಕೊಡಪ್ಪ
ಸ್ವಾಮಿ ನಮ್ಮಪ್ಪ



# ನಾಯಿ ಸಾಕಿದೆ ನಾನು

ನಾಯಿಯ ಸಾಕಿದೆ ನಾನು
ಬೆಕ್ಕು ಸಾಕಿದಳಕ್ಕನು
    ಈಕಡೆ ಬೌಬೌ
    ಆಕಡೆ ಮೆಂವ್ ಮೆಂವ್
ನಡುವೆ ತಮ್ಮನ ಟಿಂವ್ ಟಿಂವ್

ಹಕ್ಕಿಯ ಸಾಕಿದೆ ನಾನು
ಗಿಳಿಯ ಸಾಕಿದಳಕ್ಕನು
    ಈಕಡೆ ಕಿಲ ಕಿಲ
    ಆ ಕಡೆ ಕಲಕಲ
ನಡುವೆ ತಮ್ಮನ ಕೋಲಾಹಲ

ಹುಂಜವ ಸಾಕಿದೆ ನಾನು
ನವಿಲನು ಸಾಕಿದಳಕ್ಕನು
    ಈಕಡೆ ಕೂಕೂ
    ಆ ಕಡೆ ಕೇಕೇ
ನಡುವೆ ತಮ್ಮನ ಕೀ ಕೀ ಕೀ





# ನನ್ನ ಭಂಡಾರ

ನನ್ನ ಮನದೊಳಗಿಹುದು
ನನ್ನ ಭಂಡಾರ
ತುಂಬಿಲ್ಲ ಅದರಲ್ಲಿ
ಬೆಳ್ಳಿ ಬಂಗಾರ

ಮುತ್ತು-ರತ್ನಗಳಿಂದ
ಮುಂದೆ ಬರಿ ಕಸವು
ಇಂಥ ಸಂಪತ್ತೀಗ
ನನ್ನ ಕೈ ವಶವು

ಚಿನ್ನ-ರತ್ನಕ್ಕಿಂತ
ಬೆಲೆಯುಳ್ಳುದಲ್ಲಿ
ಅದಕೆ ಸರಿಸಮವಾದ
ಸಿರಿಯಿಲ್ಲ ಎಲ್ಲಿ

ಮನದಲ್ಲಿ ಏನಿಲ್ಲ
ಏನುಂಟು ಹೇಳು
ಅಡಗಿಹುದು ಅದರಲ್ಲಿ
ಲೋಕ ಈರೇಳು

ಸರ್ವವೂ ಅಲ್ಲಿಹುದು
ಸರ್ವೇಶನಲ್ಲಿ
ಇದನು ಪಡೆದಿಹ ನನಗೆ
ಬಡತನವದೆಲ್ಲಿ?



# ಜೊತೆಗಾರರಾಗಿರಿ

ಗರಿ ಬಿಚ್ಚು ಗರಿ ಬಿಚ್ಚು
ಗರಿ ಬಿಚ್ಚು ನವಿಲೆ

ಸ್ವರವೆತ್ತು ಸ್ವರವೆತ್ತು
ಸ್ವರವೆತ್ತು ಕೋಗಿಲೆ

ಮುದ್ದು ನುಡಿ ಮುದ್ದು ನುಡಿ
ಮುದ್ದು ನುಡಿ ಗಿಳಿಯೆ

ಸವಿ ಹಾಡು ಸವಿ ಹಾಡು
ಸವಿ ಹಾಡು ಅಳಿಯೆ

ಉಲಿದಾಡು ಉಲಿದಾಡು
ಉಲಿದಾಡು ಹಕ್ಕಿ

ನಲಿದು ಬಾ ನಲಿದು ಬಾ
ನಲಿದು ಬಾ ಬೆಕ್ಕೆ

ಜೊತೆಗಾರರಾಗಿರಿ
ನನಗೆ ನೀವೆಲ್ಲ

ನೀವು ಜೊತೆಗಿರೆ ನನಗೆ
ಬೇವು ಸಹ ಬೆಲ್ಲ



# ಪಾಪಾ

ಎತ್ತೊ ಎನ್ನುವ
ಎತ್ತಲು ಇಳಿಯುವ
ಸುತ್ತಲು ಸುಳಿಯುವ ಪಾಪಾ
ಅಂಗಿಯ ಎಳೆಯುವ
ಕೂದಲು ಸೆಳೆಯುವ
ಬೇಸರ ಕಳೆಯುವ ಪಾಪಾ

ಕರೆಯಲು ಓಡುವ
ಕರೆ ಕರೆ ಮಾಡುವ
ಬೆಣ್ಣೆಯ ಬೇಡುವ ಪಾಪಾ
ಕಾಗದ ಹರಿಯುವ
ಪೆನ್ಸಿಲ್ ಮುರಿಯುವ
ಹೂಗಳ ತರಿಯುವ ಪಾಪಾ

ಅಳುತ್ತ ಅಳುತ್ತ
ನಗುವ ಪಾಪಾ
ನಗುತ್ತ ನಗುತ್ತ
ಅಳುವ ಪಾಪಾ
ಅತ್ತರು ಚೆಂದ
ನಕ್ಕರು ಚೆಂದ
ನಮ್ಮ ಮುದ್ದು ಪಾಪಾ

ಬೆನ್ನನು ಏರುವ
ತೋಳನು ಸೇರುವ
ತೊಡೆಯನು ಹಾರುವ ಪಾಪಾ
ಸುಮ್ಮನೆ ಅರಚುವ
ಮೈಯನು ಪರಚುವ
ಕೈಯನು ತಿರುಚುವ ಪಾಪಾ

ಅಳುತ್ತ ಅಳುತ್ತ
ನಗುವ ಪಾಪಾ
ನಗುತ್ತ ನಗುತ್ತ
ಅಳುವ ಪಾಪಾ
ಅತ್ತರು ಚೆಂದ
ನಕ್ಕರು ಚೆಂದ
ನಮ್ಮ ಮುದ್ದು ಪಾಪಾ



# ಮಕ್ಕಳ ಹಕ್ಕು

ಎಲ್ಲರ ಅಕ್ಕರೆ
ಒಲವಿನ ಸಕ್ಕರೆ
ಇವು ಮಕ್ಕಳ ಹಕ್ಕು

ಎಲ್ಲರ ಕಾಳಜಿ
ಎಲ್ಲರ ಮುಲಾಜಿ
ಇವು ಮಕ್ಕಳ ಹಕ್ಕು

ವಿಶೇಷ ರಕ್ಷಣೆ
ವಿಶೇಷ ಪೋಷಣೆ
ಇವು ಮಕ್ಕಳ ಹಕ್ಕು

ಒಳ್ಳೆಯ ಉಣಿಸು
ಪೌಷ್ಟಿಕ ತಿನಿಸು
ಇವು ಮಕ್ಕಳ ಹಕ್ಕು

ಒಳ್ಳೆಯ ಉಡುಗೆ
ಒಳ್ಳೆಯ ತೊಡಿಗೆ
ಇವು ಮಕ್ಕಳ ಹಕ್ಕು

ಒಳ್ಳೆಯ ಬೆಳವು
ಒಳ್ಳೆಯ ತಿಳಿವು
ಇವು ಮಕ್ಕಳ ಹಕ್ಕು

ಚೊಕ್ಕ ವಿದ್ಯೆಯು
ಮಕ್ಕಳ ವಾಙ್ಮಯ
ಇವು ಮಕ್ಕಳ ಹಕ್ಕು

ತಕ್ಕ ಪರಿಸರ
ತಕ್ಕ ಪರಿಕರ
ಇವು ಮಕ್ಕಳ ಹಕ್ಕು

ಆಟ ಪಾಟಗಳು
ನೋಟ ಕೂಟಗಳು
ಇವು ಮಕ್ಕಳ ಹಕ್ಕು

ಪ್ರೀತಿಯ ಕವಚ
ನೀತಿಯ ಕುಂಡಲ
ಇವು ಮಕ್ಕಳ ಹಕ್ಕು

ಯೋಜನೆಗಳಲಿ
ಮೊದಲ ಕಳಕಳಿ
ಇದು ಮಕ್ಕಳ ಹಕ್ಕು

ಎಲ್ಲೆಡೆಗಳಲ್ಲಿ
ಮೊದಲ ಆವಲಿ
ಇದು ಮಕ್ಕಳ ಹಕ್ಕು

ಹಿರಿಯರೆ ಕೇಳಿ
ಮರೆತರೆ ನೀವು
ಮಕ್ಕಳ ಈ ಹಕ್ಕು

ಆಗುತ ಮುಕ್ಕು
ನಿಮ್ಮಯ ಬದುಕು
ಹಿಡಿವುದು ಬಲು ತುಕ್ಕು



# ಋತುಗಾನ

**ಮಕ್ಕಳ ಮೇಳ–೧**

ಚೈತ್ರಶುದ್ಧ ಪ್ರತಿಪದೆ
ವಸಂತ ಋತುವು ಬಂದಿದೆ!
    ವೈಶಾಖದೊಡನೆ
    ಮುಗಿವ ಋತು
    ತರುಲತೆಗಳು

ಚಿಗಿವ ಋತು
ಹಿಗ್ಗು ಹುರುಪು
ಹರಿವ ಋತು
ಮದುವೆ ಜಾತ್ರೆ
ತರುವ ಋತು
ವಸಂತ ಪೂಜೆ ಮಾಡಿರಿ
ಸುಗ್ಗಿ ಹಾಡ ಹಾಡಿರಿ

**ಮಕ್ಕಳ ಮೇಳ–೨**

ಜ್ಯೇಷ್ಠ ಆಷಾಢ
ಗ್ರೀಷ್ಮ ಋತು
ಬೇಸಿಗೆಯಿದೊ ಬಂದಿತು
ಬೀಸಣಿಕೆಯ ತಂದಿತು
ತಣ್ಣೀರಿನ
ತಣ್ಣೆಳಲಿನ
ಬಯಕೆಯಾಗಿ ನಿಂದಿತು
ಕರಿ ಹರಿವುದ ನೋಡಿರಿ
ಮಣ್ಣೆತ್ತನು ಮಾಡಿರಿ
ಬಯಲಿನಲ್ಲಿ ಕೂಡಿರಿ
ಆಡಿರಿ ಹಾಡಿರಿ

**ಮಕ್ಕಳ ಮೇಳ–೧**

ಶ್ರಾವಣ ಭಾದ್ರಪದ
ವರ್ಷಋತು
ಪಂಚಮಿ, ಉಂಡಿ,
ಜೋಕಾಲಿ ತಂದಿತು
ಮಳೆಗಾಲವು ಬಂದಿತು
ಸುಣ್ಣವ ಕೊಡುವೆನು
ಸುರಿಯೆಲೆ ಮಳೆಯೆ
ಬಣ್ಣವ ಕೊಡುವೆನು
ಬಾರಲೆ ಮಳೆಯೆ
ಹೊಲದಲಿ ತರತರ





ಬೆಳೆಗಳು ಬೆಳೆಯೆ
ಸುತ್ತಲು ಸಂತಸ
ಸಂಭ್ರಮ ಸುಳಿಯೆ
ಹುಯ್ಯೋ ಹುಯ್ಯೋ
ಮಳೆರಾಯ
ಗಣಪತಿ ಗಣಪತಿ
ಮೋರಾಯ

**ಮಕ್ಕಳ ಮೇಳ–೨**

ಆಶ್ವೀಜ ಕಾರ್ತಿಕ
ಶರದೃತು
ಬನ್ನಿಯ ಹಬ್ಬವು
ಬಂದಿತು
ಬನ್ನಿಯ ಕೊಟ್ಟು
ಬೆರೆಯೋಣ
ಹಿಂದಿನ ಹಗೆತನ
ಮರೆಯೋಣ
ಬೆಳ್ದಿಂಗಳವನು
ಬರೆಯೋಣ
ಬನದೂಟದ ಸವಿ
ಸುರಿಯೋಣ



**ಮಕ್ಕಳ ಮೇಳ–೧**

ಮಾರ್ಗಶಿರ ಪುಷ್ಯ
ಹೇಮಂತಲಾಸ್ಯ!
ಚರಗವ ಚೆಲ್ಲಿ ಬರೋಣ
ಹೊಸ ಎಳ್ಳನ್ನು ತರೋಣ
ಎಳ್ಳು ಬೆಲ್ಲ ಬೀರೋಣ
ಕೆಳ್ಳೆಯ ಹಿರಿಮೆಯನು ಸಾರೋಣ
ಕುಸುರೆಳ್ಳುಗಳ ಕಳಿಸೋಣ
ಹತ್ತು ಗಡಿಗಳ ಬೆಳೆಸೋಣ

**ಮಕ್ಕಳ ಮೇಳ–೨**

ಮಾಘ ಫಾಲ್ಗುಣ
ಶಿಶಿರ ಋತು
ವಸಂತ ಪಂಚಮಿಯ
ತಂದಿತು
ಗುಡಿಯ ಹುಣ್ಣಿಮೆ
ಕರೆಯೋ ದೇವರ
ಗುಡಿಯ ದೇವರ
ಒಡಲ ದೇವರ
ಎಲ್ಲ ಲೋಕಗಳ
ಒಡೆಯ ದೇವರ
ಎಲ್ಲಮ್ಮನಿಗೆ ಉಧೋ ಉಧೋ
ಹೋಳಿಯ ಹುಣ್ಣಿಮೆ ಲೊಬೋ ಲೊಬೋ

ಜಾತ್ರೆಗೆ ಹೊರಡು
ತೇರನು ಎಳೆ
ಕುಗ್ಗನು ಕಳೆ
ಹಿಗ್ಗನು ತಳೆ

**ಎಲ್ಲರೂ**

ಋತುಗಾನದ ತಾನನಿತಾನ
ಹರಡಲಿ ಎಲ್ಲೆಡೆ, ಮುಟ್ಟಲಿ ಬಾನ!

# ಕಲಿಯಿರಿ!

ವೀಣೆ ನುಡಿಸಲು ಕಲಿಯಿರಿ
ಕೊಳಲನೂದಲು ಕಲಿಯಿರಿ
ಅದರ ದನಿಗೆ
ದನಿಯ ಸೇರಿಸಿ

ದಿಟವನಾಡಲು ಕಲಿಯಿರಿ!
ಕೂಡಿ ನಡೆಯಲು ಕಲಿಯಿರಿ
ಕೂಡಿ ದುಡಿಯಲು ಕಲಿಯಿರಿ
ಕೂಡು ಬಾಳಿನ
ಗಾಡಿ ಬೀರಲು

ಕವನ ಹಾಡಲು ಕಲಿಯಿರಿ!
ಹಾಡಿ ಕುಣಿಯಲು ಕಲಿಯಿರಿ
ಕುಣಿದು ಕೊನೆಯಲು ಕಲಿಯಿರಿ
ಕುಣಿತದೊಡನೆ
ಸಪುರ ಮೈಯನು

ಗಳಿಸಿ ಬೆಳೆಯಲು ಕಲಿಯಿರಿ!
ನಟಿಸಿ ನಾಟಕ ಕಲಿಯಿರಿ
ಪಠಿಸಿ ವಿದ್ಯೆಯ ಕಲಿಯಿರಿ
ಎಂಥ ಬಿರಿಯೇ
ಬಂದರೂ ಸಹ



ಕೂಡಿ ಪಡೆಯಲು ಕಲಿಯಿರಿ!
ತಾಯಿ ನುಡಿಯನು ಕಲಿಯಿರಿ
ತಾಯಿನಾಡನು ಒಲಿಯಿರಿ
ತಾಯಿನಾಡನು
ಸ್ವರ್ಗಮಾಡುವ
ಮೋಡಿಯನ್ನೂ ಕಲಿಯಿರಿ!

# ಮಗುವಿನ ಮೊರೆ

ಹೆಂಡದ ಅಂಗಡಿ ಹಾಳಾಗಿ ಹೋಗಿ
ಹಾಲಿನ ಅಂಗಡಿ ಬರಲಮ್ಮ

ಕರಿದದ್ದನ್ನೇ ಮಾರುವರಿನ್ನು
ಹಣ್ಣು ಹಂಪಲವ ತರಲಮ್ಮ

ಜೂಜು ಜಿದ್ದುಗಳ ಗದ್ದಲ ಅಡಗಿ
ಆಟ ಪಾಟಗಳು ಬರಲಮ್ಮ

ಕೊಲೆಯು ಸುಲಿಗೆಗಳು ಹುಲ್ಲನು ಕಚ್ಚಿ
ಸೈಪಿನ ಸುಗ್ಗಿಯ ತರಲಮ್ಮ

ಭಾಷಣ ಬಿಗಿಯುವ ಚಪಲವು ಹೋಗಿ
ದೇಶ ಬೆಳೆಸುವುದು ಬರಲಮ್ಮ

ಹರಿದು ತಿನ್ನುವುದು ಮಣ್ಣನು ಮುಕ್ಕಿ
ಹಂಚಿ ಉಣ್ಣುವುದು ಬರಲಮ್ಮ

'ನಾನು' ಎನ್ನುವ ಹಮ್ಮು ಕರಗುತ
'ನಾವು' ಎನ್ನುವುದು ಬರಲಮ್ಮ

ಬಿಡಿ ಬಿಡಿಯಾಗಿ ಬದುಕುವ ಬದಲು
ಇಡಿಯಾಗಿರುವುದ ತರಲಮ್ಮ

ಮಕ್ಕಳ ಬಗ್ಗೆ ಅಲಕ್ಷ್ಯ ಹೋಗಿ
ಅಕ್ಕರೆ ಸಕ್ಕರೆ ಬರಲಮ್ಮ

ಮಕ್ಕಳ ನಾಟಕ ಮಕ್ಕಳ ಚಿತ್ರ
ಮಕ್ಕಳ ಪದ್ಯ ತರಲಮ್ಮ

ಮಗುವಿನ ಮೊರೆಯಿದು ಬರಿ ಉಸಿರಾಗದೆ
ಮಗುವಿನ ಯುಗವನು ತರಲಮ್ಮ

ನಾಡಿನ ಬಾನಿನ ಚಿಕ್ಕೆಗಳಂದದಿ
ಮಕ್ಕಳು ಹೊಳೆವುದು ಬರಲಮ್ಮ



# ಬೆಳೆಯುವ ಛಲ

ಬೆಳೆಯುವ ಛಲ
ಬದುಕಿನ ಬಲ
ಹುಟ್ಟಿಗಿದುವೆ ಫಲವು

ನಿಶ್ಚಲ ಛಲ
ಶುಭ ಮಂಗಲ
ಅದೆ ಬಾಳಿನ ಗೆಲವು

ಮಣ್ಣಾಗಿಯೆ
ಹಣ್ಣಾಗುವ
ಬೀಜಕಿರುವ ಛಲವು

ನಿನ್ನದಿರಲಿ
ಗರಿಗೆದರಲಿ
ಸತ್ವ ಸಮುಜ್ವಲವು

ಕಸುವೆಲ್ಲಿಯೊ
ಜಸವಲ್ಲಿಯೆ
ಬದುಕಾಗಲಿ ಬಲವು

ಉಸಿರುಸಿರಿಗು
ಹೊಸದಾಗಲಿ
ರಸಬಾಳಿನ ಚೆಲುವು

ನರನರದಲಿ
ಹರಿದಾಡಲಿ
ಹೊಸ ಹುಟ್ಟಿನ ಒಲವು

ಹಿರಿದಾಗಲಿ
ಹಿರಿದಾಗಲಿ
ನೆರೆಬೆಳೆಯುವ ಛಲವು

ಬೆಳೆ ಎತ್ತರಕೆ
ಬೆಳೆ ಎತ್ತರಕೆ
ಅತಿಮಾನವಸ್ತರಕೆ

ಶಿವ ಸುಂದರಕೆ
ಜಗಮಂದಿರಕೆ
ಬೆಳೆ ಸಚರಾಚರಕೆ





# ಇಚ್ಛಾ ಪಯಣ

ಭೂಮಿಯ ಮೇಲೆ
ಬೆಳಗಿನ ತಿಂಡಿ
ಚಂದ್ರಲೋಕದಿ
ಹಗಲೂಟ

ಮಂಗಳ ಲೋಕದಿ
ರಾತ್ರಿಯ ಊಟ
ಮತ್ತೆ ಭೂಮಿಗೆ
ಮರು ಓಟ!

ಅಂತರಕೆ ಭೂ–
ಮಂತರ ಹಾಕಿ!

ಭೂಮಿಗೆ ಬಾಹ್ಯ
ಆಕಾಶಕ್ಕೆ

ಬೀಗತನವನೇ
ಮಾಡಿಸಿ ಬಿಡುವೆವು

ಚಿಕ್ಕೆಯ ಅಕ್ಕಿಯ
ಕಾಳನು ಹಾಕಿ!

ಮಾಡುತ ಮೋಜಿನ
ರಾಕೆಟ್ ಸವಾರಿ

ಎಲ್ಲಿಗೆ ಬೇಕೋ
ಅಲ್ಲಿಗೆ ಹಾರಿ

ಹಾಲು ಹಾದಿಯ
ಮೇರೆಯ ಮೀರಿ

ಬರುವೆವು ಭೂಮಿಗೆ
ನಲವೇರಿ!

ಬಾಹ್ಯಾಕಾಶವು
ಅಪರಂಪಾರ

ಕ್ವಾಸಾರ್ ಪಲ್ಸಾರ್
ಪರಿವಾರ

ಇಚ್ಛಾಪಯಣದಿ
ತಾರಾನಿಕರ

ಸುತ್ತಿ ಬರುವೆವು
ನಮಸ್ಕಾರ!

# ಒಂಟೆ

ಒಂಟೆ ಬಂತು
ಒಂಟೆ ಬಂತು
ಒಂಟೆ ಬಂತು ಊರಿಗೆ!
ಕೆಲಸಗಿಲಸ
ಪಾಠಗೀತ
ಈಗ ಬೇಕು ಯಾರಿಗೆ?

ಓಡಿ ಬನ್ನಿ
ನೋಡ ಬನ್ನಿ
ಮರಳುಗಾಡ ಹಡಗವ
ವಂಕ ಗೋಣು
ಡೊಂಕ ಡುಬ್ಬ
ಮೈದಾಳಿದ ವಿಗಡವ!

ಹೊಟ್ಟೆಯೊಂದು
ಪಟ್ಟಣವೇ
ಕನ್ನಂಬಾಡಿ ಕಟ್ಟೆ
ಬಾಲ, ಬಾಯಿ,
ಮೂಗು, ಕಿವಿ–ಎಲ್ಲ
ಹೊಲಸು ಮೊಟ್ಟೆ!



ಇದನು ಮಾಡು–
ವಾಗ ಶಿವಗೆ
ಯಾವುದಿತ್ತೊ ಅವಸರ
ಕಲಸಿ ಮಣ್ಣ
ಕಿವುಚಿ ಬಿಟ್ಟ
ಮಾಡಿಬಿಟ್ಟ ಸರಸರ!

ವಿಕಾರವಾಗಿ
ಇದ್ದರೇನು
ಇದರ ಆಕಾರವು
ಒಂಟೆ ಬಹಳ
ಒಳ್ಳೆ ಪ್ರಾಣಿ
ಸೇವೆಯ ಸಾಕಾರವು!

ಮಕ್ಕಳೇರಿ
ಕುಣಿಯುತಿಹರು
ಇದರ ಬೆನ್ನ ಮೇಲೆ
ಟ ಠ ಡ ಢ ಣ
ಪಠಿಸುತಿಹರು
ಒಂಟೆ ಡುಬ್ಬ ಶಾಲೆ!

ದೊಡ್ಡವರಿದ–
ನೇರಿ ದೂರ
ದೇಶಗಳಿಗೆ ಹೋಗಲಿ
ಊರಿಗೆಲ್ಲ
ಸಾಲುವಷ್ಟು
ದಿನಸಿಗಳನು ತರಲಿ

ಭಲೆ ಒಂಟೆ
ಭಳಿರೆ ಒಂಟೆ
ನಮ್ಮ ಬಂಟ ಒಂಟೆ
ಕಳಿಸುವೆವು
ನಿನಗೆ ಕಟ್ಟಿ
ನಮ್ಮೂರಿನ ಗಂಟೆ

# ಕೋತಿ ಹೋತದ ಕತೆ

ಒಬ್ಬನಿದ್ದ
ಅವನಿಗಿದ್ದ
ಆಸ್ತಿ ಯೆಂದರೆ

ಒಂದು ಕೋತಿ
ಒಂದು ಹೋತ!
ಊರು ಬಂದರೆ

"ಹಾಕು ಲಾಗಾ
ಕಪಿಯ ಮಗಾ
ಹೋತಿನ ಹೆಗಲೇರಿ"

ಎಂದು ಆಟ
ನಡೆಸಿ ಊಟ
ಕೊಡಿರಿ ಕರುಣೆದೋರಿ

ಎಂದು ಜನರ
ಕೇಳಿ ಅವರ
ದಾನ ಪಡೆಯುತಿದ್ದ

ಸೇರಿ ತೋಟ
ಮಾಡಿ ಊಟ
ಮುಂದೆ ನಡೆಯುತಿದ್ದ

ಒಮ್ಮೆ ಹೀಗೆ
ಆಟವಾಗೆ
ಪಡೆದ ಅನ್ನವನ್ನು

ಉಣ್ಣಲೆಂದು
ಊರ ಮುಂದೆ
ಇದ್ದ ಬಾವಿಯನ್ನು

ಕಂಡು ಅಲ್ಲಿ
ಒಲ್ಲಿಯಲ್ಲಿ
ಅನ್ನವನ್ನು ಇರಿಸಿ

ಬಾವಿಯೊಳಗೆ
ಇಳಿದ ತಳದ
ನೀರ ತರಲು ಬಯಸಿ

ಅದೇ ಸಮಯ
ಕಾಯುತ್ತಿದ್ದ
ಕೋತಿ ಒಲ್ಲಿ ತೆರೆದು

ಒಡೆಯಗಿರಲಿ
ಸ್ವಲ್ಪಾದರು
ಎಂಬುದನ್ನೆ ಮರೆದು



ಎಲ್ಲ ಅನ್ನ
ತಿಂದು ತನ್ನ
ತಪ್ಪು ಮುಚ್ಚಲೆಂದು

ಹೋತಕಿದ್ದ
ಗಡ್ಡ ಕೊಯ್ದು
ಅಗುಳ ಹಚ್ಚಿತಂದು

ಮೇಲೆ ಬಂದ
ಒಡೆಯನೆಂದ
ತಡವೇತಕೆ–ಊಟಕೆ

ಊಟ ಮಾಡಿ
ನಿದ್ದೆ ಮಾಡಿ
ನಡೆವೆ ಮುಂದಿನಾಟಕೆ

ಎಂದುಕೊಂಡು
ಬುತ್ತಿ ತಂದು
ಎತ್ತಿ ನೋಡಿದಾಗ

ಎಂಜಲಗುಳು
ನೋಡಿ ನಗಲು
ರೇಗಿ ಹುಡುಕಲಾಗ

ಹೋತಿಗಂಟಿ
ದಗುಳ ಕಂಡು
ಹೋತೆ ತಿಂದಿತೆಂದು

ಹಣಿದ ಹೋತ
ತಿಂದ ಕೋತಿ
ಬಚಾವಾಯ್ತು ತಿಂದು!

ತಪ್ಪು ಹೂಡಿ
ಯುಕ್ತಿ ಮಾಡಿ
ಪಾರಾಗುವರಿರುವರು

ತಪ್ಪಿಲ್ಲದೆ
ಸಿಕ್ಕಿ ಬಲೆಗೆ
ನರಳುವರುಳಿದವರು



# ಚುಟುಕುಗಳು

೧

ಪಾಪ ಅತ್ತರೆ ಚೆಂದ
ಅಕ್ಕ ನಕ್ಕರೆ ಚೆಂದ
ಮಕ್ಕಳೇನೇ ಮಾಡಿದರೂ
ಅಪ್ಪ ಅವ್ವಗೆ ಚಂದ

೨

ದೂರದರ್ಶನ ಬಂದಮೇಲೆ
ದೂರವಾದರು ಗೆಳೆಯರು
ಪ್ರೇಮ ದೃಶ್ಯಗಳ ನೋಡೀ ನೋಡೀ
ರೋಮಿಯೋ ಆದರು ಎಳೆಯರು

೩

ಕಣ್ಣೆ ತಾಯಿಯ ಮುಖವೆ ಸುಖ
ಕೆನ್ನೆಗವ್ವನ ಮುತ್ತೆ ಸುಖ
ಪಾಠ ಆಟಗಳಿಂದ ದಣಿದು
ಬರಲು ಮಾತೆಯ ಮಡಿಲೆ ಸುಖ

೪

ಹಕ್ಕಿ ಹಾಡಲು ಸಂತಸ
ಚಿಕ್ಕೆ ಮೂಡಲು ಸಂತಸ
ಜಾತ್ರೆಗೆಂದು ಅಪ್ಪ ಹಿಡಿ ಹಿಡಿ
ರೊಕ್ಕ ನೀಡಲು ಸಂತಸ

೫

ಹೂವು ಬೇಕು ತಂಗಿಗೆ
ಹಣ್ಣು ಬೇಕು ತಮ್ಮಗೆ
ನನಗೆ ಕತೆ ಕವಿತೆಗಳು ಬೇಕು
ಓದಿಕೊಳ್ಳಲು ತಣ್ಣಗೆ

೬

ಬೆಕ್ಕು ಕನಸಿನಲಿ ಇಲಿಯನು ಕಂಡಿತು
ನಿದ್ದೆಗಣ್ಣಿನಲೆ ನೆಗೆದಿತ್ತು
ಬೆಕ್ಕಿಗೆ ತಾಕಿ ಚೆಕ್ಕುಲಿ ಬೀಳಲು
ಇಲಿಯು ಅದನು ಬಕ್ಕರಿಸಿತ್ತು



೭

ಗಣಪ್ಪ ಗಣಪ್ಪ ಬಂದ
ಬುಟ್ಟಿ ಕಡುಬನು ತಿಂದ
ಏರಿದ ಇಲಿ ಮುಗ್ಗರಿಸಲು ಬಿದ್ದು
ಹೊಟ್ಟೆ ಒಡೆಯಿತೆಂದ



೮

ಓದು ಎಂದರೆ ತೂಕಡಿಕೆ
ಕೆಲಸವೆಂದರೆ ಆಕಳಿಕೆ
ಮಸಾಲೆ ದೋಸೆ ಇಡ್ಲಿ ಸಾಂಬಾರ್
ವಡೆ ಎಂದರೆ ಚಟುವಟಿಕೆ

೯

ಕನ್ನಡವೆ ಕಾಮಧೇನು
ಕನ್ನಡವೆ ಕಲ್ಪವೃಕ್ಷ
ಕನ್ನಡವೆ ಧರ್ಮ ಅರ್ಥ
ಕನ್ನಡವೆ ಕಾಮ ಮೋಕ್ಷ

೧೦

ಹಣವಂತನಾಗುವಿಯೋ ಇಲ್ಲವೋ ಅರಿಯೆ ಮಗು
ಗುಣವಂತನಾಗಬಲ್ಲೆ
ಗುಣವಿರದ ಹಣ ಹೆಣವು ಹಣವಿಲ್ಲದಿದ್ದರೂ
ಗುಣ ರತ್ನಖನಿ ಕೇಳು ಬದುಕಿನಲ್ಲೆ

೧೧

ದೊಡ್ಡನುಡಿ ಸಣ್ಣನಡೆ ಯಾತಕ್ಕು ಬೇಡ
ಕಡಿಮೆ ನುಡಿ ಹಿರಿಯ ನಡೆ ನವನಿಧಿಯು ನೋಡ
ಚಕ್ರವ ತಿರುಗಿಸಿ ಕೊಂದ ರಾಕ್ಷಸರ ಶ್ರೀ ಕೃಷ್ಣ
ಚರಕವ ತಿರುಗಿಸಿ ತಂದ ಸ್ವರಾಜ್ಯವ ರಾಷ್ಟ್ರಪಿತ
ತನುಮನ ದುಡಿಸಿ ನಾವು ತರುವೆವು ಸಿರಿ ಸೌಖ್ಯ
ಎಲ್ಲರ ಏಳಿಗೆ ಇಲ್ಲಿ ಶಕ್ಯವಿದೆ ಇರಲು ನಮ್ಮೊಳು ನಿಜಸಖ್ಯ

# ಪ್ರಶ್ನೋತ್ತರ

"ಮಿಂದು ಬಂದೆ–
ತಿಂದು ಬಂದೆ"
"ಏನು ತಿಂದೆ?"
"ಆನೆ ತಿಂದೆ"
"ಮದ್ದಾನೆ?"
"ಸಕ್ಕರೆ ಆನೆ!"

"ಎತ್ತಿ ತಂದೆ–
ಹೊತ್ತು ತಂದೆ"
"ಏನು ಹೊತ್ತೆ?"
"ಗುಡ್ಡ ಹೊತ್ತೆ?"
"ಯಾವ ಗುಡ್ಡ?"
"ಚಿತ್ರದ ಗುಡ್ಡ!"

"ಕಟ್ಟಿ ಬಂದೆ–
ಕಟ್ಟಿ ಬಂದೆ"
"ಏನು ಕಟ್ಟಿದೆ?"
"ಗುಡಿಯ ಕಟ್ಟಿದೆ?"
"ಯಾವ ಗುಡಿ?"
"ಗೊಂಬೆ ಗುಡಿ!"



# ನೆಹರು ಚಾಚಾ



ಇಂದು ನೆನೆವೆವು ನಿನ್ನ
ಇಂದು ಮಣಿವೆವು ನಿನಗೆ
ಹಾಡಿ ತಣಿವೆವು ನಿನ್ನ
ನೆಹರು ಚಾಚಾ

ನಿನ್ನ ಅಕ್ಕರೆ ಒಲವ
ನಿನ್ನ ಮನಸಿನ ಚೆಲುವ
ನಿನ್ನ ತಿಳಿವಿನ ಬಲವ
ನೀಡೆಮಗೆ ಚಾಚಾ

ನಿನ್ನಮಲ ಜೀವನವು
ನಮಗೆ ಸಂಜೀವನವು
ದೇಶಭಕ್ತಿಗೆ ಬರೆದ
ಭಾಷ್ಯ ಚಾಚಾ

ನಿನ್ನ ಸ್ವರ ಸ್ವಾತಂತ್ರ್ಯ
ನಿನ್ನುಸಿರು ಜನತಂತ್ರ
ಐಕ್ಯಮತ್ಯವೆ ಮಂತ್ರ
ನಡೆ ನುಡಿಯು ಸಾಚಾ

ನಿನ್ನ ಗುರಿ ಸಾಧಿಸಲು
ನಮ್ಮಿರವು ಮೀಸಲು
ದುಡಿಯುವೆವು ಕಾಯೇನ
ಮನಸಾ ವಾಚಾ

ನಿನ್ನ ಸೈಪಿನ ಹೆಸರು
ನಮ್ಮ ಮನದಲಿ ಹಸಿರು
ನಿನ್ನ ಗುರಿ ನಮ್ಮುಸಿರು
ನೆಹರು ಚಾಚಾ



* ನವೆಂಬರ್ ೧೪–ಮಕ್ಕಳ ದಿನ

# ಸರಪಳಿ

ಹುಲ್ಲು, ಹುಲ್ಲು!
ಯಾವ ಹುಲ್ಲು?
ಮಜ್ಜಿಗೆ ಹುಲ್ಲು!

ಯಾವ ಮಜ್ಜಿಗೆ?
ಹುಳಿ ಮಜ್ಜಿಗೆ!

ಯಾವ ಹುಳಿ?
ಮಾವಿನ ಹುಳಿ!

ಯಾವ ಮಾವು?
ಗೋವಾ ಮಾವು

ಯಾವ ಗೋವಾ?
ಕದಂಬ ಗೋವಾ!

ಯಾವ ಕದಂಬ?
ಬನವಾಸಿ ಕದಂಬ!

ಯಾವ ಬನವಾಸಿ?
ಪಂಪನ ಬನವಾಸಿ!

ಯಾವ ಪಂಪ?
ಕನ್ನಡ ಪಂಪ!

ಯಾವ ಕನ್ನಡ?
ಕಸ್ತೂರಿ ಕನ್ನಡ–

ನನ್ನ ಕನ್ನಡ
ನಿನ್ನ ಕನ್ನಡ!



# ನಮ್ಮೂರು ನಮಗೆ ಸವಿಬೆಲ್ಲ

ನಮ್ಮೂರ ಹಳ್ಳ
ಬತ್ತುವದಿಲ್ಲ
ನಮ್ಮೂರ ಹುಲ್ಲು
ಒಣಗುವುದಿಲ್ಲ
ನಮ್ಮೂರ ಗದ್ದೆ
ಕೋಡುವದಿಲ್ಲ
ನಮ್ಮೂರ ತೋಟ
ಬಾಡುವುದಿಲ್ಲ

ನಮ್ಮೂರ ರಾಸು
ಸೊರಗುವುದಿಲ್ಲ
ನಮ್ಮೂರ ಜನರು
ಕೊರಗುವುದಿಲ್ಲ
ನಮ್ಮೂರ ಮಕ್ಕಳು
ಮರುಗುವುದಿಲ್ಲ
ನಮ್ಮೂರ ಸಿರಿಯು
ಕರಗುವುದಿಲ್ಲ

ನಮ್ಮೂರ ಶಾಲೆ
ಸೋಲುವುದಿಲ್ಲ
ನಮ್ಮೂರ ಜಾತ್ರೆ
ನಿಲ್ಲುವುದಿಲ್ಲ
ನಮ್ಮೂರ ಕೀರ್ತಿ
ಮಸಳುವುದಿಲ್ಲ
ನಮ್ಮೂರು ನಮಗೆ
ಸವಿಬೆಲ್ಲ



# ಹೋಳಿಗೆ ತುಪ್ಪ

ಹೋಳಿಗೆ ತುಪ್ಪ
ಹೊಡಿ ನಮ್ಮಪ್ಪ
ಬಿಸಿ ಬಿಸಿ ಹೋಳಿಗೆ
ಗಮಗಮ ತುಪ್ಪ
ಆರೋ ಏಳೋ
ಜಡಿಯಪ್ಪ!
ತುಪ್ಪದಿ ಕರಿದ
ಹಪ್ಪಳ ಸಂಡಿಗೆ
ಉಪ್ಪಿನಕಾಯಿ
ಆಂಬೋಡೆ

ಬಾಯಲಿ-ಕರಗುವ
ಕುರುಕುರು ಕುರುಡಿಗೆ
ನೀರು ಬರಿಸುವ
ವಡೆ ಪಕೋಡೆ
ರಸನೆಯ ಪಾಲಿಗೆ
ಮಸೆಗಲ್ಲು ಇವು
ತಿನ್ನಿರಿ ತಿನ್ನಿರಿ
ಹೋಳಿಗೆ ಹಲವು!

ತುಪ್ಪ ಬೇಡವೆ?
ಇದೆ ಸೀಕರಣೆ
ಅದೂ ಬೇಡವೆ?
ಇದೊ ಹಾಲು, ಕೆನೆ!
ಅದೂ ಬೇಡವೆ?
ಕಾಯಿ ಹಾಲು ಇದೆ!
ಅದೂ ಬೇಡವೆ?
ಸವಿಜೇನು ಇದೆ!

ಏನು ಬೇಕೋ ಕೋ
ಸಾಕೆನ್ನದಿರು!
ಎಣಿಸಿ ಹೋಳಿಗೆಯ
ತಿನ್ನದಿರು!
ಹೋಳಿಗೆ ತುಪ್ಪ
ಹೊಡಿ ನಮ್ಮಪ್ಪ!



# ತೇರು

ಊರದೇವರ
ತೇರು ಎಳೆಯಿರಿ
ನಲಿಯಿರಿ

ತೂರಿ ಕಾಯನು
ಹಾರಿ ಹಿಡಿಯುತ
ಹಿಗ್ಗಿ ಹಾಡುತ
ಕುಣಿಯಿರಿ

ತೇರನೆಳೆಯುತ
ತಣಿಯಿರಿ!

ನಾಡ ತಾಯಿಯ
ತೇರ ಎಳೆಯಿರಿ
ನಲಿಯಿರಿ

ತಾಯ ಬಾವುಟ
ತುಂಬೆ ದಿಕ್ಕಟ
ಹೆಮ್ಮೆಯಿಂದಲಿ
ಮಣಿಯಿರಿ

ತೇರನೆಳೆಯುತ
ತಣಿಯಿರಿ!

ದೇಶ ದೇವಿಯ
ತೇರನೆಳೆಯಿರಿ
ನಲಿಯಿರಿ

ಜಗದ ಗುರುವಿನ
ಘನತೆ ಸಾರುತ
ಹಗೆಯ ಹಮ್ಮನು
ಹಣಿಯಿರಿ

ತೇರನೆಳೆಯುತ
ತಣಿಯಿರಿ!

ಜಗದ ಜಾತ್ರೆಯ
ತೇರ ಎಳೆಯಿರಿ
ನಲಿಯಿರಿ

'ಒಂದೆ ನೆಲ ಜಲ,
ಒಂದೆ ಮನುಕುಲ'
ಎಂದು ಘೋಷಿಸಿ
ತೊನೆಯಿರಿ

ತೇರನೆಳೆಯುತ
ತಣಿಯಿರಿ!



# ಬುಸು ಬುಸು ನಾಗಪ್ಪ

ಬುಸು ಬುಸು ನಾಗಪ್ಪ
ತುಸು ಹಾಲು ಕುಡಿಯಪ್ಪ
ಖುಷಿಯಾಗಿ ಹರಸಪ್ಪ
ಹೊಸ ಕಾಲ ಬರಿಸಪ್ಪ
ಬುಸು ಬುಸು ನಾಗಪ್ಪ॥

ಪಂಚಮಿ ಬಂತಪ್ಪ
ತಂಬಿಟ್ಟು ತಂತಪ್ಪ
ನಿನಗು ತನಿ ತಂತಪ್ಪ
ಕುಡಿಯದಿದ್ರೆ ಎಂತಪ್ಪ
ಬುಸು ಬುಸು ನಾಗಪ್ಪ॥

ನನ್ನ ಪಾಲು ಕುಡಿಯಪ್ಪ
ಅಪ್ಪನ ಪಾಲು ಕುಡಿಯಪ್ಪ
ಅವ್ವನ ಪಾಲು ಕುಡಿಯಪ್ಪ
ಅಕ್ಕ ಅಣ್ಣ ತಮ್ಮ ತಂಗಿ
ಎಲ್ಲರ ಪಾಲು ಕುಡಿಯಪ್ಪ
ಬುಸು ಬುಸು ನಾಗಪ್ಪ॥

ಮನೆ ತುಂಬ ತಿಂಡಿ ಉಂಡಿ
ಕರೀತೈತೆ ಹಾಲಿನ ಗಿಂಡಿ
ಕಾಯ್ತಾ ಇವೆ ಹೂವಿನ ದಂಡಿ
ಬಂಗಾರ ಬೆಳೆ ಮುತ್ತಿನ ಪೆಂಡಿ
ಬೇಗ ಹಾಲು ಕುಡಿಯಪ್ಪ
ಬುಸು ಬುಸು ನಾಗಪ್ಪ॥

ಜೋಕಾಲೀಲಿ ಆಡಬೇಕು
ಬೋಲ ಬಗರಿ ಆಡಿಸಬೇಕು
ಗೆಳತಿಯರನ್ನು ಕೂಡಿಸಬೇಕು
ಕಣ್ಣು ಕಟ್ಟಿ ಓಡಿಸಬೇಕು
ಬೇಗ ಹಾಲು ಕುಡಿಯಪ್ಪ
ಬುಸು ಬುಸು ನಾಗಪ್ಪ॥

ಮನೆಮನೆಯೂ ಹಿಗ್ಗಿನ ಬುಗ್ಗೆ
ಹೆರಳು ಹೆರಳಿಗೂ ಮೊಗ್ಗೆಯ ಲಗ್ಗೆ
ತೋರಣ ಭಾರಕೆ ಬಾಗಿಲು ಬಗ್ಗೆ
ಎಷ್ಟು ಹೇಳುವುದು ಕುಡಿಯುವ ಬಗ್ಗೆ
ಬೇಗ ಹಾಲು ಕುಡಿಯಪ್ಪ
ಬುಸು ಬುಸು ನಾಗಪ್ಪ॥



# ನೀನಿಂದೇ ಸಸಿ ಊರು

ಕಾಡೆನ್ನುವುದೇ
ಕಾಡನು ಸೇರಿದೆ
ಇರುವ ಕಾಡನು
ಕಡಿ ಕಡಿದು

ಗಿಡ ನೆಡದೆ
ಗಿಡ ಕಡಿಯುವ
ಕೆಡುಕಿನ ಹಾದಿಯ
ಹಿಡಿ ಹಿಡಿದು

ಕೈಕೊಡುತಿದೆ ಮಳೆ
ಬಡವಾಗಿದೆ ಬೆಳೆ
ಬರಡಾಗಿದೆ ಇಳೆ
ಕಾಡಳಿದು

ಬತ್ತಿವೆ ಕೆರೆ
ಬತ್ತಿವೆ ತೊರೆ
ಬತ್ತಿದ ತಿರೆ
ಹಸಿ ಕಳೆದು

ಕಾಳಿನ ಬರ
ಮೇವಿನ ಬರ
ಸೌದೆಯ ಬರ
ರೈತರಿಗೆ

ಎಲೆ ಗೊಬ್ಬರ
ಕುಟಿ ಚಪ್ಪರ
ಬರ ಎಲ್ಲದರ
ಬಡವರಿಗೆ

ಬಣ ಪರಿಸರ
ಬಹು ದುಸ್ತರ
ಬದುಕುವ ತೆರ
ಸರ್ವರಿಗೆ

ನೆಡಿರೋ ಮರ
ಹಿತ ಪರಿಸರ
ಮರಗಳ ವರ
ಉರ್ವರೆಗೆ

ನೆಡು ಮಾವನು
ನೆಡು ಬೇವನು
ನೆಡು ತೇಗನು
ಹುಣಸೆಯನು

ನೆಡು ತೆಂಗನು
ನೆಡು ಕೌಂಗನು
ನೆಡು ನೇರಿಳೆ
ಹಲಸನ್ನು

ಮನೆ ಮನೆಗೂ
ಮರ ದೊರೆಯಲಿ
ವನವಾಗಲಿ
ಊರೂರೂ

ನಾಡಾಗಲಿ
ನಂದನವನ
ನೀನಿಂದೇ
ಸಸಿ ಊರು!
ನೀನಿಂದೇ
ಸಸಿ ಊರು!



# ನನ್ನ ನೆನಿಕೆ ನೂರು



ಬಟ್ಟೆಯ ಹೊಲಿಯುವ
ಸಿಂಪಿಗ ನಿನಗೆ
ನನ್ನ ನೆನಿಕೆ ನೂರು

ಬಟ್ಟೆಯ ತೊಳೆಯುವ
ಅಗಸನೆ ನಿನಗೆ
ನನ್ನ ನೆನಿಕೆ ನೂರು

ಎಣ್ಣೆಯ ಕೊಡುವ
ಗಾಣಿಗ ನಿನಗೆ
ನನ್ನ ನೆನಿಕೆ ನೂರು

ಬೆಣ್ಣೆಯ ಕೊಡುವ
ಗವಳಿಗ ನಿನಗೆ
ನನ್ನ ನೆನಿಕೆ ನೂರು

ಮಡಕೆಯ ಕೊಡುವ
ಕುಂಬಾರ ನಿನಗೆ
ನನ್ನ ನೆನಿಕೆ ನೂರು



ಕುಡಗಳ ಕೊಡುವ
ಕಂಬಾರ ನಿನಗೆ
ನನ್ನ ನೆನಿಕೆ ನೂರು

ಕ್ಷೌರವ ಮಾಡುವ
ನಾಪಿತ ನಿನಗೆ
ನನ್ನ ನೆನಿಕೆ ನೂರು

ಮೆತ್ತೆಯ ಮಾಡುವ
ಪಿಂಜಾರ ನಿನಗೆ
ನನ್ನ ನೆನಿಕೆ ನೂರು

ನಾನು ಬದುಕಲು
ನೆರವು ನೀಡುವ
ಜನರು ಸಾವಿರಾರು

ಎಲ್ಲೆ ಇರಲಿ, ಅವ–
ರಾರೇ ಇರಲಿ
ನನ್ನ ನೆನಿಕೆ ನೂರು!

# ದೊಂಬರಾಟ



ನೆರೆಯಿತಿದೋ ಜನರ ದೊಂಬಿ
ದೊಂಬರಾಟ ನೋಡಲು
ಬೇಸರಿಕೆಯ ದೂಡಲು
ನೋಡಿ ಕಾಸ ನೀಡಲು

ಸ್ವಲ್ಪ ಸುಖಿಸಿ ಮತ್ತೆ ಹೆಗಲ
ಬಾಳ ನೊಗಕೆ ಹೂಡಲು

ಸರಸರಸರ ಗಣಿಯನೇರಿ
ಮಿಣಿಯ ಮೇಲೆ ನಡೆದಳು
ಡೊಂಬಿತಿ ತುಸು ತಡೆದಳು

ಕೋಲನೊಂದ ಹಿಡಿದಳು
ಕೋಲನತ್ತ ಇತ್ತ ಚಾಚಿ
ಮಣಿದು ಕುಣಿದು ನಡೆದಳು

ಜೋಲಿ ಹೋಗದಂತೆ ಕೋಲ
ಬಳಸುವವಳ ಚಾತುರ
ಮಣಿ ಮೇಗಣ ಪಾತರ
ನೋಡುವವರ ಕಾತರ
ಡೊಂಬನಿಗೋ ಬೇಗ ಮುಗಿಸಿ
ಕಾಸು ಪಡೆವ ಆತುರ

ಮೂಳೆಗಳೇ ಇಲ್ಲವೇನೊ
ಇವಳ ಬಿಲ್ಲು–ಮೈಯಲಿ
ಇವಳ ಬಳ್ಳಿ–ಕೈಯಲಿ
ಇವಳೇನೇ ಗೆಯ್ಯಲಿ
ಮೂಕರಾಗಿ ನೋಡುತಿಹರು
ನೆರೆದ ಜನರು ಬಯಲಲಿ

ಹಳ್ಳಿಯ ಸರ್ಕಸ್ಸು ಇದನು
ಜನರು ನೋಡಿ ನಲಿದರು
ಕೈಯ ತಟ್ಟಿ ನಲಿದರು
ಆಟವಿದಕೆ ಒಲಿದರು
ಕಾಸನಿತ್ತು ಕಜ್ಜಕರೆಯೆ
ಮನೆಗಳತ್ತ ಸುಳಿದರು

# ಬಣ್ಣ ಬಣ್ಣದ ಓಕುಳಿ



ಹೋಳಿ ಬಂದಿತು ಹೋಳಿ
ಮಾಡಿ ಹಿಗ್ಗಿನ ದಾಳಿ
ಆಡಬನ್ನಿರಿ ಓಕುಳಿ
ಬಣ್ಣ ಬಣ್ಣದ ಓಕುಳಿ!

ಮೈಗೆ ಮನಸಿಗೆ ಕಚಕುಳಿ
ಹೆಣ್ಣು ಗಂಡಿಗೆ ಹೊಂಪುಳಿ
ಹೋಳಿ ಹಾಡಿನ ಒಬ್ಬುಳಿ
ಬಣ್ಣ ಬಣ್ಣದ ಓಕುಳಿ!

ಕೊಡಿರಿ ಕೈಗೆ ಜೀಕಳಿ
ರಸಿಕನಾಗುವ ಕೇವಲಿ
ಸಲ್ಲಿಸುವ ವರ್ಣಾಂಜಲಿ
ಬಣ್ಣ ಬಣ್ಣದ ಓಕುಳಿ!

ಜನಕೆ ಬಣ್ಣದ ಬಾಕುಳಿ
ಅಂತೆ ಹೋಳಿಯ ಓಕುಳಿ
ನೀರಸತೆಯನಿದು ನೂಕಲಿ
ಬಣ್ಣ ಬಣ್ಣದ ಓಕುಳಿ!

# ಕನ್ನಡ ಕವಚ

ಕನ್ನಡ ಕವಚ
ಕನ್ನಡ ಕುಂಡಲ
ಕನ್ನಡ ಬಿಲ್ಲು ಬತ್ತಳಿಕೆ

ಕನ್ನಡ ರಥವು
ಕನ್ನಡ ಪಥವು
ನಡೆ ಬಾಳಿನ ಕೊಳಗುಳಕೆ!

ಎಲ್ಲಿದೆ ಭಯವು
ಎಲ್ಲೆಡೆ ಜಯವು
ಕನ್ನಡ ನಂಬಿದ ಕಲಿಗೆ

ಕನ್ನಡ ನೆಚ್ಚು
ಕೊಡುವುದು ಕೆಚ್ಚು
ಗೆಲವು ಕನ್ನಡದ ಛಲಿಗೆ!

ಕನ್ನಡ ಬಳಸು
ಕನ್ನಡ ಉಳಿಸು
ಕನ್ನಡವಾಗಲಿ ಉಸಿರು!

ಕನ್ನಡ ಬೆಳೆಸು
ಕನ್ನಡ ಗೆಲಿಸು
ಹಬ್ಬಿಸು ಕನ್ನಡ ಹೆಸರು!



# ನುಡಿದಳಿಂತು ಭಾರತಾಂಬೆ

ನುಡಿದಳಿಂತು ಭಾರತಾಂಬೆ
ಅರಿಯಿರಿ;
ನನ್ನ ನೋಡಿ ಭಿನ್ನತೆಗಳ
ಮರೆಯಿರಿ;
ತಾಯ ನುಡಿಯ ಸೊದೆಯ ಸವಿಯ
ಸುರಿಯಿರಿ;
ಸಣ್ಣತನವ ಕುನ್ನಿತನವ
ತೊರೆಯಿರಿ;
ಕೃತಿಗಳಲ್ಲಿ ನನ್ನ ಹಿರಿಮೆ
ಮೆರೆಯಿರಿ;



ಕಾಲಪಟದಿ ನಿಮ್ಮ ಹೆಸರು
ಬರೆಯಿರಿ;
ಕಾಲ ಕರ್ಮ ವಿಧಿಯ ಹಲ್ಲು
ಮುರಿಯಿರಿ;
ಅವರ ಹಂಗು ಇವರ ಹಂಗು
ಹರಿಯಿರಿ;
ಬಂಜೆನೆಲದಿ ಗಂಗೆಯಾಗಿ
ಹರಿಯಿರಿ;
ಬೀಳು ನೆಲದಿ ಕಾಯಕಗಳ
ತೆರೆಯಿರಿ;
ಕತ್ತಲೆಯಲಿ ದೀಪವಾಗಿ
ಉರಿಯಿರಿ;
ಹಸಿದವರಿಗೆ ಅನ್ನವಾಗಿ
ದೊರೆಯಿರಿ;
ಕಂದಗಳಿಗೆ ಹಸುಗಳಾಗಿ
ಕರೆಯಿರಿ;
ಇಲ್ಲದವರಿಗೆಲ್ಲವಾಗಿ
ಪೊರೆಯಿರಿ;
ನೂರು ವಿದ್ಯೆ ಕಲೆಗಳಲ್ಲಿ
ನುರಿಯಿರಿ;
ಜಗದ ಮೇಲೆ ಸುಹಿತವಾಗಿ
ಸುರಿಯಿರಿ;
ನನ್ನ ನೋಡಿ ಭಿನ್ನತೆಗಳ
ಮರೆಯಿರಿ;
ಕೃತಿಗಳಲ್ಲಿ ನನ್ನ ಹಿರಿಮೆ
ಮೆರೆಯಿರಿ!

# ನಮ್ಮ ನೇತಾ!

ಎಲ್ಲಿಯೇ ಇರು ನೀನು
ಅಲ್ಲಿಗೇ ತಲುಪಲಿ
ನಮ್ಮ ಈ ನಮನಗಳು
ನಮ್ಮ ನೇತಾ!

ಎಲ್ಲಿದ್ದರೂ ನಿನಗೆ
ನಮ್ಮದೇ ಕಾಳಜಿಯು
ಬಿಡುಗಡೆಯ ಕಡುಗಲಿಯೆ
ಸುಭಾಸ ತಾತ!

ಇನ್ನಾವ ದೇಶದಾ
ಮಕ್ಕಳಿಗೆ ಇಹುದಿಂಥ
ಉಕ್ಕಿನೆದೆ ಕಕ್ಕನನು
ಪಡೆದ ಭಾಗ್ಯ?

ಬಾಳುವುದೆ ಗುರಿ ನಮಗೆ
ಅವನ ದೇಶ ಪ್ರೀತಿ
ಹಿರಿಯ ಉದ್ದೇಶಕ್ಕೆ
ಆಗಿ ಯೋಗ್ಯ!

ಕಾಲಪಥದಲಿ ನಿನ್ನ
ಹೆಜ್ಜೆಗುರುತುಗಳಿಹವು
ಒಂದೊಂದು ಹೆಜ್ಜೆಯೂ
ಹೆಜ್ಜೋಡರು ನೇತಾ!

ಆ ಬೆಳಕನೇ ನಂಬಿ
ಮುನ್ನಡೆದು ನಿನ್ನ ಜಸ
ದೆಸೆದೆಸೆಗೆ ಹರಡುವೆವು
ಸುಭಾಸ ತಾತ!

ನಿನ್ನ ನೆನೆವೆವು ನಿತ್ಯ
ನಿನ್ನ ನೆನೆವುದೆ ಸತ್ವ
ನಮ್ಮ ರಾಷ್ಟ್ರದ ರತ್ನ
ಸುಭಾಸ ತಾತ!

ನಿನ್ನ ಪ್ರೀತಿಯ ಪಾರಿ
ಜಾತ ಸುರಿಯುತ್ತಿರಲಿ
ನಮ್ಮ ತಲೆಗಳ ಮೇಲೆ
ನಮ್ಮ ನೇತಾ!

ದೇಶಭಕ್ತಿಯ ನೀಡು
ಕಾರ್ಯಶಕ್ತಿಯ ನೀಡು
ಭಯ ವಿಮುಕ್ತಿಯ ನೀಡು
ಸುಭಾಸ ತಾತ!

ಧ್ಯೇಯರಕ್ತಿಯ ನೀಡು
ಪ್ರಗತಿಸಕ್ತಿಯ ನೀಡು
ಜಯದ ಯುಕ್ತಿಯ ನೀಡು
ನಮ್ಮ ನೇತಾ!



# ಹೊನ್ನ ಬೆಳೆ

ಬೆಳೆಯ ಜೊತೆಗೆ ಕಳೆಯು ಬಂತು
ಕಿತ್ತು ಕಳೆಯೊ ಕಳೆಯನು!
ಸಸಿಯ ಜೊತೆಗೆ ಕಸಿಯು ಬಂತು
ಅಳಿಸೊ ಕಸಿಯ ಕುಲವನು!
ರಸದ ಕೂಡ ಕಸವು ಬಂತು
ಸುಟ್ಟು ಹಾಕು ಕಸವನು!
ಭರತಭೂಮಿ ಹಸನವಾಗಿ
ಬೆಳೆಯಲಿನ್ನು ಯಶವನು!

ಪ್ರತಿಭೆ ಶೀಲ ಯತ್ನನೂತ್ನ
ಚಿಗಿಯಲಿನ್ನು ದೇಶದಿ!
ಸಾಧನೆಗಳ ವಜ್ರವಿದರ
ಭಾಗ್ಯರತ್ನಕೋಶದಿ!
ಅಡ್ಡಿ–ಗುಡ್ಡ ಕಡಿದು ರಚಿಸು
ಪ್ರಗತಿಯ ಹೆದ್ದಾರಿಯ–
ಇಕ್ಕೆಲದಲಿ ಹೊನ್ನ ಬೆಳೆಯು :
ಹೊಸನರನ, ನಾರಿಯ!



# ಆಸೆ

ಇದುವರೆಗೆ ತಿಳಿಯದುದ
ತಿಳಿಯುವಾಸೆ
ಇದುವರೆಗೆ ಬೆಳೆಯದುದ
ಬೆಳೆಯುವಾಸೆ
ಇದುವರೆಗೆ ಕಾಣದುದ
ಕಾಣುವಾಸೆ
ಮಾಣಬೇಕಾದುದನು
ಮಾಣುವಾಸೆ
ಓದುಮನೆಯಲಿ ಬೆಳಗಿ
ಊರೊಳಗೆ
ಹೊಳೆವಾಸೆ

ನಾಡ ಕಟ್ಟುವ ಜನಕೆ
ನೆರವಾಗುವಾಸೆ

ಬೆಂಕಿ ಬಿದ್ದಿಹ ಸ್ಥಳಕೆ
ನೀರಾಗಿ ಹರಿವಾಸೆ
ಅಳುವವರ ಕಣ್ಣುಗಳ
ನೀರೊರೆಸುವಾಸೆ
ಏನೇನೊ ಆಸೆಗಳು
ಬಾಲ ಮನಕೆ
ಎಳೆಯುತಿವೆ ನನ್ನನ್ನು
ಧೀರತನಕೆ
ನಾನು ಕಿರಿಯನು, ನನ್ನ
ಆಸೆಗಳು ಕಿರಿಯಲ್ಲ;
ದೇವ ಕೊಡು ಶಕ್ತಿಯನು
ಸಾಧಿಸಲು ಇವನೆಲ್ಲ!



# ಮೀರುವೆನು

ನರಿಯ ಯುಕ್ತಿಯಲಿ ಮೀರುವೆನು
ಮೀರುವೆನಾನೆಯ ಬಲದಲ್ಲಿ
ವೀರದಿ ಮೀರುವೆ ವನದ ರಾಜನನು
ಗರುಡನ ಮೀರುವೆ ಛಲದಲ್ಲಿ!

ನವಿಲನು ಮೀರುವೆ ನರ್ತನದಲ್ಲಿ
ಅರಗಿಳಿಯನು ಸವಿಮಾತಿನಲಿ
ಜಿಂಕೆಯ ಓಟದಿ ಹಕ್ಕಿಯ ನೋಟದಿ
ಮೀರುವೆನಳಿಯ ಸುಗೀತದಲಿ!

ಕೋಳಿಯ ಮೀರುವೆ ಕಾಲನಿಷ್ಠೆಯಲಿ
ಇರುವೆಯ ಮೀರುವೆ ದುಡಿತದಲಿ
ನಾಯಿಯ ಮೀರುವೆ ನಂಬಿಕೆಯಲ್ಲಿ
ಉಡವನು ಮೀರುವೆ ಹಿಡಿತದಲಿ!

ಎಲ್ಲರ ಮೀರುವೆ, ಎಲ್ಲವ ಮೀರುವೆ,
ಮೀರುವೆ ನಾನು ನನ್ನನ್ನೇ!
ಅವರನು ಇವರನು ಮೀರಲಿ ಬಿಡಲಿ
ಮೀರುವುದೊಳಿತು ತನ್ನನ್ನೇ!



# ಕಿಟ್ಟಪ್ಪಾ, ಕಿಟ್ಟಪ್ಪಾ!

ಕಿಟ್ಟಪ್ಪಾ, ಕಿಟ್ಟಪ್ಪಾ–
ಕೊಳಲನಾರಿಗೆ ಕೊಟ್ಟೆಪ್ಪ?
ರಾಧೆಯನೆಲ್ಲಿ ಬಿಟ್ಟೆಪ್ಪ?
ಮುಕುಟವನೆಲ್ಲಿ ಇಟ್ಟೆಪ್ಪ?
ಕಿಟ್ಟಪ್ಪಾ, ಕಿಟ್ಟಪ್ಪಾ!

ದುಷ್ಟರ ತಲೆಯನು ಕುಟ್ಟಪ್ಪ
ಕಾಳಿಂಗನ ಫಣಿ ಮೆಟ್ಟಪ್ಪ
ಧರ್ಮಗೆ ಪಟ್ಟವ ಕಟ್ಟಪ್ಪ–
ಕಿಟ್ಟಪ್ಪಾ, ಕಿಟ್ಟಪ್ಪಾ!

ಹಸುಗಳ ಮನೆಗೆ ಅಟ್ಟಪ್ಪ
ಹಣೆಯಲಿ ಕಸ್ತುರಿ ಬೊಟ್ಟಪ್ಪ
ಬೆರಳಲಿ ಭಾರೀ ಬೆಟ್ಟಪ್ಪ–
ಕಿಟ್ಟಪ್ಪಾ, ಕಿಟ್ಟಪ್ಪಾ!

ಪೀತಾಂಬರವನು ಉಟ್ಟೆಪ್ಪ
ತುಳಸೀಮಾಲೆಯ ತೊಟ್ಟೆಪ್ಪ
ಕಳವಿನ ಬೆಣ್ಣೆಯ ಕೊಟ್ಟೆಪ್ಪ–
ಕಿಟ್ಟಪ್ಪಾ, ಕಿಟ್ಟಪ್ಪಾ!



# ನೀನೂ ನನ್ನಷ್ಟಿದ್ದಾಗ

ಅವ್ವಾ,
ನೀನೂ ನನ್ನಷ್ಟಿದ್ದಾಗ
ಅಪ್ಪಾಲೆ ತಿಪ್ಪಾಲೆ
ಆಡಿದೆಯಾ?
ಗೊಂಬೆಯ ಮದುವೆ
ಮಾಡಿದೆಯಾ
ಉಂಡಿಗೆ ಅವ್ವನ
ಕಾಡಿದೆಯಾ?

ಅವ್ವಾ,
ನೀನೂ ನನ್ನಷ್ಟಿದ್ದಾಗ
ಕೋಲ ಕುದುರೆಯನು
ಏರಿದೆಯಾ?
ಕಟ್ಟೆಯ ಹತ್ತಿ
ಹಾರಿದೆಯಾ?
ಸಿಂಗಾರದಾಸೆಯ
ತೋರಿದೆಯಾ?

ಅವ್ವಾ,
ನೀನೂ ನನ್ನಷ್ಟಿದ್ದಾಗ
ಮಕ್ಕಳ ಪದ್ಯ
ಹಾಡಿದೆಯಾ?
ಕೈಯನು ತಟ್ಟಿ
ಓಡಿದೆಯಾ?
ಕೊಬ್ಬರಿ ಬೆಲ್ಲ
ಬೇಡಿದೆಯಾ?



ಅವ್ವಾ,
ನೀನೂ ನನ್ನಷ್ಟಿದ್ದಾಗ
ಅಜ್ಜಿಯ ಕತೆಗಳ
ಕೇಳಿದೆಯಾ?
ಅಜ್ಜನ ಹೆಗಲನು
ಆಳಿದೆಯಾ?
ಅಪ್ಪಗೆ ದೂರನು
ಹೇಳಿದೆಯಾ?

# ನೀನೇನಾಗ್ತೀ?

ನೀನೇನಾಗ್ತೀ
ನೀನೇನಾಗ್ತೀ–
ಅಂತಾ ಕೇಳ್ತಾರಮ್ಮ

ನೀನೇನ್ ಹೇಳ್ದಿ?
ನೀನೇನ್ ಹೇಳ್ದಿ–
ಅಂತಾ ಕೇಳ್ತಾಳೆ ಅಮ್ಮ



ನಾನು ನಾನಾಗ್ತೀನಿ
ನಾನು ನಾನಾಗ್ತೀನಿ
ಅಂತಾ ಹೇಳಿದೆನಮ್ಮ

ಸರಿಯಾಗಿ ಹೇಳ್ದಿ,
ಸರಿಯಾಗಿ ಹೇಳ್ದಿ
ಅಂತಾ ಹೇಳಿದಳಮ್ಮ!

ಅವರ ಹಾಂಗಾಗು,
ಇವರ ಹಾಂಗಾಗು–
ಅಂತಾ ಹೇಳಿದರಮ್ಮ

ನೀನೇನೆಂದಿ?
ನೀನೇನೆಂದಿ_
ಅಂತಾ ಕೇಳಿದಳಮ್ಮ

ನನ್ನ ಹಾಂಗಾಗ್ತೀನಿ
ನನ್ನ ಹಾಂಗಾಗ್ತೀನಿ–
ಅಂತಾ ಹೇಳಿದೆನಮ್ಮ!

ಸರಿಯಾಗಿ ಹೇಳ್ದಿ
ಸರಿಯಾಗಿ ಹೇಳ್ದಿ–
ಅಂತಾ ಅಂದಳು ಅಮ್ಮ!

# ಯಾಕಮ್ಮ?

ಹಬ್ಬವು ಮಾತ್ರ ಒಂದೇ ದಿನ
ಶಾಲೆಯಾದರೋ ದಿನದಿನ–
ಯಾಕಮ್ಮ?

ಅಕ್ಕನು ಮಾತ್ರ ಪಂಚಮಿಗೊಮ್ಮೆ
ಅತ್ತಿಗೆಯಾದರೊ ಇಲ್ಲೇ ಗಟ್ಟಿ–
ಯಾಕಮ್ಮ?

ಮಳೆಯು ಮಾತ್ರ ನಾಲ್ಕು ತಿಂಗಳು
ಆಣೆಕಲ್ಲುಗಳು ಎಂದೋ ಒಮ್ಮೆ
ಯಾಕಮ್ಮ?

ಇಂಗ್ಲಿಷ್ ಇಲ್ಲಿ ಮೂರೂ ಹೊತ್ತು
ಕನ್ನಡ ಮಾತ್ರ ಆಗಾಗ–
ಯಾಕಮ್ಮ?

ನಿನ್ನ ಪ್ರೀತಿಯು ನಾಲ್ಕೂ ಹೊತ್ತು
ಅಪ್ಪನ ಪ್ರೀತಿಯು ಎಂದೋ ಒಮ್ಮೆ–
ಯಾಕಮ್ಮ?



# ಮಾಸ–ಮಾಲೆ



ಚೈತ್ರವು ತರುವುದು ಚಿಗುರನ್ನು
ವೈಶಾಖ ದೋರೆಯ ಹೊಗರನ್ನು
ಜ್ಯೇಷ್ಠ ಮೈಯಲಿ ಬೆವರನ್ನು
ಆಷಾಢ ಗಾಳಿಯ ದಾಳಿಯನು

ಶ್ರಾವಣ ತರುವುದು ಮೋಡಗಳ
ಭಾದ್ರಪದ ಬಾನಿನ ಹಾಡುಗಳ
ಅಶ್ವೀಜ ಹಸುರಿನ ಬೆಡಗುಗಳ

ಕಾರ್ತಿಕ ನಿಲಿಪುದು ಗುಡುಗುಗಳ
ಮಾರ್ಗಶಿರ ತರುವುದು ಮೈಚಳಿಯ
ಪುಷ್ಯ ಮಂಜಿನ ಬಿಳಿ ಚಳೆಯ

ಮಾಘವು ಸುಗ್ಗಿಯ ಸಡಗರವ
ಫಾಲ್ಗುಣ ವಸಂತದುಡುಗೊರೆಯ
ಮಾಸ–ಮಾಲೆಯಿದ ಹೆಣೆಯುವೆನು
ತಾಯಿಗೆ ಅರ್ಪಿಸಿ ಮಣಿಯುವೆನು

# ದಿಕ್ಕುಗಳ ಹಾಡು



ಸೂರ್ಯ ಮೂಡುವುದೆ
ಪೂರ್ವದ ದಿಕ್ಕು
ಅವನು ಮುಳುಗುವುದೆ
ಪಶ್ಚಿಮ ದಿಕ್ಕು
ಪೂರ್ವದ ಕಡೆಗೆ
ಮುಖಮಾಡು
ಎಡಗಡೆ ಉತ್ತರ
ಇರುವುದು ನೋಡು
ಬಲಗಡೆಗಿರುವುದು
ದಕ್ಷಿಣ ದಿಕ್ಕು
ಈಗ ತಿಳಿದುವೆ
ನಾಲ್ಕು ದಿಕ್ಕು?



ಪೂರ್ವ ಉತ್ತರದ
ನಡುವೆ ಈಶಾನ್ಯ
ಪೂರ್ವ ದಕ್ಷಿಣದ
ನಡುವೆ ಆಗ್ನೇಯ
ಉತ್ತರ ಪಶ್ಚಿಮದ
ನಡುವೆ ವಾಯುವ್ಯ
ದಕ್ಷಿಣ ಪಶ್ಚಿಮದ
ನಡುವೆ ನೈರುತ್ಯ
ದಿಕ್ಕುಗಳೆಂಟು
ಹಾಡಿದೆ ನಿಂತು

# ಹುಟ್ಟು ಹಬ್ಬ

ಇಂದು ನಮ್ಮ ಪಾಪನ
ಹುಟ್ಟುಹಬ್ಬವು
ಅದಕಾಗಿಯೆ ಬರೆದುದೀ
ಪುಟ್ಟ ಕಬ್ಬವು
ತೊಳೆದ ಮೈಯು, ಹೊಳೆವ ಕಣ್ಣು,
ನಗುವ ಬಾಯಿಯು;
ಬಣ್ಣದಂಗಿ, ಜರೀಟೋಪಿ,
ಮೇಲ್ತುರಾಯಿಯು!
ತಿಪ್ಪತಿಪ್ಪ ಹೆಜ್ಜೆಯಿಡುತ
ಪಾಪ ನಡೆದರೆ
ಸೊಬಗೆ ನಡೆದ ಹಾಗೆ, ಗಾನ
ಪಾಪ ನುಡಿದರೆ!
ಕಾಣಿಕೆಗಳ ಮಳೆಯೆ ಬಂತು
ಹುಟ್ಟು ಹಬ್ಬಕಾಗಿ
ಪಾಪ ಹುಡುಕಾಡುತಿತ್ತು
ಚಾಕ್ಲೆಟ್ ಡಬ್ಬಕಾಗಿ
ಹಿರಿಯರ ಹರಕೆಗಳ ಸರಿಯು,
ನಮ್ಮ ಕೇಕೆ ಕುಣಿತ–
ಮರೆತು ಹೋಯ್ತು ಪಾಠಶಾಲೆ,
ಬಳ್ಪಿ, ಮಗ್ಗಿ, ಗಣಿತ!



# ಯೋಗ್ಯತೆ ಬೆಳೆಸೋಣ!

ರಾಮನ ಪಾತ್ರ
ವಹಿಸಿದರನು
ರಾಮನೆ ಆಗುವನೆ?

ಸೀತೆಯ ಪಾತ್ರ
ವಹಿಸಿದವಳು
ಸೀತೆಯೆ ಆಗುವಳೆ?

ಹುಲಿಯ ವೇಷ
ಹಾಕಿದವನು
ಹುಲಿಯೇ ಆಗುವನೆ?

ದೇವಿಯ ವೇಷ
ಹಾಕಿದವಳು
ದೇವಿಯೆ ಆಗುವಳೆ?

ಪಾತ್ರ ಅಮುಖ್ಯ
ಪಾತ್ರತೆ ಮುಖ್ಯ
ಪಾತ್ರತೆ ಗಳಿಸೋಣ!

ವೇಷ ಅಮುಖ್ಯ,
ಯೋಗ್ಯತೆ ಮುಖ್ಯ,
ಯೋಗ್ಯತೆ ಬೆಳೆಸೋಣ!



# ಸರಪಳಿ

ಕನ್ನಡ ಕನ್ನಡ<br>
ಯಾವ ಕನ್ನಡ?<br>
ತಿರುಳುಗನ್ನಡ–<br>
ಯಾವ ತಿರುಳು?<br>
ಮಾವಿನ ತಿರುಳು–<br>
ಯಾವ ಮಾವು?<br>
ಜೇನು ಮಾವು–<br>
ಯಾವ ಜೇನು?<br>
ಕೊಡಗಿನ ಜೇನು–<br>
ಯಾವ ಕೊಡಗು?<br>
ಬೆಡಗಿನ ಕೊಡಗು–<br>
ಯಾವ ಬೆಡಗು?<br>
ಹುಡುಗಿಯ ಬೆಡಗು–<br>
ಯಾವ ಹುಡುಗಿ?<br>
ಬೆಂಗ್ಳೂರು ಹುಡುಗಿ–<br>
ಯಾವ ಬೆಂಗಳೂರು?<br>
ಕೆಂಪೇಗೌಡನ ಬೆಂಗ್ಳೂರು?<br>
ಯಾವ ಕೆಂಪೇಗೌಡ<br>
ಕನ್ನಡಿಗರ ಕೆಂಪೇಗೌಡ<br>
ಯಾರು ಕನ್ನಡಿಗ?<br>
ಕನ್ನಡ ಕಲಿತವ<br>
ಕನ್ನಡಿಗ!





# ಬೆಂಡು–ಬತ್ತಾಸು

ಜಾತ್ರೆಗೆ ಹೋದ ಅಜ್ಜನು ತಂದನು
ಬೆಂಡೂ ಬತ್ತಾಸ

ಮೊಮ್ಮಕ್ಕಳು ತಿಂದೇ ತಿಂದರು
ತಾಳುತ ಉಲ್ಲಾಸ

ಅಣ್ಣನು ತಿಂದನು ಕುದುರೆಯ,
ತಮ್ಮನು
ತಿಂದನು ರಥವನ್ನೇ!

ಅಕ್ಕನು ತಿಂದಳು ಆನೆಯ, ತಂಗಿಯು
ತಿಂದಳು ವರೂಥವನೆ!

ಕೋತಿಯ ತಿನ್ನಲು ಯಾರೂ ಒಪ್ಪರು–
ಆಡಿದರದರೊಡನೆ;

ಗಣಪನ ಪೂಜಿಸಿ, ಗಂಟೆಯ ಬಾಜಿಸಿ
ಕುಣಿದರು ಮುದದೊಡನೆ!



# ಚುಟುಕುಗಳು

ಯುಗಾದಿಗೆ ಬೇವು ಬೆಲ್ಲ
ಸಂಕ್ರಾಂತಿಗೆ ಎಳ್ಳು ಬೆಲ್ಲ
ಯಾವ ಹಬ್ಬವೆ ಬಂದರೂ
ಬರಿಗೈಯಿಂದ ಬರುವುದಿಲ್ಲ

* *

ಹೊಲದಲ್ಲಿ ಜೋಳದ ತೆನೆ
ತೋಟದಲ್ಲಿ ಬಾಳೆಯ ಗೊನೆ
ಮನೆಯ ಮುಂದೆ ಮಲ್ಲಿಗೆ ಬಳ್ಳಿ
ಹೇರಿಕೊಂಡಿದೆ ನನೆಕೊನೆ

* *

ಮನೆಯಲಿ ಅವ್ವನ ಬೀಸುವ ಪದ
ಕಣದಲಿ ಅಪ್ಪನ ಹಂತಿಯ ಪದ
ಭಿಕ್ಷುಕ ಬಂದರೆ ದಾಸರ ಪದ
ಶಾಲೆಗೆ ಹೋದರೆ ನೀತಿಯ ಪದ

* *

ನಾಯಿಯ ಸಾಕಿದೆ ನಾನೊಂದು
ಎಲ್ಲೋ ಸಿಕ್ಕಿದ ಮೂಳೆಯ ತಂದು
ನಡುಮನೆಯಲ್ಲಿ ಬೀಸಾಡೆ
ಓಡಿಸಿಬಿಟ್ಟಳು ಅಜ್ಜಿಯು ಬಂದು

* *

ಹುಚ್ಚನು ಬಂದನು ಹಲ್ಲನು ಕಿರಿಯುತ
ಉಟ್ಟಬಟ್ಟೆಗಳ ಪರಪರ ಹರಿಯುತ
ನಗುನಗುತಳುತ ಕೂಗುತ ಕರೆಯುತ
ಸರಿದು ಹೋದವರೆ ಅಂಜಿದರೆನುತ

* *



ಮಣ್ಣಿನ ಎತ್ತಿಗೆ ಬೇಗಡೆ ಹಚ್ಚಿ
ಬೆನ್ನಿಗೆ ರೇಷ್ಮೆಯ ಜೂಲವ ಹೊಚ್ಚಿ
ಬೆಂಡಿನ ಬಂಡಿಗೆ ಹೂಡಿದರದನು
ಜೊಂಡಿನ ಹುಡುಗನ
ಹೊಡೆಯಲು ಹಚ್ಚಿ

* *

ಬೋಲ ಬುಗುರಿಯ ಗಿರಿಗಿರಿ
ತಿರುಗಿಸಿ ಹಿಗ್ಗಿದ ಹಿರಿಹಿರಿ
ಅಣ್ಣನು ಬಂದು ಕಸಿದುಕೊಳ್ಳಲು
ತಮ್ಮನು ಅತ್ತನು ಪಿರಿಪಿರಿ

* *

ಮರದಲಿ ಹಕ್ಕಿಯ ಚಿಲಿಪಿಲಿ
ಮನೆಯಲಿ ಪಾಪನ ಗಲಿಬಿಲಿ
ಕೇಳುತಲೆರಡನು ಸಾಕಿದ ನಾಯಿ
ಕಣ್ಣು ಬಿಟ್ಟಿತು ಪಿಳಿಪಿಳಿ

* *

ಕುಂಟ ಬಂದನು ಕುಣಿಯುತ್ತ
ಕುಳಿತವರನ್ನು ತುಳಿಯುತ್ತ
ಆನುಗೋಲಿನ ಆಸರ ಪಡೆದು
ನಡೆದನು ಜೋಲಿಯ
ಹೊಡೆಯುತ್ತ

* *

ಸೋಲೇ ಬರಲಿ, ಗೆಲವೇ ಬರಲಿ,
ಆಡು ಆಡು ಆಟವ!
ಆಟಕ್ಕಾಗಿಯೆ ಆಟವು ಗೆಳೆಯನೆ,
ಆಡು ಆಡು ಆಟವ!

* *

# ಹಾವಡಿಗ

ಬಂದನು ಊರಿಗೆ ಹಾವಡಿಗ
ತಂದನು ಸಂಗಡ ಹಾವಿನ ಬಳಗ
ನಾಗರಹಾವು
ಹಸುರುಹಾವು
ಊಸರವಳ್ಳಿ ಹಾವು
ನೀರಳೆ ಹಾವು
ಕೇರೆಯ ಹಾವು
ಮಣ್ಣುಮುಕ್ಕ ಹಾವು

ಬಗೆ ಬಗೆ ಹಾವು
ನಿಗಿನಿಗಿ ಹಾವು
ಝುಗಝುಗ ಹೊಳೆಯುವ ಹಾವು
ನೆಗೆಯುವ ಹಾವು
ಹೊಗೆಯುವ ಹಾವು
ಹೊಗರ ಹೊಮ್ಮಿಸುವ ಹಾವು



ಹೇಳಿಗೆ ತೆಗೆದು
ಒಂದೊಂದನ್ನೂ
ತೋರಿಸಿದನು ಹಾವಡಿಗ
ನಾಗರಹಾವನು
ನೋಡುತ ಚಟ್ಟನೆ
ಚೀರಿದನೊಬ್ಬನು ಕಿರಿಹುಡುಗ

ಹಾವನು ಸುರುಳಿ
ಸುತ್ತಿ ಮಾಡಿದನು
ಹುಡುಗರ ಕೊರಳಿಗೆ ಹಾರ
ಮಾಡಿದನದನೇ
ಹುಡುಗರ ನಡುವಿಗೆ
ಬೆಡಗಿನ ಬಿಂಕದ ಉಡುದಾರ

ಬ್ರಾಹ್ಮಣ ಬಾಲಕ–
ಗದನೇ ಮಾಡಿದ
ಹೊಸ ಮಾದರಿ ಜನಿವಾರ
ಲಿಂಗವಂತ ಹುಡು–
ಗನಿಗೆ ಮಾಡಿದನು
ಥಳಥಳ ಹೊಳೆಯುವ ಶಿವದಾರ!

ಹೆದರಿದ ಹುಡುಗರ
ಹೆದರಿಕೆ ಕಳೆದು
ನೋಡುವರಳುಕನು ಅಳಿಸಿ
ನೋಡ ನೋಡುತಲೆ
ಮಾಮರ ಬೆಳೆಸಿ
ನಲಿದನು ಬಾಲರ ನಲಿಸಿ

ಹಾವಿನ ಬುಟ್ಟಿಯು
ಹಣದ ಬುಟ್ಟಿಯು
ಆಯಿತು ಜನ ಹಣ ನೀಡೆ
ಅಂದಿನ ಆ ದಿನ
ನೆನೆದಾಗೆಲ್ಲ
ಹರಿವುದು ಹಿಗ್ಗಿನ ಕೋಡಿಯೆ!

# ಸೆಟ್ಟಿಯ ಯುಕ್ತಿ



ಟೊಪ್ಪಿಗೆ ಮಾರುವ
ವ್ಯಾಪಾರಿ
ಬಂದನು ಮರದಡಿ
ಬಾಯಾರಿ
ಟೊಪ್ಪಿಗೆ ಗಂಟು
ಕೆಳಗಿರಿಸಿ
ಮಲಗಿದ ನೆಲದಲಿ
ಕಸ ಸರಿಸಿ

ಗಡದ್ದು ನಿದ್ದೆ
ಹತ್ತಿತು ಬೇಗ
ಮಂಗಗಳಿಳಿದವು
ಹಾಕುತ ಲಾಗ
ಎಲ್ಲ ಕೋತಿಗಳ
ತಲೆ ಮೇಲೆ
ಟೊಪ್ಪಿಗೆ ಮೆರೆದುವು
ನಿಮಿಷದಲೆ!

ಟೊಪ್ಪಿಗೆ ಧರಿಸಿ
  ಬಾಲವ ತುರಿಸಿ
ಜಿಗಿದುವು ರೆಂಬೆಗೆ
  ಚೆಚ್ಚರಿಸಿ
ಸೆಟ್ಟಿಯು ಎದ್ದನು
  ಟೊಪ್ಪಿಗೆ ಜಲ್ಲಿ
ಖಾಲಿಯಾಗಿರಲು
  ಬದಿಯಲ್ಲಿ

ಸುತ್ತಲು ನೋಡಿದ
  ಸುಳಿವೇ ಇಲ್ಲ
ಮೇಲಕೆ ನೋಡಿದ
  ಮಂಗಗಳೆಲ್ಲ
ಟೊಪ್ಪಿಗೆ ಹಾಕಿ
  ಮಾಡುತ ಷೋಕಿ
ಅಣಕಿಸುತಿದ್ದುವು
  ತುಸು ಜೀಕಿ

ಸೆಟ್ಟಿಯು ಏರಿದ
  ಸರಸರ ಮರವನು
ಮಂಗ ಏರಿದುವು
  ತುದಿಗಳನು

ರೆಂಬೆ ರೆಂಬೆಗೆ
  ನೆಗೆದುವು ಕೆಲವು
ಜೋತು ಬಿದ್ದವು
  ಬಳ್ಳಿಗೆ ಹಲವು

ಏನು ಮಾಡಿದರು
  ಸೆಟ್ಟಿಯ ಕೈಗೆ
ಸಿಕ್ಕದಿರಲು ಅವ–
  ನಿಳಿದನು ಕೆಳಗೆ

ಶಕ್ತಿಗಿಂತಲೂ
  ಯುಕ್ತಿಯು ಮೇಲು
ಎಂಬುದ ನೆನೆದು
  ಮಾಡಿದ ಮಸಲು

ತನ್ನಯ ತಲೆಯ
  ಟೊಪ್ಪಿಗೆಯನ್ನು
ಕಿತ್ತು ಎಸೆದನು
  ನೋಡಿದನೇನನು!

ಕೋತಿಗಳೆಲ್ಲವು
  ಎಸೆದುವು ತಮ್ಮ
ತಲೆಯ ಟೊಪ್ಪಿಗೆಯ
  ಸೆಟ್ಟಿಯ ಸೊಮ್ಮ

ಹಿಗ್ಗಿದ ಸೆಟ್ಟಿ
  ಆಯ್ದನು ಟೊಪ್ಪಿಗೆ
ಜಲ್ಲಿಯ ಹೊತ್ತು
  ನಡೆದನು ತೆಪ್ಪಗೆ!

# ನಾವು ದಡ್ಡರು ಆದರೆ ಹೇಗೆ?

ನಮ್ಮ ದೇಶವು ದೊಡ್ಡ ದೇಶವು
ನಾವು ಸಣ್ಣವರಾದರೆ ಹೇಗೆ?

ನಮ್ಮ ದೇಶವು ಸಿರಿಯ ದೇಶವು
ನಾವು ಬಡವರು ಆದರೆ ಹೇಗೆ?

ನಮ್ಮ ದೇಶವು ಧರ್ಮದ ದೇಶವು
ನಾವು ಅಧರ್ಮಿಗಳಾದರೆ ಹೇಗೆ?

ನಮ್ಮ ದೇಶವು ನೀತಿಯ ದೇಶವು
ನೀತಿಹೀನರು ನಾವಾದರೆ ಹೇಗೆ?

ನಮ್ಮಯ ಊರು ದುಡಿವರ ಊರು
ಮೈಗಳ್ಳರು ನಾವಾದರೆ ಹೇಗೆ?

ನಮ್ಮಯ ಶಾಲೆ ಜಾಣರ ಶಾಲೆ
ನಾವು ದಡ್ಡರು ಆದರೆ ಹೇಗೆ?



# ಬಹುಜನ ಹಿತಾಯ, ಬಹುಜನ ಸುಖಾಯ!

ಬಹುಜನ ಹಿತಾಯ
ಬಹುಜನ ಸುಖಾಯ
ಎಂಬ ನೀತಿಗೆ ಮೀಸಲೆನ್ನಯ
ಸೊತ್ತು, ಸೇವೆ, ಸಹಾಯ:
ಬಹುಜನ ಹಿತಾಯ,
ಬಹುಜನ ಸುಖಾಯ!

ಸಣ್ಣವನಾದರು
ಸಣ್ಣತನಕೆ ನಾ
ಹೇಳುವೆನಿಂದು ವಿದಾಯ
ಬಹುಜನ ಹಿತಾಯ,
ಬಹುಜನ ಸುಖಾಯ–
ಎಂಬ ನೀತಿಗೆ ಮೀಸಲೆನ್ನಯ
ಸೊತ್ತು, ಸೇವೆ ಸಹಾಯ!

ಎಲ್ಲರಿಗಾಗದ
ಸಿರಿಯು ಶಾಪವು
ಎಲ್ಲರ ವಂಚಿಸಿ
ಸುಖಿಸೆ ಪಾಪವು
ಓರ್ವನ ವಿಲಾಸ
ಸರ್ವರ ತಾಪವು

ಎಲ್ಲರು ನಂದಿಸಿ ನಲಿದು ಬಾಳಲು
ಇರುವುದೊಂದೆ ಉಪಾಯ–
ಬಹುಜನ ಹಿತಾಯ,
ಬಹುಜನ ಸುಖಾಯ!

ಬನ್ನಿರಿ ಗೆಳೆಯರೆ
ಬನ್ನಿ ಎಳೆಯರ
ತನ್ನಿ ನಿಮ್ಮ ಸದುಹೃದಯ
ಎಲ್ಲರ ಹಿತಕೆ
ಸರ್ವರ ಸುಖಕೆ
ದುಡಿಸಿರಿ ನಿಮ್ಮಯ ಕಾಯ
ಬಹುಜನ ಹಿತಾಯ
ಬಹುಜನ ಸುಖಾಯ–

ಎಂಬ ನೀತಿಗೆ ಮೀಸಲಾಗಲಿ
ನಿಮ್ಮ ಸೊತ್ತು ಸಹಾಯ–
ಇದುವೇ ನಿಜದಲಿ ನ್ಯಾಯ!



# ಭಾರತವೆಲ್ಲಕೆ ಬಾವುಟವೊಂದೇ!

ಭಾರತವೆಲ್ಲಕೆ ಬಾವುಟವೊಂದೇ
ಸಂವಿಧಾನವೊಂದೇ
ಒಂದೇ ಎಲ್ಲರ ಸ್ಥಾನಮಾನಗಳು
ರಕ್ಷಣೆ ಎಲ್ಲರಿಗೊಂದೇ
ಅರ್ಪಿಸಿಕೊಂಡಿಹೆವೀ ಘಟನೆಯನು
ನಾವೆ ನಿಜದಿ ನಮಗೆ
ಸಮಾನ ಸಂಧಿಯ ಸಮಾನ ನ್ಯಾಯವ
ಕೈಗೂಡಿಸಲೆಲ್ಲರಿಗೆ
ಹಲವು ಭಾಷೆಗಳ ಹಲವು ಧರ್ಮಗಳ
ಭಾರತೀಯರೆಲ್ಲರಿಗೆ
ಧಾರ್ಮಿಕ ಲೌಕಿಕ ಸಾಂಘಿಕ ಬೌದ್ಧಿಕ
ಸ್ವಾತಂತ್ರ್ಯವು ಸರ್ವರಿಗೆ

ಸರ್ವರ ಹಿತದಲಿ ಓರ್ವನ ಹಿತವು
ಸರ್ವರು ಸರ್ವರಿಗಾಗಿ
ಒಬ್ಬನ ಕಷ್ಟವು ಎಲ್ಲರನಿಷ್ಟವು
ದೇಶವು ಸರ್ವರಿಗಾಗಿ
ಭಾರತ ಬಾವುಟದಡಿಯಲಿ ದುಡಿಯುವ
ಎಲ್ಲರ ಹಿತಕಾಗಿ
ಬಾವುಟ ರಕ್ಷಿಸಿ, ರಕ್ಷಿಪುದೆಮ್ಮನು
ಪ್ರಗತಿಯ ಪಥಕಾಗಿ



# ನ್ಯಾಯ ನಿರ್ಣಯ

(ಮಕ್ಕಳ ನಾಟಕವಾಗಿ ರೂಪಗೊಂಡ ಅರೇಬಿಯನ್ ನೈಟ್ಸ್ ಕಥೆ)

ಖಲೀಫಾ ಹಾರೂನ್–ಉಲ್–ರಷೀದರ ಕಾಲದಲ್ಲಿ ನಡೆಯಿತೆಂದು ಹೇಳಲಾಗಿರುವ ಈ ಕಥೆ ತುಂಬ ರೋಚಕ. ಇದರಲ್ಲಿ ಬಾಲಕರದೇ ಪ್ರಧಾನ ಪಾತ್ರ.

(ಬಗದಾದಿನ ಬೀದಿಯಲ್ಲಿ ಮಕ್ಕಳ ಆಟ)



**ಕೂಡು ಹಾಡು :**

ನಾಡಿನ ನರದಲಿ ನೆತ್ತರು ನಾವು
ನುಡಿಯ ಬಳ್ಳಿಯಲಿ ನಾವೇ ಹೂವು
ನಾಳಿನ ಕನಸಿನ ಅರ್ಥವು ನಾವು, ನಾವು ಬಾಲರು!
ನಮಗೆ ಮೀರಿದುದು ಯಾವುದಿದೆ?
ನಮ್ಮ ಸಾಹಸಕೆ ಎಲ್ಲಿ ಕೊನೆ?
ಸಕಲ ಲೋಕವೇ ನಮ್ಮ ಮನೆ. ನಾವು ಬಾಲರು!
ಬಗದಾದಿನ ಭಾಗ್ಯದ ಬಾಗಿಲ ತೆರೆವೆವು
ದೇಶದ ಘನತೆಯ ಗೀತೆಯ ಬರೆವೆವು
ಬದುಕಿಗೆ ಹೊಸ ಹೊಸ ತಿರುವನು ತರುವೆವು. ನಾವು ಬಾಲರು!
ಒಳ್ಳಿದವರಿಗೆ ಮುಡುಪೆಮ್ಮಯ ನೆರವು
ಆಗದು ನಮಗೆ ಕೆಡುಕರ ಇರವು
ಬರದಿರಲಿಲ್ಲಿಗೆ ನ್ಯಾಯದ ಬರವು. ನಾವು ಸುಶೀಲರು!

**ಜಕಿ** : ಇವೊತ್ತು ಯಾವ ಕೊಳೆತ ಮೀನು ಬೀಳುತ್ತೋ ನೋಡೋಣ ನಮ್ಮ ಬಲೆಗೆ.

**ಜಾಕೋಬ್:** ನಿತ್ಯ ಕೊಳೆತ ಮೀನನ್ನೇ ಹಿಡಿಯುವಂತಾಯ್ತಲ್ಲೋ ಜಕಿ ನಮ್ಮ ಹಣೆಯ ಬರಹ!

**ಜಕಿ** : ನಿನ್ನ ಯಹೂದೀ ಬುದ್ಧಿ ಎಲ್ಲಿ ಹೋಗುತ್ತೆ ಜಾಕೋಬ. ಕೊಳೆತ ಮೀನು ಕೆರೆಯಲ್ಲಿಯೇ ಕೊಳೆಯುತ್ತಿರಲಿ, ಒಳ್ಳೆಯ ಮೀನು ಹಿಡಿದೊಯ್ದು ತಿಂದರಾಯಿತು. ಎನ್ನುವಂತಿದೆ ನೀನು. ಆದರೆ ನೆನಪಿರಲಿ, ಒಂದೇ ಒಂದು ಕೊಳೆತ ಮೀನವೂ ಸಾಕು–ಕೆರೆಯನ್ನೆಲ್ಲ ದುರ್ಗಂಧಗೊಳಿಸಲು. ಆದುದರಿಂದ ಕೊಳೆತ ಮೀನುಗಳನ್ನು ಕೆರೆಯಿಂದ ತೆಗೆದೊಗೆಯುವುದೇ ಪವಿತ್ರ ಕರ್ತವ್ಯ. ಒಳ್ಳೆಯ ಮೀನುಗಳನ್ನು ಹಿಡಿದೊಯ್ಯುವವರಿಗೆ ಕೊರತೆಯೆಲ್ಲಿ?

**ಜಯ** : ನಿಜ ನುಡಿದೆ ಜಕಿ, ಕೆರೆ ಸ್ವಚ್ಛ ಉಳಿದರೆ ಮಾತ್ರ ಎಲ್ಲರಿಗೆ ಒಳ್ಳೆಯ ಮೀನು. ಕೊಳೆತ ಮೀನುಗಳನ್ನು ಎತ್ತಿ ಅತ್ತ ಬಿಸಾಡುವ ಕೆಲಸ ಮೊದಲು, ಒಳ್ಳೆಯದನ್ನು ಹಿಡಿಯುವ ಕೆಲಸ ಆಮೇಲೆ.

**ಜಕಿ** : ಭರತಭೂಮಿಗೆ ತಕ್ಕ ಮಾತನಾಡಿದೆ ಜಯ. ಈ ಬಗದಾದಿನ ಕೆರೆಯಲ್ಲಿ ಕೊಳೆತ ಮೀನು ಕಾಣುತ್ತಲೇ ಅದನ್ನು ತೆಗೆದೆಸೆವ ಕೆಲಸವನ್ನೇ ನಾವು ಮುಂದುವರಿಸೋಣ. ಇದರಿಂದ ನಮ್ಮ ನಗರದ ಹೆಸರು ಹಸನಾಗಿ ಉಳಿಯುವದು. ಒಳ್ಳೆಯವರು ಸುಖವಾಗಿ ಬಾಳುವುದು ಸಾಧ್ಯವಾಗುವುದು.

**ಜಾರ್ಜ** : ಕಿರಿಯರಿಗೆ ದಾರಿದೀಪವಾಗಬೇಕಾದ ಹಿರಿಯರೇ ಅಡ್ಡದಾರಿ ಹಿಡಿದಾಗ ಅವರನ್ನು ನಮ್ಮ ನಗರ ಸರಸಿಯ ಕೊಳೆತ ಮೀನುಗಳೆಂದು ಗಣಿಸದೆ ಬೇರೆ ಉಪಾಯವೇ ಇಲ್ಲ ಜಕಿ.

**ಜಕಿ** : ನಿಜ ನುಡಿದೆ ಜಾರ್ಜ. ಕಿರಿಯರು ತಮಗೆ ಗೌರವ ತೋರಿಸಬೇಕೆನ್ನುವ ಹಿರಿಯರು ಆ ಗೌರವಕ್ಕೆ ತಕ್ಕವರಾಗಬೇಡವೆ? ನಾವು ನ್ಯಾಯ, ನೀತಿ, ಪ್ರೀತಿ, ವಿಶ್ವಾಸಗಳಿಗೆ ನಮ್ಮ ನುಡಿ–ನಡೆಗಳಲ್ಲಿ ಎಡೆಕೊಡದಿದ್ದರೂ ಕಿರಿಯರು ಮಾತ್ರ ನಮ್ಮನ್ನು ಹಿರಿಯರೆಂದು ಗೌರವಿಸಲಿ ಎನ್ನುವಂತಿದೆ ಅವರು, ಹಿರಿಯರ

ಚಾಳಿ ಕಿರಿಯರಿಗೆ, ಹಿರಿಯರಲ್ಲಿಲ್ಲದ ನ್ಯಾಯ ನೀತಿಗಳು ಕಿರಿಯರಲ್ಲಿ ಬರುವುದೆಲ್ಲಿಂದ?

**ಜಯ** : ಬರಲಾರವು ಜಕಿ. ಮೇಲಿನವರು ನಡೆ ದಂತೆ ಕೆಳಗಿನವರು ನಡೆಯುತ್ತಾರೆ. ಗುರು–ಹಿರಿಯರು ನಡೆದಂತೆ ಕಿರಿಯರು ನಡೆಯುತ್ತಾರೆ. ಆದರೆ, ಅವರು ತಪ್ಪಿ ನಡೆವರೆಂದು ನಾವೂ ತಪ್ಪಿ ನಡೆಯುವುದು ಬೇಡ. ನಾವು ನ್ಯಾಯದಂತೆ ನಡೆದು ಅನ್ಯಾಯದಿಂದ ನಡೆದವರನ್ನು ಬಲೆಗೆ ಹಾಕುವದೇ ನಮ್ಮ ಗುರಿಯಾಗಲಿ.

**ಎಲ್ಲರೂ** : ಒಪ್ಪಿದೆವು ಇದನ್ನು.

**ಜಕಿ** : ಅದೋ, ಯಾರೋ ಇತ್ತ ಬರುವಂತಿದೆ ರಾತ್ರಿಯು ಕತ್ತಲೆಯಲ್ಲಿ. ಈ ಮರದ ಹಿಂದೆ ಅವಿತು ನಡೆವುದೇನೆಂಬುದನ್ನು ನೋಡೋಣ. ಇವರೇನಾದರೂ ನಿನ್ನೆ ರಾತ್ರಿ ಹುಡುಗಿ ಯೊಬ್ಬಳ ಮೇಲೆ ಕೈ ಮಾಡಲು ಯತ್ನಿಸಿದ ಕದೀಮರನ್ನು ಕಟ್ಟಿ ಹಾಕಿದಂತೆ ಇವರನ್ನೂ ಬಲೆಗೆ ಹಾಕೋಣ. (ಎಲ್ಲರೂ ಹೋಗುವರು.)



(ಬಗದಾದಿನಲ್ಲಿ ಅಲಿಯ ಮನೆ. ಅವನು ಮಲಗಿದ್ದಾನೆ. ಅವನ ಕನಸಿನಲ್ಲಿ "ಅಲಿ, ಏ ಅಲಿ, ನೀನಿನ್ನೂ ಮಕ್ಕಾಕ್ಕೆ ಹೋಗಿಲ್ಲ?" ಎಂದು ಗದರಿಸಿದಂತೆ ಧ್ವನಿ ಬರುತ್ತದೆ. ಹಿಂದಿನಿಂದ ಕೂಗಬಹುದು.)



**ಅಲಿ** : (ಗಾಬರಿಯಿಂದ ಗಡಬಡಿಸುತ್ತ ಎದ್ದು) ಮತ್ತೆ ಅದೇ ಪ್ರಶ್ನೆ. ಅದೇ ಗದ್ದರಿಕೆ! ಮೂರು ದಿನಗಳಿಂದ ಕನಸಿನಲ್ಲಿ ಈ ಕ್ರುದ್ಧ ಗದ್ದರಿಕೆಯನ್ನು ಕೇಳುತ್ತಲಿದ್ದೇನೆ. ಇನ್ನು ತಡಮಾಡ ಕೂಡದು ಎಲ್ಲ ಲೋಕಗಳ ಪ್ರಭುವೂ, ಪರಮ ದಯಾಳುವೂ ಆದ ಅಲ್ಲಾಹನು ಎಂಥೆಂಥ ಕಷ್ಟಗಳಿಂದ, ಕಠಿಣ ಪರಿಸ್ಥಿತಿಗಳಿಂದ ಪಾರು ಮಾಡಿದ್ದಾನೆ ನನ್ನನ್ನು. ಎಷ್ಟು ರೀತಿಯಿಂದ, ಎಷ್ಟು ಬಗೆಯಲ್ಲಿ ನೆರವು ನೀಡಿದ್ದಾನೆ ನನಗೆ. ನಾನು ಪವಿತ್ರ ಮಕ್ಕಾಕ್ಕೆ ಎಂದೋ ಹೋಗಿ ನನ್ನ ಕರ್ತವ್ಯ ತೀರಿಸಬೇಕಿದ್ದಿತು. ಮಾನವ ಸಹಜವಾದ ಮರಹಿನಿಂದ, ಹಣದ ಮೇಲಿನ ಲೋಭದಿಂದ, ಮನೆ ಮಾರುಗಳ ಮೋಹದಿಂದ ಇದುವರೆವಿಗೂ ಹೋಗಲಿಲ್ಲ. ಇನ್ನು ತಡಮಾಡಕೂಡದು. ಮಕ್ಕಾಕ್ಕೆ ಹೊರಡಲೇಬೇಕು. ಹೋಗಲೇಬೇಕು. ಮದುವೆಯಾದ ಮೇಲೆ ಮತ್ತಾವ ಮೋಹಪಾಶ ನನ್ನನ್ನು ಕಟ್ಟಿ ಕೆಡವುಹುದೋ ಏನೋ! ಮದುವೆಯಾಗುವ ಮೊದಲೇ ಮಕ್ಕೆಗೆ ಹೋಗಿ ಬರಲೇಬೇಕು. ಮನೆಯನ್ನು ಬಾಡಿಗೆಗೆ ಕೊಟ್ಟರಾಯಿತು. ಇದ್ದುದನ್ನೆಲ್ಲ ಮಾರಿ ಪವಿತ್ರ ಮಕ್ಕಾಯಾತ್ರೆಗೆ ಬೇಕಾಗುವಷ್ಟು ಹಣವನ್ನು ಸಂಗಡ ತೆಗೆದುಕೊಂಡು ಹೋಗಬೇಕು. ಉಳಿದರೆ ಆಮೇಲೆ ವಿಚಾರಿಸಿ ದರಾಯಿತು. ಮಕ್ಕಾ ಚಲೋ, ಮದಿನಾ ಚಲೋ, ಮಕ್ಕಾ ಚಲೋ.

(ಅಲಿಯು ರಸ್ತೆಯಲ್ಲಿ ಕೈಯಲ್ಲಿ ಸಣ್ಣ ಗಂಟೆಯನ್ನು ಹಿಡಿದು ವಿಚಾರಿಸುತ್ತ ಬರುತ್ತಾನೆ.)

**ಅಲಿ** : ಮನೆಯನ್ನೇನೊ ಬಾಡಿಗೆಗೆ ಕೊಟ್ಟಾಯಿತು. ಅಂಗಡಿಯೊಳಗಿದ್ದ ಸರಕನ್ನು ಮಾರಿಯೂ ಆಯಿತು. ಲೆಕ್ಕ ಹಾಕಲು ಯಾತ್ರೆಗೆ ಬೇಕಾಗುವ ಹಣಕ್ಕಿಂತ ೧ ಸಾವಿರ ಮೊಹರುಗಳು ಹೆಚ್ಚುಳಿದವಲ್ಲ! ಈ ಹಣವನ್ನು ಎಲ್ಲಿ, ಹೇಗೆ. ಯಾರಲ್ಲಿ ಇಟ್ಟು ಹೋಗುವದು? ಓಹೊ ಸರಿಯಾದ ಯೋಚನೆ! ನನ್ನ ವಿಶ್ವಾಸಪಾತ್ರ ಆ ವ್ಯಾಪಾರಿಯಲ್ಲಿ ಇರಿಸಿದರೆ! ಧನದ ಮೋಹ ವಿಚಿತ್ರವಾದುದು. ಆ ವರ್ತಕನು ಅವಿಶ್ವಾಸಿಯಾದರೆ! ಹಾಂ ಹೀಗೆ ಮಾಡೋಣ. ಈ ಉಳಿದ ಮೊಹರುಗಳನ್ನೆಲ್ಲ ಒಂದು ಜಾಡಿಯಲ್ಲಿ ಇರಿಸಿ ಮೇಲೆ ಜೇತೂನ ಹಣ್ಣುಗಳನ್ನಿಟ್ಟು ಬಾಯನ್ನು ಭದ್ರವಾಗಿ ಮುಚ್ಚಿದರಾಯಿತು. ಅವನಿಗೂ ಗೊತ್ತಾಗುವದಿಲ್ಲ. ಇದೇ ಸರಿಯಾದ ಯೋಜನೆ.



(ಹೀಗೆ ನುಡಿಯುತ್ತಾ ಮುಂದೆ ಹೋಗುವಷ್ಟರಲ್ಲಿ ವರ್ತಕನೇ ಎದುರಾಗುವನು)

**ವರ್ತಕ** : ಏನು ಅಲಿ! ಯಾವ ವಿಚಾರದಲ್ಲಿರುವೆ?

**ಅಲಿ** : ಅರಸುವ ಬಳ್ಳಿ ಕಾಲ ತೊಡಕಿದಂತಾಯಿತು. ನಾನು ನಿನ್ನ ಮನೆಗೇ ಹೊರಟಿದ್ದೆ. ಪರಮ ಪ್ರಭು ಅಲ್ಲಾಹನ ದರ್ಶನಕ್ಕಾಗಿ ಮಕ್ಕೆಗೆ ಪ್ರಯಾಣ ಬೆಳೆಸುವವನಿದ್ದೇನೆ. ನನ್ನ ಇದ್ದು ಬಿದ್ದ ಆಸ್ತಿಯನ್ನೆಲ್ಲ ಮಾರಿದೆ. ಈ ಹಣ್ಣುಗಳು ಉಳಿದವು. ನಾನು ಬರುವವರೆಗೆ ಇವನ್ನು ವಿಶ್ವಾಸಿಕ ಗೆಳೆಯನಾದ ನಿನ್ನಲ್ಲಿ ಇಟ್ಟು ಹೋಗಬೇಕೆಂದು ವಿಚಾರಿಸುತ್ತಾ ನಿನ್ನ ಕಡೆಗೇ ಹೊರಟಿದ್ದೆ. ಇವನ್ನು ನಾನು ಬರುವವರೆಗೆ ನಿನ್ನ ಮನೆಯಲ್ಲಿ ಇರಿಸಿಕೊಳ್ಳುವ ಮನಸ್ಸು ಮಾಡುವಿಯಷ್ಟೆ!

**ವರ್ತಕ** : ದೇವರ ದರ್ಶನಕ್ಕೆ ಹೊರಟ ಗೆಳೆಯನಿಗೆ ಇಷ್ಟು ಸಹಾಯ ಮಾಡದ ಅವಿಶ್ವಾಸಿಯೇನು ನಾನು. ನಡೆ ಈಗಲೇ ಮನೆಗೆ ಹೋಗೋಣ. ನೀನೇ ನಿನಗೆ ತಿಳಿದ ಸ್ಥಳದಲ್ಲಿ ಇವನ್ನಿಟ್ಟು ಭದ್ರವಾಗಿರಿಸು. ಅವನ್ನು ಕಾಯುವ ಹೊಣೆ ನನಗಿರಲಿ. ನಡೆ ಹೋಗೋಣ. (ಹೋಗುವರು)

(ಒಳಗೆ ಹೋಗಿ ತಿರುಗಿ ರಸ್ತೆಯಲ್ಲಿ ಮಾತಾಡುತ್ತಾ ಬರುವರು)

**ವರ್ತಕ** : ಆಯಿತು ನಿನ್ನ ಇಚ್ಛೆಯಂತೆ ಜೇತೂನ ಹಣ್ಣುಗಳನ್ನು ಜಾಡಿಯಲ್ಲಿ ಹಾಕಿ ನೀನೇ ಆ ಕೋಣೆಯಲ್ಲಿಟ್ಟು ಬೀಗ ಹಾಕಿ ಬಂದೆಯಷ್ಟೆ!

**ಅಲಿ** : ತೆಗೆದುಕೊ ಈ ಬೀಗದ ಕೈ. ನಿನ್ನ ಉಪಕಾರವನ್ನು ಮರೆವೆನೇ! ಅಲ್ಲಾನು ನಿನಗೆ ಒಳ್ಳೆಯದು ಮಾಡಲೆಂದು ಪ್ರಾರ್ಥಿಸಿ ಬರುವೆ.

**ವರ್ತಕ** : ಖುದಾಹಾಫಿಜ! ಹೋಗಿ ಬಾ, ನಿನ್ನ ಯಾತ್ರೆ ಸುಗಮ ವಾಗಲಿ.

(ಇಬ್ಬರೂ ಮಕ್ಕಾ ಚಲೊ ಮದಿನಾ ಚಲೊ ಎನ್ನುತ್ತ ಹೋಗುವರು)



(ಅಲಿ ಜಾಡಿಯಿಟ್ಟ ವರ್ತಕನ ಮನೆಯಲ್ಲಿ)



**ವರ್ತಕ** : ಇದೇನು ಬೇಗಮ್,
ರಾತ್ರಿಯ ಊಟವೂ ನಿನಗೆ ಅರುಚಿಯಾಗತೊಡಗಿದೆ. ಬಸಿರ ಹೆಂಗಸಿನೂಟವೇ ಹೊಟ್ಟೆಯ ಶಿಶುವಿಗೂ ಆಹಾರ ಒದಗಿಸಬೇಕು. ನೀನೇ ದಿನ ದಿನಕ್ಕೆ ಊಟ ಕಡಿಮೆ ಮಾಡುತ್ತ ಹೋದರೆ ನಿನ್ನ ಹೊಟ್ಟೆಯಲ್ಲಿ ಮೂಡಿರುವ ನಮ್ಮ ಬಾಳಬಳ್ಳಿಯ ಮೊಗ್ಗು ಮುದುಡಿ ಹೋಗದೇ? ಅದು ಅರಳಿ ಗಮಗಮಿಸುವ ಜೀವದ ಹೂವಾಗಿ ಹೊರ ಬರಬಾರದೆ?

**ಬೇಗಮ್** : ನಾನೇನು ಮಾಡಲಿ ಮನದರಸ! ಏನು ತಂದು ಮುಂದಿರಿಸಿದರೂ ಏನೇನನ್ನೋ ಬಯಸಿ ಬೇಗುದಿಗೊಳ್ಳುತ್ತಲಿದ್ದೇನೆ. ನನ್ನ ಬಯಕೆಗಳ ಬಗ್ಗೆ ನನಗೇ ನಾಚಿಕೆ.

**ವರ್ತಕ** : ಬಸಿರೆಗೆ ಬಯಕೆ ಸಹಜ ಬೇಗಮ್! ಅವುಗಳನ್ನು ಈಡೇರಿಸುವಲ್ಲಿಯೇ ಆನಂದ ಪತಿಯಾದವನಿಗೆ. ನಿನ್ನ ಬಯಕೆಗಳನ್ನು ಈಡೇರಿಸುವುದೆಂದರೆ, ಮುಂದೆ ನಮ್ಮ ಆನಂದದ ಕಾರಂಜಿಯಾಗಲಿರುವ ಕಂದನ ಬಯಕೆಗಳನ್ನು ಈಡೇರಿಸಿದಂತೆ. ಗಂಡನಾಗಿ ನಿನ್ನ ಬಯಕೆಗಳನ್ನು, ತಂದೆಯಾಗಿ ಮುಂದೆ ಬರಲಿರುವ ಕಂದನ ಬಯಕೆಗಳನ್ನು ಈಡೇರಿಸಲು ಸಿದ್ಧನಾಗಿ ಕಾದಿದ್ದೇನೆ, ನಿನ್ನ ಬಯಕೆ ಯಾವುದೆಂಬುದನ್ನು ಬೇಗ ತಿಳಿಸು.

**ಬೇಗಮ್ :** ತಿಳಿಸುವೆ, ಆದರೆ ಇದೆಂಥ ವಿಚಿತ್ರ ಬಯಕೆ ಇವಳಿಗೆ ಎಂದು ನಗಕೂಡದು ನೀವು.

**ವರ್ತಕ :** ನಗುವದಿಲ್ಲ, ನನ್ನಾಣೆ ನಗುವುದಿಲ್ಲ.

**ಬೇಗಮ್ :** ಏನಿಲ್ಲ ನಲ್ಲ, ನನಗೀಗ ಜೇತೂನ ಹಣ್ಣುಗಳನ್ನು ತಿನ್ನುವ ಬಯಕೆ.

**ವರ್ತಕ :** ಇದೊಂದು ಘನವಾದ ಬಯಕೆಯೇನೂ ಅಲ್ಲ ಬೇಗಮ್. ಆದರೆ ಈ ಅಪರಾತ್ರಿಯಲ್ಲಿ ಎಲ್ಲಿಂದ ತರಲಿ ಈ ಜೇತೂನ ಹಣ್ಣುಗಳನ್ನು? (ನೆನಪಿಸಿಕೊಂಡು) ಹಾಂ, ನನ್ನ ಗೆಳೆಯ ಅಲಿ ಜೇತೂನ ಹಣ್ಣುಗಳ ಜಾಡಿಯನ್ನೇ ನಮ್ಮ ಮನೆಯಲ್ಲಿರಿಸಿ ಹೋಗಿದ್ದಾನೆ. ಅವನು ಹೋಗಿ ಏಳು ವರುಷಗಳು ಉರುಳಿದರೂ ಅವನ ಸುದ್ದಿ ಯಾವುದೂ ಇದುವರೆವಿಗೂ ತಿಳಿದಿಲ್ಲ. ಏನಾದನೋ? ಈ ಲೋಕದಲ್ಲಿರುವನೋ, ಪರಲೋಕಕ್ಕೆ ತೆರಳಿರುವನೋ! ಯಾರು ಬಲ್ಲರು? ದೀಪವನ್ನೂ, ತಟ್ಟೆಯನ್ನೂ, ತಂದುಕೊಡು. ನಾನು ಒಳಗೆಹೋಗಿ ಆ ಜಾಡಿಯನ್ನು ತೆಗೆದು ಕೆಲವೇ ಕೆಲವು ಜೇತೂನ ಹಣ್ಣುಗಳನ್ನು ತರುವೆನು. ನಿನ್ನ ಬಯಕೆ ತೀರುವವರೆಗೆ ನೀನು ತಿನ್ನು. ಉಳಿದರೆ ನಾನೂ ರುಚಿ ನೋಡುವೆನು.

**ಬೇಗಮ್ :** ತೋಬಾ, ತೋಬಾ. ಇಂಥ ಹೀನ ಕೃತ್ಯಕ್ಕೆ ನೀವು ಮನಸ್ಸು ಮಾಡಬಹುದೇ ಆಳ್ದ? ಅಲ್ಲಾಹನು ಒಪ್ಪುವನೆ ಇದನ್ನು? ಅನ್ಯರ ಒಡವೆಯನ್ನು ಅಪಹರಿಸುವುದಕ್ಕಿಂತ ಉಪವಾಸ ಸಾಯುವುದೇ ಲೇಸಲ್ಲವೆ? ಮೇಲಾಗಿ ಅಲಿಯ ವರ್ತ ಮಾನ ತಿಳಿಯ ದೆಂದಾಕ್ಷಣ ಅವನು ತೀರಿ ಹೋಗಿರ ಬೇಕೆಂದು ತೀರ್ಮಾನಿಸ ಬಹುದೆ? ಇಂದಿಲ್ಲ ನಾಳೆ ಅಲಿ ಹಿಂದಿರುಗಿ ಬಂದು ನನ್ನ ಒಡವೆಗಳನ್ನು ನನಗೆ ಕೊಡಿರೆಂದು ಕೇಳಿದರೆ ಯಾವ ಮುಖದಿಂದ ಅರೆಬರಿದಾದ ಜಾಡಿಯನ್ನು ಅವನಿಗೆ ಕೊಡುವಿರಿ? ಆಗ ನಮ್ಮ ಕುಟುಂಬದ ಮಾನವೇ ಬೀದಿಪಾಲಾಗದೆ? ಮಾನಹೋದ ಮೇಲೆ ಮರಣ ಬಂದ ಹಾಗಲ್ಲವೆ?

**ವರ್ತಕ :** ಕಡ್ಡಿಯನ್ನು ಗುಡ್ಡವನ್ನಾಗಿ ಮಾಡುವುದರಲ್ಲಿ ನಿನ್ನನ್ನು ಮೀರುವವರಿಲ್ಲ ಬೇಗಮ್. ಅಲಿಯ ಜಾಡಿಯಿಂದ ನಾನು ತರುವದು ಒಂದು ಹಿಡಿ ಜೇತೂನ ಹಣ್ಣುಗಳನ್ನು. ಅವೇನು ಚಿನ್ನದ ಮೊಹರುಗಳೇ? ಇಷ್ಟು ಮಾತ್ರಕ್ಕಾಗಿ ಅಲಿ ಈ ಸಣ್ಣ

ವಿಷಯವನ್ನು ಬೀದಿಗೊಯ್ಯುವಷ್ಟು ಮೂಢನಲ್ಲ. ಬಸಿರೆಯ ಬಯಕೆಯ ಪೂರೈಕೆಗಾಗಿ ಸಂದ ತನ್ನ ಹಣ್ಣುಗಳು ಸಾರ್ಥಕವಾದುವೆಂದು ಸಂತೋಷಿಸುವನು.

**ಬೇಗಮ್** : ಈಗ ನನಗೆ ಇಷ್ಟವಿಲ್ಲ, ಆ ಬಯಕೆಯೇ ಉಳಿದಿಲ್ಲ ಆಳ್ದ. ಅದಮನ ಹೆಂಡತಿ ನಿಷಿದ್ಧ ಫಲವನ್ನು ಬೇಡಿದುದೇ ಅವರಿಬ್ಬರ ಅಧೋಗತಿಗೆ ಕಾರಣವಾಯಿತೆಂದು ಕೇಳಿದ್ದೇನೆ. ನನ್ನ ಬಯಕೆ ಕಾರಣವಾಗಿ ನಮ್ಮ ಕುಟುಂಬವೂ ಅಧೋಗತಿಗೆ ಇಳಿಯ ದಿರಲಿ. ಈ ಜೇತೂನ ಹಣ್ಣುಗಳೇ ಬೇಡ. ನನಗೆ ಸ್ವರ್ಗದ ಅಮೃತ ಫಲಗಳೂ ಬೇಡ.

**ವರ್ತಕ** : ನಿನಗೆ ಬೇಡವಾದರೆ ನನಗೂ ಬೇಡವಾಗಬೇಕೇನು ಬೇಗಮ್? ಮರೆತೇಹೋಗಿದ್ದ ಆ ಹಣ್ಣುಗಳ ವಿಷಯ ನನ್ನ ಸ್ಮರಣೆಗೆ ಬರಲು ಕಾರಣಳಾದ ನೀನೇ ಈಗ ಬೇಡವೆಂದರೆ ಬಿಡುವೆನೆ ನಾನು? ನಿದ್ದೆ ಹೋದ ಇಚ್ಛೆಯನ್ನು ಎಬ್ಬಿಸದಿರುವುದು ಸುಲಭ. ಆದರೆ ಎಚ್ಚತ್ತ ಇಚ್ಛೆಯನ್ನು ನಿಯಂತ್ರಿಸುವುದು ಸುಲಭವೆ? ನಾನೀಗ ಆ ಜಾಡಿಯನ್ನು ತೆರೆಯಲೇ ಬೇಕು. ಆ ಹಣ್ಣು ಗಳನ್ನು ಸವಿಯಲೇಬೇಕು.





**ಬೇಗಮ್ :** ಮಿತ್ರದ್ರೋಹ ಮಾಡದಿರಿ; ನೀತಿ ನಿಯಮಗಳನ್ನು ಗಾಳಿಗೆ ತೂರದಿರಿ. ಮನೆಯ ಮಾನ ಮಾರದಿರಿ. ಸೆರಗೊಡ್ಡಿ ಬೇಡುತ್ತೇನೆ. ಆ ಜಾಡಿಯ ಬಳಿ ಸಾರದಿರಿ.

**ವರ್ತಕ :** ಬೇಗಮ್, ನೀನಿಷ್ಟು ಗೋಗರೆದ ಕಾರಣ ನಾನು ಎರಡು ಹಣ್ಣುಗಳ ರುಚಿ ನೋಡಿ ಬಂದು ಬಿಡುವೆನು ಬೇಗಮ್. ಎರಡೇ ಎರಡು. ಮೂರನೆಯದನ್ನು ಮುಟ್ಟಿದರೆ ನಿನ್ನಾಣೆ.

**ಬೇಗಮ್ :** ಎರಡನ್ನು ತಿಂದರೂ ಅಷ್ಟೇ ನೂರನ್ನು ತಿಂದರೂ ಅಷ್ಟೇ. ಪಾತಕವು ಪಾತಕವೇ! ಮೇಲಾಗಿ ಏಳು ವರ್ಷಗಳ ಆ ಹಣ್ಣುಗಳಲ್ಲಿ ಅದಾವ ರುಚಿ ಸಿಕ್ಕೀತು ನಿಮಗೆ? ಬೆಳಗಾಗುತ್ತಲೇ ಹೊಸ ರಸಭರಿತ ಜೇತೂನ ಹಣ್ಣುಗಳನ್ನು ತಂದುಕೊಡುವೆನು ನಿಮಗೆ. ಬೆಳಗಾಗುವವರೆಗೆ ತಾಳಿರಿ. ಅಲ್ಲಿಯವರೆಗೆ ನಿಮ್ಮ ಇಚ್ಛೆಯನ್ನು ಸಲ್ಲಿಸದಿದ್ದರೆ ಆಕಾಶವೇನೂ ಕಳಚಿ ಬೀಳುವದಿಲ್ಲವಲ್ಲ.

**ವರ್ತಕ :** ಹಾಗೇ ಆಗಲಿ ಬೇಗಮ್, ಹಾಗೆಯೇ ಆಗಲಿ. ಆದರೆ ಆ ಜಾಡಿ ಇಟ್ಟ ಸ್ಥಳದಲ್ಲಿದೆಯೋ ಇಲ್ಲವೋ ಎಂಬುದನ್ನಷ್ಟೇ ನೋಡಿ ಬರುವೆನು. ನೀನಿಲ್ಲಿಯೇ ಇರು.

(ಒಳಗೊ ಹೋಗಿ ಜಾಡಿಯ ಬಾಯಿ ತೆರದ :

ಜಾಡಿಯನ್ನೆತ್ತಿ ಸುರಿದ. ಆಶ್ಚರ್ಯದಿಂದ ಉಸುರಿದ.)

**ವರ್ತಕ :** ಯಾ ಅಲ್ಲಾಹ. ಹಣ್ಣುಗಳೆಲ್ಲ ಕೊಳೆತುಹೋಗಿವೆ; ಹಣ್ಣುಗಳೊಡನೆ ಹೊರ ಬಂದ ಈ ಹಚ್ಚನೆಯ ಹೊಳೆವ ವಸ್ತುಗಳೇನು? ಆಹಾ. ಚಿನ್ನದ ನಾಣ್ಯಗಳು. ಮೊಹರುಗಳು. ಇನ್ನೂ ಇರಬೇಕು ಒಳಗೆ. (ಎಲ್ಲವನ್ನು ಸುರಿದು ನೋಡುವನು. ಸುರಿದಂತೆ ಚಿನ್ನದ ನಾಣ್ಯಗಳು ನುಡಿದವು) ಆಹಾ. ನೂರಾರು ಮೊಹರುಗಳು,

ನನಗೆ ಮಂಕುಬೂದಿ ಎರಚಲು ಅಲಿ ಮೇಲೆ ಹಣ್ಣುಗಳನ್ನು ಇರಿಸಿ ಒಳಗೆ ಮೊಹರುಗಳನ್ನು ತುಂಬಿ ಹೋಗಿರುವ ನಲ್ಲವೆ? ನನಗೆ ಮೋಸವಾಡಿದ ಅವನಿಗೆ ಮೋಸ ಮಾಡಿದರೆ ತಪ್ಪೇನು? ನನ್ನಲ್ಲಿ ಪೂರ್ಣ ವಿಶ್ವಾಸವಿರಿಸದಿದ್ದ ಅಲಿಗೆ ನಾನೇಕೆ ಪ್ರಾಮಾಣಿಕನಾಗಿ ಉಳಿಯಬೇಕು? ಒಂದು ಸಾವಿರ ಹೊನ್ನುಗಳು, ಹೊಳೆವ ಮೊಹರುಗಳು. ನಾನಿಂದು ಸಿರಿವಂತ. ನಾನಿವುಗಳನು ಅಪಹರಿಸಲೇಬೇಕು. ಸಿರಿವಂತನಾಗಲೇಬೇಕು. ಇದುವರೆಗೆ ತುಂಬದಿದ್ದ ನನ್ನ ಹಮ್ಮಿಣಿಯೇ, ಇಂದು ತುಂಬಿ ತುಳುಕಾಡು ನೀನು. (ಹಮ್ಮಿಣಿಗೆ ಹೊನ್ನು ಹಾಕುವ ಸದ್ದು ಅದೇ ಸಮಯಕ್ಕೆ ಹೊರಗೆ ಜಕಿ, ಜಾಕೋಬ, ಜಯು, ಜಾರ್ಜರ ಕೇಕೆ. ಕೂಡು ಹಾಡು.)



ನಂಬಿದವರ ಕುತ್ತಿಗೆಯ ಕೊಯ್ಯುವ
ಕೆಡುಕರೆ ನೆನಪಿಡಿರಿ;
ಪಾಶವಾಗುವುದು ನಿಮ್ಮ ಮೋಸವೇ
ನಿಮಗೆ, ಲಕ್ಷ್ಯಕೊಡಿರಿ.
ಯಾರೆ ನೋಡಲಿ, ನೋಡದಿರಲಿ ನೀ
ಗೈಯ್ದ ಪಾತಕವನು;
ಎಲ್ಲ ನೋಡುವವನೊಬ್ಬನಿಹನು, ನೀ
ಮರೆಯ ಬೇಡ ಇದನು.
ಮನೆಯ ಗೋಡೆ ಮುಚ್ಚುವುದೆ ಮರುಳೆ
ಎಸಗಿರುವ ದುರಿತವನ್ನು?



ಸುಳಿವ ಗಾಳಿಯೇ ಸುಳಿವ ನೀಡಿ
ತಹುದದಕೆ ಶಿಕ್ಷೆಯನ್ನು.
ಕಳುವ ಕೈಗೆ ಕಡಿವಾಣ ಹಾಕು,
ಮೂಗುದಾಣ ಹಾಕು
ಮನಕೆ.
ಮನುಜತನವನೇ ಮನೆಯ ಮಾನವನೆ
ಮಾರಬೇಡ ಧನಕೆ!

**ವರ್ತಕ :** (ಕಕ್ಕಾವಿಕ್ಕಿಯಾಗಿ) ಬಂದುಬಿಟ್ಟರೇ ಈ ಬಾಲರು, ದುರ್ಜನ ಶೂಲರು! ಖಲೀಫರ, ಭಟರ ಕಣ್ಣು ತಪ್ಪಿಸಬಹುದು. ಕಾಜಿಯ ಕಣ್ಣು ತಪ್ಪಿಸಬಹುದು. ಅಷ್ಟೇಕೆ, ಈ ಕೊಠಡಿಯ ಆಚೆ ಕುಳಿತಿರುವ ನನ್ನ ಮುಗ್ಧ ಬೇಗಮಳ ಕಣ್ಣು ತಪ್ಪಿಸಬಹುದು– ಆದರೆ ಈ ಬಗದಾದಿನ ಪೋಲಿ ಬಾಲಕರ ಕಣ್ಣು ತಪ್ಪಿಸುವುದು ಅಸಾಧ್ಯವೆಂದೇ ತೋರುತ್ತಿದೆ. ರಾತ್ರಿಯಾದರೆ ತೀರಿತು ಇವರ ಸ್ವಯಂಪ್ರೇರಿತ ಗಸ್ತಿ ಪ್ರಾರಂಭವಾಗುತ್ತಿದೆ. ಇವರ ಕಣ್ಣೆಲ್ಲ ನನ್ನಂಥವರ ಮೇಲೆ. ಇಂದು ಇಷ್ಟಕ್ಕೆ ಸಾಕು; ಮುಂದಿನ ಕೆಲಸ ಇವರ ಕಣ್ಣು ತಪ್ಪಿಸಿ ಮಾಡಿ ಮುಗಿಸೋಣ. (ಕೊಠಡಿಯ ಕದ ಮುಚ್ಚಿ ಬಂದು) ಬೇಗಮ್ ಬೇಗಮ್, ನೀನು ಹೇಳಿದುದು ಅಕ್ಷರಶಃ ನಿಜವಾಯಿತು. ಜಾಡಿಯಲ್ಲಿದ್ದ ಜೇತೂನ ಹಣ್ಣುಗಳೆಲ್ಲ ಕೊಳೆತುಹೋಗಿವೆ. ಅವುಗಳನ್ನು ಮತ್ತೆ ಜಾಡಿಯಲ್ಲಿಯೇ ತುಂಬಿ ಬಂದೆ.

**ಬೇಗಮ್** : ಒಳ್ಳೆಯದಾಯಿತು ಆಳ್ವ; ಆದರೂ ಪರರ ವಸ್ತುವನ್ನು ಸ್ಪರ್ಶಿಸಿದ ಪಾಪ ನಮಗೆ ತಟ್ಟಿತು. ಅಲ್ಲಾಹನು ಇದನ್ನು ಕ್ಷಮಿಸಿ ಕಾಪಾಡಲಿ.

**ವರ್ತಕ** : ಆಮೀನ್! ಸದಆಮೀನ್! ಆಗಲಿ ಬೇಗಮ್, ನಾನು ಪೇಟೆಗೆ ಹೋಗಿ ಬರುವೆ (ರಸ್ತೆಯಲ್ಲಿ ಬರುತ್ತಾ) ಪೇಟೆಗೆ ಹೋಗಿ ಹೊಸ ಜೇತೂನ ಹಣ್ಣುಗಳನ್ನು ತರುವೆ. ಬೇಗಮಳಿಗೆ ತಿಳಿಯದಂತೆ ಅವುಗಳನ್ನು ಜಾಡಿಯಲ್ಲಿ ತುಂಬುವೆ. ಈಗ ಅದರಲ್ಲಿದ್ದ ಮೊಹರುಗಳೆಲ್ಲ ನನ್ನವು. (ಎಂದು ನಗುತ್ತ ಹೋಗುವನು.)

* * *

(ಷಿರಾಜ ಪಟ್ಟಣದ ಮಾರ್ಗದಲ್ಲಿ ಅಲಿ ಮತ್ತು ಅವನ ಪ್ರಯಾಣಿಕರು ಒಂಟೆಗಳ ಮೇಲೆ ಹೊರಟಿದ್ದಾರೆ. ಒಂಟೆಗಳ ಗಂಟೆಗಳ ದನಿ ಹಿಮ್ಮೇಳದಂತೆ ಹಿಂಬಾಲಿಸುತ್ತದೆ.)

**ಅಲಿ** : ಗೆಳೆಯರೆ, ನೀವು ಸ್ನೇಹಮಯ ಸಹವಾಸದಲ್ಲಿ ನಮ್ಮ ಯಾತ್ರೆ ಮಾಡಿದೆ, ಪಾವನ ಕಾಬಾದಲ್ಲಿ ಜಗತ್ತಿನ ನಾನಾ ಭಾಗಗಳಿಂದ ಬಂದಿದ್ದ ಧರ್ಮ ಬಾಂಧವರೊಡನೆ ನಮಾಜು ಮಾಡುವ ಭಾಗ್ಯವನ್ನು ಪಡೆದುದಲ್ಲದೆ ಲೋಕ ಪ್ರಸಿದ್ಧ ಪಟ್ಟಣಗಳನ್ನೂ ನೋಡುವ ಸದವಕಾಶವನ್ನೂ ಪಡೆದೆ. ನಿಮ್ಮ ಮಧುರ ಸಹಕಾರವನ್ನು ಮರೆಯಲಾರೆ.

**ವರ್ತಕ ೧** : ಮಕ್ಕಾ ಯಾತ್ರೆ ಫಲ ಕೂಡಲೇ ಸಿಕ್ಕಿತೆಮಗೆ ಅಲಿ. ಎಲ್ಲಿಯ ಬಗದಾದ, ಎಲ್ಲಿಯ ಮಕ್ಕಾ! ಎತ್ತಣ ಕೈರೋ, ಎತ್ತಣ ಜೆರೂಸಲೆಮ್! ಅದೆತ್ತಣ ಡಮಾಸ್ಕಸ ಅದೆತ್ತಣ ಷಿರಾಜ! ಒಂದು ಪ್ರವಾಸದಲ್ಲಿ ಇವೆಲ್ಲವನ್ನೂ ನೋಡುವ ಭಾಗ್ಯ ನಮ್ಮದಾಯಿತು. ನಾವೇ ಧನ್ಯರು.

**ವರ್ತಕ ೨** : ಆಹಾ, ಆ ಕೈರೋ ಪಟ್ಟಣದ ಪಿರಾಮಿಡ್ಡುಗಳು ಅದೆಷ್ಟು ಭವ್ಯ. ಆ ನೈಲ್ ನದಿಯಲ್ಲಿ ನಾವು ಗೈದ ನೌಕಾ ಕ್ರೀಡೆ ಅದೆಷ್ಟು ಆಹ್ಲಾದಕರ.

**ವರ್ತಕ ೩** : ಜೆರೊಸಲೇಮ್ಮಿನ ದೇವಾಲಯಗಳ ದಿವ್ಯತೆಯನ್ನು ಮರೆತೆಯಾ?

**ವರ್ತಕ ೪** : ಆಹಾ, ಡಮಾಸ್ಕಸಿನ ತೋಟಗಳ ನೋಟ ಅದೆಷ್ಟು ರಮಣೀಯ! ಅದು ಮರೆಯಲಾರದ ಸಿರಿಯ, ಸೊಬಗಿನ ಪಟ್ಟಣ. ನಮ್ಮನ್ನು ಎಲ್ಲಕ್ಕಿಂತಲೂ ಹೆಚ್ಚು ದಿನ ಹಿಡಿದು ನಿಲ್ಲಿಸಿದ ಚೆಲುವಿನ ತಾಣ.

**ಅಲಿ** : ಹಾಗೆ ನೋಡಿದರೆ ಒಂದೊಂದೂ ವೈಶಿಷ್ಟ್ಯಪೂರ್ಣ ಪಟ್ಟಣ. ಷಿರಾಜವೂ ಅಷ್ಟೇ. ಆದರೆ ನಾವು ಭಾರತವನ್ನು ನೋಡಿದ ಮೇಲೆ ನಮಗೆ ಇನ್ನೇನನ್ನೂ ನೋಡುವ ಆಶೆಯೇ ಉಳಿಯದಾಯಿತು. ಎಂಥ ಸುಂದರ. ಸಮೃದ್ಧ ಸಂಪದ್ಭರಿತ ದೇಶ; ಎಂಥ ಸ್ಫುರದ್ರೂಪಿಗಳಾದ ಸುಸಂಸ್ಕೃತ ಜನರು. ಭಾರತವು ಭೂಲೋಕದ ಸ್ವರ್ಗವೇ ಸರಿ.

**ವರ್ತಕ ೧** : ಒಪ್ಪಿದೆ.

**ವರ್ತಕ ೨** : ನಾನೂ ಒಪ್ಪಿದೆ.

**ವರ್ತಕ ೩, ೪** : ನಾವೂ ಒಪ್ಪಿದೆವು.

**ಅಲಿ** : ಅದೆಲ್ಲ ಸರಿ. ಇನ್ನು ನಾವು ಬಗದಾದಿಗೆ ಹಿಂದಿರುಗಲೇಬೇಕು. ಬಗದಾದ ಬಿಟ್ಟು ಒಂದಲ್ಲ, ಎರಡಲ್ಲ, ಏಳು ವರುಷಗಳು ಉರುಳಿದುವು. ಇನ್ನು ತಡೆಯುವುದು ನನ್ನಿಂದಾಗದು.

**ಎಲ್ಲ ವರ್ತಕರು** : ನಮ್ಮಿಂದಲೂ ಆಗದು.

**ಅಲಿ** : ಷಿರಾಜನಲ್ಲಿ ಒಂದೆರಡು ದಿನ ಇದ್ದು ಬಗದಾದಿಗೆ ಹೊರಟುಬಿಡೋಣ.

**ವರ್ತಕ ೧** : ಇದಕ್ಕೇಕೆ ಅಡ್ಡಿ ಅಲಿ? ಹೆಂಡಿರು ಮಕ್ಕಳಿಲ್ಲದ ನಿನಗೆ ಇಷ್ಟು ಆತುರವಿರುವಾಗ ಮಡದಿ ಮಕ್ಕಳುಳ್ಳ ನಮಗೆ ಕಾತುರವಿರದೆ? ಎಲ್ಲರೂ ಒಂಟೆಗಳನ್ನು ತುಸು ಜೋರಾಗಿ ಬಿಡಿರಿ. (ಕೂಡಿ ಹಾಡುತ್ತ ಹೊರಡುವರು.)



-:ಕೂಡು ಹಾಡು:-

ಮರುಭೂಮಿಯ ಹಡಗವೆ
ಇಳೆಯ ಕೈಯ ಕಡಗವೆ
ಮನ ಮೆಚ್ಚುವ ವಿಗಡವೆ
ಬೇಗ ಬೇಗ ಅಡಿಯಿಡು-
ಮನೆಯತ್ತಣ ಪಯಣವಿದು!

ಕಷ್ಟಜೀವಿ ಒಂಟೆಯೆ
ಇಷ್ಟ ತರುವ ಗಂಟೆಯೆ
ಮನೆಗೆ ಮರಳೆ ತಂಟೆಯೆ?
ಬೇಗ ಬೇಗ ಅಡಿಯಿಡು-
ಮನೆಯತ್ತಣ ಪಯಣವಿದು!

ಎಂಟು ದಿನದ ಅನ್ನ ನೀರು
ಇಂದು ಒಂದೆ ಸಲಕೆ ಹೀರು
ಸಾಗು ಆಗಿ ನಮ್ಮ ತೇರು-
ಬೇಗ ಬೇಗ ಅಡಿಯಿಡು-
ಮನೆಯತ್ತಣ ಪಯಣವಿದು!

ನಮಗೆ ಮಾತ್ರ ಇಹವೆ ಹೇಳು-
ನಿನಗಿಲ್ಲವೆ ಮಕ್ಕಳು?
ಮಕ್ಕಳಿರದ ಬಾಳೆ ಬೀಳು
ಕರೆವರದೋ ಮಕ್ಕಳು
ಬೇಗ ಬೇಗ ಅಡಿಯಿಡು-
ಮಕ್ಕಳತ್ತ ಪಯಣವಿದು.

(ಅಲಿಯು ವರ್ತಕನ ಮನೆಗೆ ಬರುತ್ತಾನೆ)

**ವರ್ತಕ** : ಓ ಅಲಿ! (ಎಂದು ಬಂದು ಅಲಿಯನ್ನು ಅಪ್ಪಿಕೊಂಡು) ಬಂದೆಯಾ ಬಂಧು ಅಲಿ ನಿನ್ನ ಮಕ್ಕಾ ಯಾತ್ರೆ ಸುಖಕರವಾಯಿತಷ್ಟೆ! ಕುಶಲವೆ!

**ಅಲಿ** : ಅಲ್ಲಾಹನ ಕೃಪೆಯಿಂದ ಸರ್ವ ಕುಶಲ.

**ವರ್ತಕ** : ಇದೊ, ನೀನಿಟ್ಟ ಜಾಡಿ. ಇಂದಿಗೆ ಈ ವಿಶ್ವಸ್ಥ ನಿಧಿಯ ಧರ್ಮದರ್ಶಿತ್ವದ ಹೊಣೆಯ ಹೊರೆ ಇಳಿಯಿತು. (ಎಂದು ಹೇಳುತ್ತ ಕದ ತೆರೆದು ಜಾಡಿಯನ್ನು ತಂದು ಅಲಿಗೆ ಕೈಗೆ ಕೊಡುವನು.)

**ಅಲಿ** : ನೀನೆಂಥ ಮಹಾನುಭಾವ! ನಿಮ್ಮಂಥ ವಿಶ್ವಾಸಿಕ ಮಿತ್ರರಿರುವರೆಂದೇ ಬೈಗು-ಬೆಳಗುಗಳಾಗುವವು. ಆಗಲಿ ನಾನು ಬರುತ್ತೇನೆ.. ಖುದಾ ಹಾಫಿಜ! (ಅಲಿಯು ಮನೆಗೆ ಬಂದು ಜಾಡಿಯನ್ನು ತೆರೆದು ಸುರುವುತ್ತಾನೆ. ಮೊಹರುಗಳಿರುವದಿಲ್ಲ. ಗಾಬರಿಯಾಗಿ "ಅಯ್ಯೋ ನನ್ನ ಗಳಿಕೆಯ ಸಂಪತ್ತು! ಮಯಾವಾಯಿತೆ!" ಎನ್ನುತ್ತಾ ವರ್ತಕನ ಮನೆಗೆ ಬರುತ್ತಾನೆ.)

**ಅಲಿ** : ಅಣ್ಣಾ, ನಿನ್ನಿಂದ ಒಂದು ಮಾತು ಮುಚ್ಚಿಟ್ಟಿದ್ದೆ. ಆ ಜಾಡಿಯ ಕೆಳಗೆ ಒಂದು ಸಾವಿರ ಮೊಹರುಗಳನ್ನು ಹಾಕಿ ಮೇಲೆ ಜೇತೂನ ಹಣ್ಣುಗಳನ್ನು ತುಂಬಿದ್ದೆ. ಈಗ ನೋಡಿದರೆ ಅದರಲ್ಲಿ ಹಣ್ಣುಗಳು ಮಾತ್ರ ಇವೆ. ಮೊಹರುಗಳು ಮಾಯವಾಗಿವೆ. ನಿನಗೇನಾದರೂ ಅವು ಏನಾದು ವೆಂಬುದರ ಬಗ್ಗೆ ಗೊತ್ತಿದ್ದರೆ ದಯ ವಿಟ್ಟು ತಿಳಿಸು ವಿಯಾ?

**ವರ್ತಕ** : ಇದೇನನ್ನು ಹೇಳುತ್ತಿರುವಿ, ಇದೇನನ್ನು ಕೇಳುತ್ತಿರುವಿ ಅಲಿ? ಅದರಲ್ಲಿ ಮೊಹರುಗಳಿದ್ದುವೆ? ಹಾಗೆಂದು ನೀನು ಅಂದೇ ತಿಳಿಸಿದ್ದರೆ ನಾನು ಎಣಿಸಿ ನೋಡಿಕೊಂಡು ಜಾಡಿಯುನ್ನು ನನ್ನಲ್ಲಿ ಇಟ್ಟುಕೊಳ್ಳುವುದೋ, ಬೇಡವೋ ಎಂಬುದನ್ನು ನಿರ್ಣಯಿಸುತ್ತಿದ್ದೆ. ನೀನು ಕೇವಲ ಹಣ್ಣುಗಳಿವೆಯೆಂದು ಹೇಳಲು ಅದನ್ನು ನಂಬಿ, ಸಣ್ಣ ಬೆಲೆಯ ಸಾಮಾನೆಂದು ಇಟ್ಟುಕೊಂಡೆ. ಇಟ್ಟುಕೊಂಡುದಕ್ಕೆ ಉಪಕಾರವನ್ನು ಈ ರೀತಿ ತೀರಿಸಲು ಬಂದಿರುವಿಯಾ? ಮಕ್ಕೆಗೆ ನೀನು ಹೋದುದು ಠಕ್ಕನಾಗಿ ಬರಲೆಂದೆ? ಅಥವಾ ಯಾವದೋ ದೇಶ ನೋಡಿ ಬಂದಿರುವ ನೀನು



ದೇಶಕ್ಕೊಂದು ಮೋಸದ ವಿದ್ಯೆ ಕಲಿತು ಬಂದಿರುವಿಯಾ? ಪವಿತ್ರ ಕುರಾಣನ್ನು ಮುಟ್ಟಿದ ಕೈಗಳಿಂದ ಪರರ ವಸ್ತುವನ್ನು ಮುಟ್ಟ ಬಲ್ಲೆನೆ ನಾನು? ನನ್ನನ್ನು ಯಾರೆಂದು ತಿಳಿದಿರುವಿ ನೀನು?

**ಅಲಿ** : ಸಿಟ್ಟಿಗೇಳಬೇಡಣ್ಣ : ನಾನು ನಿಜ ಸ್ಥಿತಿಯನ್ನೇ ಹೇಳಿದೆ. ಅದರಲ್ಲಿ ಮೊಹರುಗಳಿವೆಯೆಂದು ಹೇಳದಿದ್ದುದು ನನ್ನ ತಪ್ಪೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಈ ಒಂದು ತಪ್ಪಿಗಾಗಿ ನಾನು ಆಯುಷ್ಯವೆಲ್ಲ ದುಡಿದು ಗಳಿಸಿ ಉಳಿಸಿದುದೆಲ್ಲ ಕರಗಿಹೋಗಬೇಕೆ? ನನ್ನ ಮೇಲೆ ಕರುಣೆದೋರು.

**ವರ್ತಕ** : ಓ! ನಾನೇ ಕಳ್ಳನೆಂದು ಪರ್ಯಾಯವಾಗಿ ಸಾಧಿಸುತ್ತಿರುವೆಯಾ ಅಲಿ? ನಿನ್ನಂಥವರಿಗೆ ಮಾಡಿದ ಉಪಕಾರ ಸೆದಿಗೆಗೆ ಮಾಡಿದ ಸಿಂಗಾರ! ಏಳು ವರ್ಷಗಳವರೆಗೆ ನಿನ್ನ ಜಾಡಿ ಕಾಪಾಡಿದುದಕ್ಕೆ ಬಹಳ ಒಳ್ಳೆಯ ಸಂಭಾವನೆ ಕೊಟ್ಟೆ ಅಲಿ. ಇನ್ನು ನಿನ್ನ ನೆರಳು ನನ್ನ ಅಂಗಳದಲ್ಲಿ ಬೀಳಕೂಡದು. ನಡೆ, ಇಲ್ಲಿ ಇನ್ನು ಕ್ಷಣಮಾತ್ರವೂ ನಿಲ್ಲಬೇಡ. ತೊಲಗು!

**ಅಲಿ** : ಹೋಗುವೆನಣ್ಣ. ಇನ್ನು ನನ್ನ ನಿನ್ನ ಭೇಟಿ ನ್ಯಾಯಾಲಯದಲ್ಲಿಯೇ!

**ವರ್ತಕ** : ಅಗತ್ಯವಾಗಿ, ನಿನ್ನಲ್ಲಿ ಸಾಕ್ಷಿ ಪುರಾವೆಗಳಿದ್ದರೆ ಅಗತ್ಯವಾಗಿ ನ್ಯಾಯಾಲಯದ ಕಟ್ಟೆ ಹತ್ತು.

**ಅಲಿ** : ಹೊರಗಿನ ಸಾಕ್ಷಿ ಪುರಾವೆಗಳಿಲ್ಲ ಅಣ್ಣ, ಅಂತಃಸಾಕ್ಷಿಯಿದೆ; ಸರ್ವಸಾಕ್ಷಿ ಅಲ್ಲಾಹನಿದ್ದಾನೆ. ನ್ಯಾಯವೆಂಬುದೊಂದಿದ್ದರೆ ನನಗದು ದೊರೆಯಲೇಬೇಕು.



**ವರ್ತಕ** : ಸುಬಹಾನುಲ್ಲಾಹ. ಸುಬಹಾನುಲ್ಲಾಹ! ಎಂಥ ಮಾತನಾಡಿದೆ ಅಲಿ. ಈ ಮಾತಿಗಾದರೂ ನಿನಗೆ ಸಾವಿರ ಮೊಹರು ಸಿಕ್ಕಲೇಬೇಕು. ಹ್ಹ ಹ್ಹ ಹ್ಹಾ!

(ಮತ್ತೊಂದು ದೃಶ್ಯ ಅಲಿ ಖಾಜಿಯ ಹತ್ತಿರ ನ್ಯಾಯ ಕೇಳುತ್ತಿರುವನು.)

**ಕಾಜಿ** : ಅಲಿಭಾಯಿ, ನಿನ್ನಲ್ಲಿ ಯಾವ ಸಾಕ್ಷಿ ಪುರಾವೆಗಳೂ ಇಲ್ಲವೆನ್ನುವಿ, ನಿನಗೆ ಸಾವಿರ ಮೊಹರುಗಳು ಸಿಕ್ಕಲೇಬೇಕೆಂದೂ ಅನ್ನುವಿ, ಇದು ಹೇಗೆ ಸಾಧ್ಯ ಅಲಿಭಾಯಿ?

**ಅಲಿ** : ಕಾಜಿಸಾಹೇಬರೇ, ಜೀವಂತ ಮನುಷ್ಯನ ಮಾತಿಗಿಂತ ನಿರ್ಜೀವ ಪುರಾವೆಗಳೇ ಶ್ರೇಷ್ಠವೆ? ಇನ್ನು ಸಾಕ್ಷಿಯ ವಿಚಾರ. ಏಳು ವರ್ಷ ನಾನು ದೂರ ದೇಶಗಳಲ್ಲಿದ್ದಾಗ ನಡೆದ ಈ ವಿಶ್ವಾಸಘಾತವನ್ನು ಯಾರು ನೋಡಿರುವವರು? ನೋಡದೆ ಯಾರು ಸಾಕ್ಷಿ ನುಡಿವರು ನನ್ನ ಪರವಾಗಿ?

**ಕಾಜಿ** : ಅಲಿಭಾಯಿ, ನಿರ್ಜೀವ ಕಾಗದ ಪತ್ರಗಳಿಗಿಂತ ಮನುಷ್ಯನ ಮಾತಿಗೆ ಹೆಚ್ಚು ಬೆಲೆ ಕೊಡಬೇಕು, ನಿಜ. ಆದರೆ ಮನುಷ್ಯ ತನ್ನ ಮಾತಿಗೆ ಉಳಿವ ರೀತಿಯಲ್ಲಿ ಬದುಕಿದಾಗ ಮಾತ್ರ ಇದು ಸಾಧ್ಯ. ಅಲ್ಲಾಹನು ಮಾನವನಿಗೆ ನೀಡಿದ ವರಗಳಲ್ಲಿ ಮಾತುಗಾರಿಕೆಯೂ ಒಂದು. ಆದರೆ ಮಾನವ ಈ ಮಾತಿನ ಕಲೆಯನ್ನು ತಾನಾಡುವ ಮಾತಿಗೆ ಬೆಲೆಯನ್ನು ತರುವ ರೀತಿಯಲ್ಲಿ ಉಪಯೋಗಿಸಿಕೊಳ್ಳದೆ ತನ್ನ ಮಾತಿಗೆ ಬೆಲೆಯೇ ಉಳಿಯದ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ. ಹೀಗಾಗಿ ನಿರ್ಜೀವ ಕಾಗದ ಪತ್ರಗಳಿಗೆ ಅವನ ಮಾತಿಗಿಂತ ಹೆಚ್ಚಿನ ಬೆಲೆ ಬರುತ್ತದೆ. ಅವನು ಸತ್ಯವಂತನಾದರೆ, ನೀತಿವಂತನಾದರೆ ನ್ಯಾಯಾಲಯಗಳೇಕೆ ಬೇಕು? ನಿನ್ನ ಪ್ರಕರಣವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಜಾಡಿಯಲ್ಲಿ ಮೊಹರುಗಳಿವೆಯೆಂದು ನೀನು ನಿಜ ನುಡಿದಿದ್ದರೆ ಈ ಪ್ರಕರಣವೇ ಉದ್ಭವಿಸುತ್ತಿರಲಿಲ್ಲ.

**ಅಲಿ** : ಒಪ್ಪಿದೆ ಕಾಜಿಸಾಹೇಬರೇ. ನನ್ನ ತಪ್ಪನ್ನು ಒಪ್ಪಿದೆ. ಈ ಒಂದು ತಪ್ಪಿಗಾಗಿ ನಾನು ನ್ಯಾಯದಿಂದ ಪೂರ್ಣ ವಂಚಿತನಾಗಬೇಕೆ? ನನಗೆ ನ್ಯಾಯ ದೊರೆಯುವ ದಾರಿ ಯಾವುದೂ ಇಲ್ಲವೆ?

**ಕಾಜಿ** : "ದೊರೆಯ ತನಕ ದೂರು" ಎಂದು ಹೇಳಿಕೆ ಇದೆ ಅಲಿಭಾಯಿ. ದೊರೆಗಳಿಗೆ ದೂರು ಕೊಡು. ಅವರು ನ್ಯಾಯಪ್ರಿಯರೆಂದು, ದಯಾಳುಗಳೆಂದು ಹೆಸರಾಗಿದ್ದಾರೆ. ಖಲೀಫಾ ಹಾರೂನ-ಉಲ್-ರಷೀದರು ನಿನಗೆ ನ್ಯಾಯದ ದಾರಿ ಹುಡುಕಬಲ್ಲರು. ಕಾಜಿಗೆ ಹೊಳೆಯದಿದ್ದುದು ಖಲೀಫಾರಿಗೆ ಹೊಳೆಯಬಹುದು.

**ಅಲಿ** : ಹಾಗೆಯೆ ಮಾಡುವೆನು ಮಾನ್ಯರೆ. ಈ ದಾರಿ ತೋರಿದ್ದಕ್ಕಾಗಿ ತಮಗೆ ಋಣಿ ನಾನು.

(ಗೆಳೆಯರಲ್ಲಿ ಚರ್ಚೆ)

**ಜಕಿ** : ಪಾಪ ಅಲಿ ದೊರೆಗಳಿಗೇನೋ ದೂರು ಕೊಟ್ಟಿದ್ದಾನೆ. ದೊರೆಗಳಾದರೂ ಏನು ಮಾಡುವರು? ಸಾಕ್ಷಿ ಪುರಾವೆಗಳಿಲ್ಲದೆ ನ್ಯಾಯ ನೀಡಬಲ್ಲ ನ್ಯಾಯ ವ್ಯವಸ್ಥೆಯೇ ಇದುವರೆಗೂ ಹುಟ್ಟಲಿಲ್ಲ.

**ಜಾಕೋಬ** : ನ್ಯಾಯ ಅನ್ಯಾಯಗಳ ಅರ್ಥ ಗೊತ್ತಿದೆಯೆ ನಿನಗೆ, ಜಕಿ?

**ಜಕಿ** : ನೀನೇ ಹೇಳು ಅವುಗಳ ಅರ್ಥವನ್ನು ಜಾಕೋಬ.

**ಜಾಕೋಬ** : ಸಾಕ್ಷಿ ಪುರಾವೆಗಳನ್ನು ಹುಟ್ಟಿಸಿ ಸಾಧಿಸುವ ಅನ್ಯಾಯವೇ ನ್ಯಾಯ.

**ಜಯ** : ಹಾಗಾದರೆ ಅನ್ಯಾಯದ ಅರ್ಥವೇನು?

**ಜಾಕೋಬ** : ಮಾಡಿ ಸಿಕ್ಕಿಬಿದ್ದರೆ ಅನ್ಯಾಯ, ದಕ್ಕಿಸಿಕೊಂಡರೆ ಅದೇ ನ್ಯಾಯ.

**ಜಾರ್ಜ** : ಬಹಳ ಚೆನ್ನಾಗಿ ಅರ್ಥ ಹೇಳಿದೆ ಜಾಕೋಬ. ಎಷ್ಟೆಂದರೂ ನೀನು ಯಹೂದಿಯಲ್ಲವೆ?

**ಜಾಕೋಬ** : ಬರಿಯ ಅರ್ಥ ಹೇಳಿ ಪ್ರಯೋಜನವಿಲ್ಲ. ಈ ಅನರ್ಥವನ್ನು ನಾವಾದರೂ ತಪ್ಪಿಸಬೇಕು. ಸಾಕ್ಷಿ ಪುರಾವೆಗಳಿಲ್ಲದೆಯೂ ಅಲಿಗೆ ನ್ಯಾಯ ದೊರೆಯುವಂತೆ ಮಾಡಬೇಕು.

**ಜಕಿ** : ಹೇಗೆ ಮಾಡಬೇಕೆಂಬುದೇ ಪ್ರಶ್ನೆ.

**ಜಯ** : ನನಗೊಂದು ಉಪಾಯ ಹೊಳೆದಿದೆ.

**ಎಲ್ಲರು** : (ಆತುರದಿಂದ) ಏನದು, ಏನದು ಜಯ?

**ಜಯ** : ನಾವು ಊಹಿಸಿದಂತೆ ದೊರೆಗಳಿಗೂ ಈ ಸಾಕ್ಷಿ ಪುರಾವೆಯ ಪ್ರಶ್ನೆ ಎದುರಾಗಿದೆ. ಅವರೂ ಏನು ಮಾಡುವುದೆಂದು ಯೋಚನೆಗೆ ಒಳಗಾಗಿದ್ದಾರೆ. ಆದರೆ ಕಾಜಿಯವರಂತೆ ಪ್ರಕರಣವನ್ನು ವಜಾ ಮಾಡಿಬಿಡದೆ ಬಗದಾದಿನಲ್ಲಿ ಈ ಬಗ್ಗೆ ಏನಾದರೂ ಸುಳಿವು ಸಿಕ್ಕಬಹುದೇನೆಂದು ನೋಡಲು ಈಗವರು ವೇಷ ಬದಲಿಸಿಕೊಂಡು ಪರಿಚಾರಕರೊಡನೆ ಈ ರಾತ್ರಿ ಅರಮನೆಯಿಂದ ಹೊರಬಿದ್ದು ಇತ್ತ ಕಡೆಗೇ ಹೊರಟಿದ್ದಾರೆ. ಈಗ ನಾವೇ ಅವರಿಗೆ ನ್ಯಾಯ ನಿರ್ಣಯದ

ದಾರಿಯನ್ನು ತೋರಿಸಬೇಕು. ನಿಮ್ಮ ಕಿವಿಗಳನ್ನು ನನ್ನ ಬಾಯ ಬಳಿಗೆ ತನ್ನಿರಿ.

(ಕಿವಿಯಲ್ಲಿ ಏನೇನೋ ಹೇಳುವನು)

**ಎಲ್ಲರು** : ಬಹಳ ಸರಿಯಾದ ಉಪಾಯ, ಬಹಳ ಬುದ್ಧಿವಂತಿಕೆಯ ಉಪಾಯ.

(ರಾತ್ರಿಯ ಸಮಯ)

**ಖಲೀಫಾ** : ರಾತ್ರಿ ಸಾಕಷ್ಟಾಗಿದೆಯಾದರೂ ಬಗದಾದಿನಲ್ಲಿ ಇನ್ನೂ ಜನರ ಚಲನವಲನಗಳು ಜೋರಾಗಿಯೇ ಇವೆಯಲ್ಲವೆ ಗಫೂರ?

**ಗಫೂರ** : ದೊರೆಗಳೆ, ಮಹಾಪ್ರಭುಗಳ ಧರ್ಮಿಷ್ಠ ರಾಜ್ಯಕಾರ್ಯ ನಿರ್ವಹಣೆಯಿಂದ ಜನರೆಲ್ಲ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವರಾಗಿ ರಾತ್ರಿ ವಿನೋದ ಮನರಂಜನೆಗಳಲ್ಲಿ ಮಗ್ನರಾಗುತ್ತಾರೆ. ಅವರ ಈ ರಸಿಕತೆ ಅವರ ಸಿರಿವಂತಿಕೆಯ ಲಕ್ಷಣ.

**ಖಲೀಫಾ** : ಸಿರಿವಂತಿಕೆ ರಸಿಕತೆಗಳು ಬೆಳೆದಾಕ್ಷಣ ಬಗದಾದಿನವರು ಶ್ರೇಷ್ಠ ನಾಗರಿಕರಾದಂತಾಗಲಿಲ್ಲ ಗಫೂರ. ಅವರು ನೀತಿವಂತರೂ ಆಗದಿದ್ದರೆ ಈ ಸಿರಿವಂತಿಕೆ ಮರಳಿನ ಮೇಲೆ ಕರೆದ ಹಾಲಿನಂತೆ ವ್ಯರ್ಥವಾಗುತ್ತದೆ. ನೀನೇನೆನ್ನುವಿ ಮಸರೂರ?

**ಮಸರೂರ** : ಬಗದಾದಿನಲ್ಲಿ ಬೆಳೆಯಬೇಕಾದಷ್ಟು ನೀತಿವಂತಿಕೆ ಬೆಳೆದಿಲ್ಲವೆನ್ನುವುದಕ್ಕೆ ಅಲಿಯ ಪ್ರಕರಣವೇಉದಾಹರಣೆ ಮಹಾಪ್ರಭು.

**ಖಲೀಫಾ** : ನಿಜ ನುಡಿದೆ ಮಸರೂರ. ಅಲಿಯ ಪ್ರಕರಣ ನಮ್ಮ ನ್ಯಾಯ ವ್ಯವಸ್ಥೆಗೆ ಸವಾಲನ್ನು ಒಡ್ಡಿರುವ ಪ್ರಕರಣ. ಇದರಲ್ಲಿ ಅಪರಾಧಿ ಯಾರೆಂಬುದನ್ನು ಕಂಡುಹಿಡಿಯಲೇಬೇಕು. ಇಲ್ಲದಿದ್ದರೆ ನಷ್ಟಕ್ಕೆ ಒಳಗಾದ ಅಲಿಗೆ ಅನ್ಯಾಯವಾಗುವುದು ಮಾತ್ರವಲ್ಲ, ಅಪರಾಧಿಗೆ ದಂಡನೆಯಾಗದೆ ಹೋಗಿ ಅಪರಾಧ ಪ್ರವೃತ್ತಿಗೆ ಉತ್ತೇಜನ ದೊರೆಯುವುದು. ಆಗ ನಮ್ಮ ನ್ಯಾಯ ವ್ಯವಸ್ಥೆಯ ಬುಡವೇ ಅಲ್ಲಾಡತೊಡಗುವುದು. ಅದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಅದನ್ನು ತಡೆಯಲೆಂದೇ ಅಲಿಯ ಪ್ರಕರಣದಲ್ಲಿ ನ್ಯಾಯ ನಿರ್ಣಯವಾಗಲೇಬೇಕು.

**ಗಫೂರ** : ಆಗಲೇಬೇಕು ಮಹಾಪ್ರಭು.

**ಮಸರೂರ** : ಆಗಲೇಬೇಕು ಮಹಾಪ್ರಭು.

**ಖಲೀಫಾ** : ಆಗಲೇಬೇಕು. ಆಗಲೇಬೇಕೆಂದು ಕೂಗಿದರೆ ಆಗಿಬಿಡುತ್ತದೆಯೇ? ಹೇಗೆ ಆಗಬೇಕೆಂಬ ಬಗ್ಗೆ ವಿಚಾರಿಸದೆ ಆಗಬೇಕೆಂದು ಮಾರ್ನುಡಿಯುತ್ತಿರುವಿ. ಇದಕ್ಕಾಗಿಯೇ ಬಂದಿರುವಿರೇನು ನಮ್ಮೊಡನೆ?

**ಇಬ್ಬರೂ** : ಕ್ಷಮಿಸಬೇಕು ಮಹಾಪ್ರಭು.

(ಆಚೆಗೆ ಜಕಿ, ಜಾಕೋಬ, ಜಯ, ಜಾರ್ಜರ ಹಾಡು)

ನ್ಯಾಯವೆ ಆಡಳಿತದ ಅಡಿಗಲ್ಲು
ನ್ಯಾಯದ ಬಲವೇ ಬಲ ಎಲ್ಲೆಲ್ಲು
ನ್ಯಾಯದ ಆಳಿಕೆಯೇ ನಮಗಿರಲಿ
ನ್ಯಾಯಕೆ ಎಂದಿಗು ಚ್ಯುತಿ ಬರದಿರಲಿ
ನ್ಯಾಯವಂತ ದೊರೆ ನಮಗಿಹನೀಗ
ದೊರೆಯ ಚಿಂತೆಯನು ದೈವವೆ ನೀಗ

**ಖಲೀಫಾ** : ಯಾರೀ ಬಾಲಕರು? ಬುದ್ಧಿವಂತರಾದ ಇವರು ಅಸಾಮಾನ್ಯ ಬಾಲಕರಿರಲೇಬೇಕು. ಗಫೂರ, ಖಾವಂದ, ಮಸರೂರ, ನಾವು ಮರೆಯಲ್ಲಿ ನಿಂತು ಈ ಬಾಲಕರು ಮುಂದೇನು ಮಾಡುವರೆಂಬುದನ್ನು ನೋಡೋಣ.

**ಗಫೂರ** : ಆಗಲಿ ಮಹಾಪ್ರಭು.

(ಮರೆಯಾಗುವರು)

**ಜಯ** : ಗೆಳೆಯರೆ, ನಾವಿಂದು ಯಾವ ಆಟವನ್ನು ಆಡೋಣ?

**ಜಕಿ** : ನಿನ್ನೆ ನಮ್ಮ ಕಾಜಿಯವರು ನ್ಯಾಯ ನಿರ್ಣಯ ಮಾಡಲಾಗದೆ ಸೋಲೊಪ್ಪಿದರಂತೆ. ಆದುದರಿಂದ ನಾವಿಂದು ಕಾಜಿಯ ಆಟವನ್ನೇ ಆಡಿ ನ್ಯಾಯ ನಿರ್ಣಯದ ಮಾದರಿ ಒದಗಿಸೋಣ.

**ಜಾಕೋಬ** : ನಾನಿದನ್ನು ಅನುಮೋದಿಸುತ್ತೇನೆ.

**ಜಾರ್ಜ** : ನಾನೂ ಅನುಮೋದಿಸುತ್ತೇನೆ.

**ಜಯ** : ಜಕಿ ಕಾಜಿಯಾಗಿ ಕುಳಿತುಕೊಳ್ಳಲಿ. ನಾನು ಹೂಡಿರುವ ಉಪಾಯದಂತೆ ಜಕಿ ನ್ಯಾಯ ನಿರ್ಣಯ ಮಾಡಲಿ.

**ಎಲ್ಲರೂ** : ಹಾಗೆಯೇ ಆಗಲಿ.

**ಖಲೀಫಾ** : ಎಲ ಎಲ! ನಾನು ಚಿಂತಿಸುತ್ತಿರುವ ವಿಷಯುವನ್ನೇ ಇವರೂ ಆಲೋಚಿಸುತ್ತಿದ್ದಾರೆ. ಅಲ್ಲಾಹನ ಕೃಪೆಯಿದ್ದರೆ ಇವರಿಂದ ನನ್ನನ್ನು ಕೊರೆಯುತ್ತಿರುವ ಸಮಸ್ಯೆಗೆ ಪರಿಹಾರ ಸಿಕ್ಕಬಹುದು.

**ಜಕಿ** : ಕೇಳಿರಿ, ಕೇಳಿರಿ–ನಾನೀಗ ಕಾಜಿ.

**ಎಲ್ಲರೂ** : ನೀನು ಕಾಜಿಯಾಗಲು ನಾವೆಲ್ಲ ರಾಜಿ.

**ಜಕಿ** : ಹಾಗಾದರೆ ನಾನು ಹೇಳುವುದೆಲ್ಲವನ್ನು ಚಾಚೂ ತಪ್ಪದೆ ಪಾಲಿಸಿರಿ.

**ಎಲ್ಲರೂ** : ಅಪ್ಪಣೆ ನಮ್ಮ ನಾಯಕ ಕಾಜೀಸಾಹೇಬ.

**ಕಾಜಿ(ಜಕಿ)** : ಅಲಿಯನ್ನು ಹಾಗು ಅವನ ಹಣವನ್ನು ಅಪಹರಿಸಿದ ವರ್ತಕನನ್ನು ಕರೆದು ತಂದು ನನ್ನ ಮುಂದೆ ನಿಲ್ಲಿಸಿರಿ.



**ಖಲೀಫಾ** : ಅರೆ, ಅರೆ–ಅಲಿಯ ಪ್ರಕರಣದ ವಿಚಾರಣೆಯನ್ನೇ ಆರಂಭಿಸಿಬಿಟ್ಟ ಈ ಕುಮಾರ ಕಾಜಿ!

**ಗಫೂರ** : ದೊರೆಗಳನ್ನು ಕಾಡುತ್ತಿರುವ ಪ್ರಶ್ನೆಗೆ ಇಲ್ಲಿ ಉತ್ತರ ದೊರೆಯುವ ಲಕ್ಷಣ ತೋರುತ್ತಿದೆ ಪ್ರಭು.

**ಮಸರೂರ** : ಉತ್ತರ ಸಿಕ್ಕರೆ ಮನೆಗೆ ಹೋಗಿ ಹಾಯಾಗಿ ಮಲಗಬಹುದು.

**ಖಲೀಫಾ** : ನೀನೀಗ ಎಚ್ಚರಿರುವಿಯೆಂದು ಯಾರೆನ್ನುವರು? ಎಚ್ಚರಿದ್ದರೆ ತಾನೇ ಮಲಗುವ ವಿಚಾರ?

**ಮಸರೂರ** : ಕ್ಷಮಿಸಬೇಕು ಮಹಾಪ್ರಭು.

(ಜಾಕೋಬ ಜಾರ್ಜರನ್ನು ಮುಂದೆ ನಿಲ್ಲಿಸಿ)

**ಜಯ** : ಅಲಿ, ಬೇಪಾರಿ ಹಾಜರ ಹೈ.

**ನಕಲಿ ಕಾಜಿ** : ಏ ಅಲಿ, ನೀನು ಈ ವ್ಯಾಪಾರಿಯ ಹತ್ತಿರ ಜಾಡಿ ಇಟ್ಟು ಹೋದುದು ನಿಜವೆ?

**ನಕಲಿ ಅಲಿ** : ನಿಜ, ಕಾಜೀ ಸಾಹೇಬರೆ.

**ನಕಲಿ ಕಾಜಿ** : ಅದರಲ್ಲಿ ಏನನ್ನು ಇರಿಸಿದ್ದೆ?

**ನಕಲಿ ಅಲಿ** : ಮಾನ್ಯರೆ, ಅದರಲ್ಲಿ ಒಂದು ಸಾವಿರ ಮೊಹರುಗಳನ್ನು ಇರಿಸಿದ್ದೆ. ಅದು ಈ ವರ್ತಕನಿಗೆ ತಿಳಿಯದಿರಲೆಂದು ಮೇಲೆ ಜೇತೂನ ಹಣ್ಣುಗಳನ್ನು ತುಂಬಿದ್ದೆ.

**ನಕಲಿ ಕಾಜಿ** : ಆ ಜಾಡಿಯನ್ನು ಎಲ್ಲಿ ಇಟ್ಟು ಹೋದೆ?

**ನಕಲಿ ಅಲಿ** : ಈ ವರ್ತಕ ಹೇಳಿದಂತೆ ಇವನ ಮನೆಯ ಕೊಠಡಿಯ ಮೂಲೆಯಲ್ಲಿರಿಸಿ ಯಾತ್ರೆಗೆ ಹೋದೆನು.

**ನಕಲಿ ಕಾಜಿ** : ಮರಳಿ ಬಂದ ಮೇಲೆ ನಿನ್ನ ಜಾಡಿ ನಿನಗೆ ಸಿಕ್ಕಿತೆ?

**ನಕಲಿ ಅಲಿ** : ಸಿಕ್ಕಿತು ಮಾನ್ಯರೆ, ಆದರೆ ಅದರಲ್ಲಿ ಬರಿ ಹಣ್ಣುಗಳಿದ್ದವು. ಮೊಹರುಗಳು ಮಾಯವಾಗಿದ್ದವು. ನಾನು ಮನೆಗೆ ಹೋಗಿ ಜಾಡಿಯನ್ನು ತೆರೆದ ಮೇಲೆ ನನಗೆ ನಡೆದ ಮೋಸ ಗೊತ್ತಾಯಿತು. ದಯವಿಟ್ಟು ನನಗೆ ನ್ಯಾಯ ನೀಡಿರಿ.

**ನಕಲಿ ಕಾಜಿ** : ಓ ವರ್ತಕಾ, ಇದಕ್ಕೆ ನೀನೇನು ಹೇಳುವೆ?

**ನಕಲಿ ವರ್ತಕ** : ಖಾವಂದ, ಇವನು ನನ್ನ ಕೊಠಡಿಯಲ್ಲಿ ತನ್ನ ಜಾಡಿಯನ್ನು ಇಟ್ಟು ಹೋದುದೇನೋ ನಿಜ; ಆದರೆ ಅದರಲ್ಲಿ ಏನಿದ್ದುವೆಂಬುದನ್ನು ನಾನಂತೂ

ಅದನ್ನಿಡುವಾಗಲೂ, ನೋಡಲಿಲ್ಲ, ಅದನ್ನವನು ತೆಗೆದುಕೊಂಡು ಹೋಗುವಾಗಲೂ ನೋಡಲಿಲ್ಲ, ಹೀಗಿರುವಾಗ ಇವನ ಹಣವನ್ನು ನಾನು ಅಪಹರಿಸುವ ಪ್ರಶ್ನೆಯೆಲ್ಲಿ? ದೇವರಾಣೆಯಾಗಿ ನಾನು ಅಪಹರಿಸಿಲ್ಲ ಖಾವಂದರವರೇ.

**ನಕಲಿ ಕಾಜಿ** : (ತನ್ನಲ್ಲಿ) ನಾನು ಕೇಳುವ ಮೊದಲೇ ಆಣೆಯಿಟ್ಟುಕೊಂಡು ಬಿಟ್ಟನಲ್ಲ ಈ ಧೂರ್ತ, ಏ ಅಲಿ!.....

**ಕಪಟ ಅಲಿ** : ಖಾವಂದ.

**ಕಪಟ ಕಾಜಿ** : ನಿನ್ನ ಜಾಡಿಯನ್ನು ನಾವು ನೋಡಬೇಕು. ಜೇತೂನ ಹಣ್ಣುಗಳನ್ನು ತಂದಿರುವೆಯಾ?

**ನಕಲಿ ಅಲಿ** : ಇಲ್ಲ ಖಾವಂದ.

**ನಕಲಿ ಕಾಜಿ** : ಯಾಕೆ ತರಲಿಲ್ಲ? ತಲೆ ಇದೆಯೆ ನಿನಗೆ? ಈಗಲೇ ಹೋಗಿ ತೆಗೆದುಕೊಂಡು ಬಾ.

**ನಕಲಿ ಅಲಿ** : ಅಪ್ಪಣೆ. (ಹೋಗಿ ತರುವ ಸದ್ದು)

**ಖಲೀಫಾ** : ನನಗೆ ಹೊಳೆಯದ ವಿಚಾರ ಈ ಬಾಲಕನಿಗೆ ಹೇಗೆ ಹೊಳೆದಿರಬಹುದು? ಆ ಜಾಡಿಯನ್ನು ನೋಡಿ ಮುಂದೇನು ಮಾಡಬಹುದು ಈ ಕುಮಾರ ಕಾಜಿ? ಅಸಾಧಾರಣನು ಈ ಕುಮಾರ ಕಾಜಿ.

**ಗಫೂರ** : ಬಹಳ ಬುದ್ಧಿವಂತನಿರುವಂತಿದೆ ಪ್ರಭು.

**ಖಲೀಫಾ** : ನಿಮ್ಮಲ್ಲಿಲ್ಲದ ಬುದ್ಧಿ ಅವನಲ್ಲಾದರೂ ಇದೆಯಲ್ಲ!

**ಗಫೂರ** : ನಿಜ, ಮಹಾಪ್ರಭು.

**ನಕಲಿ ಅಲಿ** : (ಬಂದು) ಇದೋ, ಇದೇ ಆ ಜಾಡಿ ಖಾವಂದ.

**ನಕಲಿ ಕಾಜಿ** : ಏ ವರ್ತಕಾ, ಅಲಿ ನಿನ್ನಲ್ಲಿ ಇಟ್ಟು ಹೋಗಿದ್ದ ಜಾಡಿ ಇದೇ ಏನು?

**ನಕಲಿ ವರ್ತಕ** : (ಸುಮ್ಮನಿರುವನು)

**ನಕಲಿ ಕಾಜಿ** : ಸುಮ್ಮನೇಕಿರುವಿ ವರ್ತಕಾ? ನಿನ್ನ ಮೌನ ನಿನ್ನ ಒಪ್ಪಿಗೆಯ ಪ್ರತೀಕ. ಏ ಅಲಿ, ಜಾಡಿಯ ಬಾಯಿ ತೆರೆ.

**ನಕಲಿ ಅಲಿ** : ತೆರೆದೆ ಖಾವಂದ.

**ನಕಲಿ ಕಾಜಿ** : ಅದರೊಳಗಿರುವ ಒಂದೆರಡು ಹಣ್ಣುಗಳನ್ನು ಕೊಡು.

**ನಕಲಿ ಅಲಿ** : ಇಲ್ಲಿವೆ ಖಾವಂದ.

**ನಕಲಿ ಕಾಜಿ** : ನೋಡಲು ಚೆನ್ನಾಗಿವೆ. ತಿನ್ನಲು ಹೇಗಿವೆ? ನೋಡಿಯೇ ಬಿಡುವೆನು. (ತಿಂದು ಬಾಯಿ ಚಪ್ಪರಿಸುತ್ತ) ಆಹಾ, ಬಹಳ ಚೆನ್ನಾಗಿವೆ. ಏಳು ವರ್ಷಗಳಾದ ಮೇಲೂ ಜೇತೂನ ಹಣ್ಣುಗಳು ಇಷ್ಟು ಚೆನ್ನಾಗಿ ಉಳಿಯುವವೆ? ಈ ಹಣ್ಣಿನ ವ್ಯಾಪಾರ ಮಾಡುವವರನ್ನು ಕರೆಯಿರಿ.

**ಖಲೀಫಾ** : ಎಲ ಎಲ, ಈ ಬಾಲಕನ ಬುದ್ಧಿಗೆ ಯಾರಾದರೂ ಬೆರಗಾಗಲೇಬೇಕು. ಯಾರಿಗೂ ಹೊಳೆಯದ ಈ ಸೂಕ್ಷ್ಮ ಇವನಿಗೆ ಹೇಗೆ ಹೊಳೆಯಿತೋ ಆ ಪರ ವರದಿಗಾರನೇ ಬಲ್ಲ. ಇಷ್ಟು ವರ್ಷಗಳಿಂದ ನ್ಯಾಯ ನಿರ್ಣಯ ಮಾಡುತ್ತಲಿದ್ದೇನೆ. ನನಗೂ ಹೊಳೆಯಲಿಲ್ಲವಲ್ಲ ಈ ರಹಸ್ಯ.

**ನಕಲಿ ವರ್ತಕ** : (ಬಂದು ವಂದಿಸಿ) ನಮ್ಮನ್ನೇಕೆ ಕರೆಸಿರುವಿರಿ, ಖಾವಂದ?

**ನಕಲಿ ಕಾಜಿ** : ನೀವು ಜೇತೂನ ಹಣ್ಣುಗಳ ವ್ಯಾಪಾರ ಮಾಡುವಿರಾ?

**ಬಂದ ವರ್ತಕ**: ಹೌದು ಖಾವಂದ.

**ನಕಲಿ ಕಾಜಿ** : ಎಂದಿನಿಂದ ಈ ವ್ಯಾಪಾರ ಮಾಡುತ್ತಿರುವಿರಿ?

**ವರ್ತಕ** : ವಂಶಪರಂಪರೆಯಿಂದ ನಮ್ಮದು ಇದೇ ವ್ಯಾಪಾರ ಖಾವಂದ.

**ನಕಲಿ ಕಾಜಿ** : ಭೇಷ್! ನಿಮಗೆ ಈ ಹಣ್ಣುಗಳ ಬಗ್ಗೆ ಎಲ್ಲ ಗೊತ್ತಿದೆಯೆಂದಾಯಿತು.

**ವರ್ತಕರು** : ಎಲ್ಲ ಗೊತ್ತಿದೆ ಖಾವಂದ.

**ನಕಲಿ ಕಾಜಿ** : ವರ್ತಕರೆ, ಈ ಹಣ್ಣುಗಳು ಎಷ್ಟು ವರ್ಷಗಳವರೆಗೆ ತಿನ್ನಲು ಬರುವಂತೆ ಉಳಿಯುವವು?

**ವರ್ತಕರಲ್ಲಿ ಒಬ್ಬ** : ಖಾವಂದ, ನಾವೆಷ್ಟು ಎಚ್ಚರಿಕೆಯಿಂದ ಕಾದಿರಿಸಿದರೂ ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಇವು ತಿನ್ನಲು ಬರುವ ಸ್ಥಿತಿಯಲ್ಲಿ ಉಳಿಯಲಾರವು.

**ನಕಲಿ ಕಾಜಿ** : ಏಳು ವರ್ಷಗಳವರೆಗೆ ಕಾಯ್ದಿರಿಸಿದರೆ ಏನಾಗುತ್ತದೆ?

**ವರ್ತಕರಲ್ಲಿ ಒಬ್ಬ**: ಅವು ಕೊಳೆತುಹೋಗುತ್ತವೆ.

**ನಕಲಿ ಕಾಜಿ** : ಈ ಹಣ್ಣುಗಳನ್ನು ನೋಡಿರಿ. ಹೊರಗೆ ಪರೀಕ್ಷಿಸಿ ನೋಡಿರಿ; ತಿಂದು ನೋಡಿರಿ. ನೋಡಿ ಹೇಳಿರಿ, ಇವು ಎಷ್ಟು ವರ್ಷದ ಹಣ್ಣುಗಳಿರಬಹುದು?

**ವರ್ತಕರಲ್ಲಿ ಒಬ್ಬ** : (ನೋಡಿದಂತೆ, ತಿಂದಂತೆ ನಟಿಸಿ) ಖಾವಂದ, ಇವು ಹೊಸದಾಗಿ ತಂದುವಲ್ಲದೆ ಹಳೆಯವಲ್ಲ. ಇವು ಈ ವರ್ಷದ ಹಣ್ಣುಗಳೇ.

**ನಕಲಿ ಕಾಜಿ** : ಈ ಹಣ್ಣು ಮಾರುವ ಬೇರೆ ವರ್ತಕರನ್ನು ಕರೆದು ಕೇಳುವೆ. ನೀವು ಹೇಳುವದು ಅವರು ಹೇಳುವದು ಭಿನ್ನವಾದರೆ ಭಿನ್ನವಾದೀತು ನಿಮ್ಮ ಕತ್ತು! ಸರಿಯಾಗಿ ನೋಡಿ ಹೇಳಿರಿ.

**ವರ್ತಕರಲ್ಲಿ ಒಬ್ಬ** : ತಾವು ಬಗದಾದಿನಲ್ಲಿರುವ ಎಲ್ಲ ಜೇತೂನ ಹಣ್ಣಿನ ವ್ಯಾಪಾರಿಗಳನ್ನು ಕೇಳಿದರೂ ಇದೇ ಉತ್ತರ ದೊರೆಯುವದು ಖಾವಂದ. ದೊರೆಯದಿದ್ದರೆ ತಾವು ವಿಧಿಸುವ ಶಿಕ್ಷೆಗೆ ನಾವು ಸಿದ್ಧರು, ನಮ್ಮ ಹೇಳಿಕೆಗೆ ಬದ್ಧರು.

**ಆಲಿಯನ್ನು ವಂಚಿಸಿದ ವರ್ತಕ** : ಖಾವಂದ, ನನ್ನದೊಂದು ವಿಜ್ಞಾಪನೆಯುಂಟು.

**ನಕಲಿ ಕಾಜಿ** : (ರೇಗಿ) ಮುಚ್ಚು ಬಾಯಿ. ಶುದ್ಧ ಕಳ್ಳ. ಸೇವಕರೇ, ಈ ಕಳ್ಳನನ್ನು ಕಟ್ಟಿ ಸೆರೆಮನೆಗೆ ಸೇರಿಸಿರಿ.

**ಎಲ್ಲರೂ** : ಅಪ್ಪಣೆ ಖಾವಂದ.



(ಅವನನ್ನು ಕಟ್ಟುವ, ಅವನು ದಮ್ಮಯ್ಯ, ನನ್ನನ್ನು ಬಿಟ್ಟುಬಿಡಿರಿ. ಎಂದು ಚೀರುವ ಗಡಿಬಿಡಿಯಲ್ಲಿ ಒಮ್ಮೆಗೆ ಎಲ್ಲರ ನಗೆ ಬುಗ್ಗೆ ಪುಟಿಯುವದು. ಬಾಲಕರೆಲ್ಲ ಚೆದರುವರು.)

**ಖಾಲೀಫಾ** : (ಪ್ರವೇಶಿಸಿ ಬಂದು) ನೂರು ಮಂದಿ ಕಾಜಿಗಳನ್ನು ಈ ಬಾಲಕರ ಮುಂದೆ ನಿವಾಳಿಸಬೇಕು. ಇಂಥ ಬಾಲಕರು ಬಗದಾದಿನಲ್ಲಿರುವುದು ನನ್ನ ಭಾಗ್ಯ, ನನ್ನ ಹೆಮ್ಮೆ!

(ಬಗದಾದಿನ ಬೀದಿ. ಜಕಿಯ ಮನೆ. ಖಲೀಫಾರ ಭಟನೊಬ್ಬ ಕದ ತಟ್ಟಿ ಕೇಳುತ್ತಾನೆ.)

**ಭಟ** : ಕುಮಾರ ಜಕಿ ಒಳಗಿರುವರೆ?

**ಜಕಿಯ ತಾಯಿ**: ನೀವು ಯಾರು?

**ಭಟ** : ನಾನು ಖಲೀಫಾ ದೊರೆಗಳ ಭಟ.

**ಜಕಿಯ ತಾಯಿ** : ನನ್ನ ಮಗನೊಡನೆ ನಿನಗೇನು ಕೆಲಸವಪ್ಪ?

**ಭಟ** : ನನಗೆ ಕೆಲಸವಿಲ್ಲ ತಾಯೀ, ಖಲೀಫಾ ದೊರೆಗಳಿಗೆ ಕೆಲಸವಿದೆ ನಿಮ್ಮ ಮಗನೊಡನೆ. ಅಂತೆಯೇ ದೊರೆಗಳ ಹತ್ತಿರ ಕರೆದೊಯ್ಯಲು ಬಂದಿದ್ದೇನೆ ನಿಮ್ಮ ಮಗನನ್ನು.

**ಜಕಿಯ ತಾಯಿ** : ದೊರೆಗಳು ಕರೆಸಿರುವರೇ ನನ್ನ ಮಗನನ್ನು? ಏನು ತಪ್ಪು ಮಾಡಿರುವನಂತೆ ನನ್ನ ಮಗ?

**ಭಟ** : ಗೊತ್ತಿಲ್ಲ ತಾಯಿ. ನಿಮ್ಮ ಮಗನೊಡನೆ ಜಾಕೋಬ, ಜಯ, ಜಾರ್ಜರನ್ನು ಕರೆತರಲು ಅಪ್ಪಣೆಯಾಗಿದೆ.

**ಜಕಿಯ ತಾಯಿ** : ಯಾ ಅಲ್ಲಾ, ಅಬ್ ಕ್ಯಾ ಹೋಗಾ? ದೊರೆಗಳು ಯಾವ ಶಿಕ್ಷೆ ವಿಧಿಸುವರೋ ಈ ಕಿಡಿಗೇಡಿ ಹುಡುಗರಿಗೆ! ರಾತ್ರಿಯೆಲ್ಲಾ ಅಲೆಯುತ್ತಿರುತ್ತಾರೆ. ಮತ್ತೆ ನನ್ನ ಮಗನ ಮೊಗವನ್ನು ನಾನೆಂದಿಗೆ ನೋಡುವೆನೋ! ಯಾ ಪರವರದಿಗಾರ, ನನ್ನ ಮಗನಿಗೇಕೆ ಈ ವಿಪತ್ತು ತಂದೆ! (ಅಳುವಳು)

**ಜಕಿ** : (ಒಳಗಿನಿಂದ ಓಡಿ ಬಂದು) ಅಮ್ಮಿಜಾನ್, ನೀನು ಈ ದಿಟ್ಟ, ಧೀರ ಜಕಿಯ ತಾಯಿ ಅಳುವದೆಂದರೇನು? ದೊರೆಗಳೇಕೆ. ಅಲ್ಲಾಹನು ಕರೆದರೂ ಹೆದರದೆ ಹೋಗಿ ಪಾರಾಗಿ ಬರುವ ಧೈರ್ಯ ಈ ನಿನ್ನ ಮಗನಿಗಿದೆ. ನೀನೇಕೆ ಹೆದರುವಿ?

**ಜಯ, ಜಾಕೊಬ, ಜಾರ್ಜ** : ಜೊತೆಗೆ ನಾವಿದ್ದೇವೆ ಚಿಕ್ಕಮ್ಮ, ನಾವು ನಾಲ್ವರೂ ಹೊರಟೆವೆಂದರೆ ನಮ್ಮನ್ನು ಹಿಡಿಯಬಲ್ಲವರಾರು? ನೋಡುತ್ತಿರು, ದೊರೆಗಳಿಂದ ಬಹುಮಾನ ಪಡೆದೇ ಬರುವೆವು.

**ಜಕಿಯ ತಾಯಿ** : ಖುದಾ ಹಾಫೀಜ್! ಮಕ್ಕಳೇ, ಹೋಗಿ ಬನ್ನಿರಿ! ಅಲ್ಲಾಹನು ನಿಮ್ಮ ರಕ್ಷಕನಾಗಿರಲಿ

**ಎಲ್ಲರೂ** : ಬೇಗ ನಡೆಯಿರಿ ದೊರೆಗಳ ದೂತರೆ, ಬಡ ಭಟನ ಮೇಲೆ ದೊರೆಯ ಕ್ರೋಧ ಹರಿದೀತು.

**ಭಟ** : ನಿಮ್ಮಂಥ ದಿಟ್ಟ ಗಟ್ಟಿ ಮಕ್ಕಳನ್ನು ನಾನು ನೋಡಿರಲಿಲ್ಲವಪ್ಪ.

**ಜಕಿ** : ಇನ್ನೂ ನೋಡುವಿರಂತೆ ನಮ್ಮ ಗಟ್ಟಿತನವನ್ನು, ದಿಟ್ಟತನವನ್ನು.

(ಮುಂದಿನ ದೃಶ್ಯ ಖಲೀಫಾ, ಹಾರೂನ-ಉಲ್-ರಷೀದರ ದರ್ಬಾರದಲ್ಲಿ)

ಖಲೀಫಾ : ಬನ್ನಿ ಬಾಲಕರೆ, ನಿಂತಿರುವಿರೇಕೆ? ನಮ್ಮ ಎಡಬಲದ ಪೀಠಗಳಲ್ಲಿ ಕುಳಿತುಕೊಳ್ಳಿರಿ. ನಿಮ್ಮಂಥ ಜಾಣ ಹುಡುಗರು, ನ್ಯಾಯನಿಷ್ಠ ಬಾಲಕರು ಬಗದಾದಿನಲ್ಲಿರುವುದು ನಮಗೆ ಹೆಮ್ಮೆ ಹಿಗ್ಗುಗಳನ್ನು ಹುಟ್ಟಿಸಿದೆ. ನಿನ್ನೆ ನೀವು ಮಾಡಿದ ನ್ಯಾಯ ನಿರ್ಣಯ, ನ್ಯಾಯ ವ್ಯವಸ್ಥೆಗೆ ಗೌರವವನ್ನು ತಂದ ನಿರ್ಣಯ. ನೀವಿದನ್ನು ಎಲ್ಲಿ ಕಲಿತಿರಿ?

ಜಕಿ : ನಮ್ಮ ನೆಚ್ಚಿನ ನಗರಿ ಬಗದಾದಿನಲ್ಲಿ ದೊರೆಗಳೆ.

ಖಲೀಫಾ : ಅದು ನನಗೂ ಗೊತ್ತು ಚತುರ ಬಾಲಕ. ಬಗದಾದಿನ ಯಾವ ಶಾಲೆಯಲ್ಲಿ ಕಲಿತಿರುವಿರೆಂದು ತಿಳಿವ ಕುತೂಹಲ ನಮಗೆ.

ಜಕೋಬ : ಇದನ್ನು ಕಲಿಸುವ ಶಾಲೆಗಳಿವೆಯೆ ದೊರೆಗಳೆ ನಿಮ್ಮ ರಾಜಧಾನಿಯಲ್ಲಿ?

ಖಲೀಫಾ : ಎಲ್ಲರೂ ಎಲ್ಲವನ್ನು ಕಲಿಯುವದು ಶಾಲೆಯಲ್ಲಿ ಅಲ್ಲವೇ?

ಜಯ : ದೊರೆಗಳು ಅವಿನಯವನ್ನು ಕ್ಷಮಿಸಬೇಕು. ನಾವು ನಮ್ಮ ಶಾಲೆಗಳಲ್ಲಿ ನೋಡುವದು ನಮ್ಮ ಉಪಾಧ್ಯಾಯರ ಬಿಗಿದ ಮೊಗವನ್ನು; ಕೇಳುವದು ಅವರು ಹಿಂದೆ ಕಲಿತು ಇಂದು ಹೇಳುವುದನ್ನು! ಶಾಲೆಯ ನಾಲ್ಕು ಗೋಡೆಗಳ ನಡುವೆ ನಮಗೆ ದೊರೆಯುವದು ಬಹಳ ಪರಿಮಿತ ಅರಿವು ದೊರೆಗಳೇ!

ಖಲೀಫಾ : ಹಾಗಾದರೆ ಹೆಚ್ಚಿನ ಅರಿವಿಗಾಗಿ ನೀವೇನನ್ನು ನೆಚ್ಚಿರುವಿರಿ?

ಜಾರ್ಜ : ನಮ್ಮ ನೆಚ್ಚಿನ ನಗರವನ್ನೇ ನೆಚ್ಚಿರುವೆವು ದೊರೆಗಳೆ! ನಮ್ಮ ದೇಶದ ರಾಜಧಾನಿಯಾದ ಬಗದಾದ ನಮ್ಮ ದೇಶದ ಅರಿವಿನ ತೊರೆಗೆ ಉಗಮಸ್ಥಾನ. ಇಲ್ಲಿಯ ಜನರು, ಅವರ ಜೀವನ, ಅವರ ಆಶೋತ್ತರಗಳು–ಇವುಗಳಿಗೆ ಹತ್ತಿರವಾಗಿ ಬದುಕುತ್ತಿರುವೆವೆಂದೇ ಶಾಲೆಯಲ್ಲಿ ಕಲಿಸುವುದಕ್ಕಿಂತ ಹೆಚ್ಚಿನದನ್ನು ಅರಿಯಲು ಸಮರ್ಥರಾಗಿದ್ದೇವೆ.

ಖಲೀಫಾ : ಕಲಿಯುವ ಬಾಲಕರು ಜನಜೀವನಕ್ಕೆ ಹತ್ತಿರದಲ್ಲಿದ್ದು ಕಲಿಯಬೇಕು. ಹಸ್ತಿದಂತಹ ಗೋಪುರದಲ್ಲಿದ್ದು ಅಲ್ಲ, ಬಹಳ ಸಮಂಜಸ ಸೂತ್ರವಿದು.

ಜಕಿ : ದೊರೆಗಳೆ, ಅನೇಕ ವರ್ಷ ಬಾಲಕರನ್ನು ಜನಜೀವನದಿಂದ ದೂರವಿರಿಸಿ ಕಲಿಸಿ ಒಮ್ಮೆಗೆ ಅವರನ್ನು ಜೀವನದ ಹೋರಾಟದಲ್ಲಿ ತೂರಿಬಿಟ್ಟರೆ ಯಾರಿಗೆ ಪ್ರಯೋಜನ? ಅವರು ಕಲಿತುದಕ್ಕೂ ನೈಜ ಜೀವನಕ್ಕೂ ಅಜಗಜಾಂತರ. ಅವರು ಜೀವನ ಹೋರಾಟದಲ್ಲಿ ಸೋತರೆ ಕಲಿತವರೆಲ್ಲ ಹೀಗೆಯೇ ಎಂಬ ಹೀಯಾಳಿಕೆಗೆ ಗುರಿಯಾಗುತ್ತಾರೆ. ಸೋಲದಿರಬೇಕಾದರೆ ಹುಡುಗರಿರುವಾಗಲೇ ಹೋರಾಟವನ್ನು ಮೈಗೂಡಿಸಿಕೊಳ್ಳಬೇಕು.

**ಖಲೀಫಾ** : ಖೂಬ, ಖೂಬ. ನಿಮ್ಮೊಡನೆ ಮಾತಾಡಿದಷ್ಟು ನಿಮ್ಮ ಬಗ್ಗೆ ನಮ್ಮ ಹೆಮ್ಮೆ ಹೆಚ್ಚುತ್ತಿದೆ ಮಕ್ಕಳೆ. ನಮ್ಮ ರಾಜ್ಯದಲ್ಲೀಗ ಮಕ್ಕಳಿಗೆ ಕಲಿಸುವ ವ್ಯವಸ್ಥೆ ಸಮರ್ಪಕವಾಗಿಲ್ಲ. ಅದರಲ್ಲಿ ಬದಲಾವಣೆ ಬೇಕೆಂಬುದು ನಿಮ್ಮಿಂದಲೇ ತಿಳಿಯಿತು. ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಉತ್ತರ ಹೇಳಿರಿ. ಬಗದಾದಿನಲ್ಲಿ ಬೇಕಾದಷ್ಟು ಮಕ್ಕಳಿದ್ದಾರೆ. ಎಲ್ಲರಲ್ಲಿ ಬರದೆ ನೀವು ನಾಲ್ವರಲ್ಲಿ ಮಾತ್ರ ಈ ತಿಳುವಳಿಕೆ ಹೇಗೆ ಮೂಡಿತು?

**ಜಯ** : ಮೊದಲನೆಯದಾಗಿ. ಇಂದಿಲ್ಲ ನಾಳೆ ನಾವೇ ಈ ನಗರದ, ಈ ದೇಶದ ಹೊಣೆಗಾರಿಕೆಗಳನ್ನು ಹೊರಬೇಕಾಗುವದೆಂಬ ಅರಿವು ನಮ್ಮಲ್ಲಿ ಮೂಡಿದುದರಿಂದ ನಾವು ಈ ನಗರದ ಆಡಳಿತದ ಬಗ್ಗೆ, ಇಲ್ಲಿಯ ಜನರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ನಮಗೆ ಉತ್ತೇಜನ ನೀಡಿತು.

**ಜಕಿ** : ಎರಡನೆಯದಾಗಿ ನಾವೆಲ್ಲರೂ ಒಂದೇ ನಗರದ, ಒಂದೇ ದೇಶದ ಪುತ್ರರೆಂಬ ಭಾವನೆ ಬೆಳೆಯಿತು. ಆದುದರಿಂದ ನಾವು ನಾಲ್ವರೂ ಬೇರೆ ಬೇರೆ ಧರ್ಮಗಳಿಗೆ ಸೇರಿದವರಾದರೂ ನಾವು ಅಣ್ಣ ತಮ್ಮಂದಿರಂತಿದ್ದೇವೆ. ಒಬ್ಬರನ್ನೊಬ್ಬರು ನಂಬುತ್ತೇವೆ, ಪ್ರೀತಿಸುತ್ತೇವೆ. ಒಬ್ಬರೊಬ್ಬರಿಗೆ ನೆರವಾಗುತ್ತೇವೆ. ಹೀಗಿರುವುದರಿಂದ ಒಬ್ಬನಿಗೆ ಹೊಳೆಯದಿದ್ದುದು ಇನ್ನೊಬ್ಬನಿಗೆ ಹೊಳೆಯುತ್ತದೆ. ಹಾಗೆ ಹೊಳೆದಾಗ ಅದು ನಮ್ಮೆಲ್ಲರದಾಗುತ್ತದೆ.



ಖಲೀಫಾ : ಬಹುತ ಖೂಬ್! ವಜೀರ್, ಸಾಲಾರ್, ದರಬಾರಿಗಳೆ, ನಾವು ಇದುವರೆಗೆ ರಾಜ್ಯದ ಭವಿಷ್ಯವು ತುಂಬಿದ ಖಜಾನೆ, ಸಶಸ್ತ್ರ ಸೈನ್ಯ, ದಕ್ಷ ದಂಡ ವ್ಯವಸ್ಥೆಯನ್ನು ಅವಲಂಬಿಸಿದೆಯೆಂದು ತಪ್ಪಾಗಿ ತಿಳಿದುಕೊಂಡಿದ್ದೆವು. ಇಂದು ಈ ಬಾಲಕರಿಂದ ತಿಳಿಯಿತು– ಅದು ಇಲ್ಲಿಯ ಬಾಲಕರ ಸರಿಯಾದ ಸಮಗ್ರ ಶಿಕ್ಷಣ, ಬುದ್ಧಿಯ ಹಾಗೂ ಭಾವ ಜೀವನದ ಬೆಳವಣಿಗೆಯನ್ನು ಅವಲಂಬಿಸಿದೆಯೆಂಬುದು ಆದುದರಿಂದ, ಬಾಲಕ ಬಾಲಕಿಯರ ಬೆಳವಣಿಗೆಯೇ ಇಂದಿನಿಂದ ನಮ್ಮ ಗುರಿಯಾಗಿರಲಿ. ಅವರ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತ ಪರಿವರ್ತನೆಯಾಗಲಿ. ಇವರ ಶಿಕ್ಷಣಕ್ಕಾಗಿ ಈಗ ವೆಚ್ಚವಾಗುವ ಮೊತ್ತ ಹತ್ತುಪಟ್ಟು ಹೆಚ್ಚಲಿ. ಈಗ ಈ ಬಾಲಕರಿಗೆ ಇವರು ಹೊರುವಷ್ಟು ಮೊಹರುಗಳ ಬಹುಮಾನ ವಿತರಣೆಯಾಗಲಿ.

ಜಕಿ : ಇಂಥ ದಯಾಳು ದೊರೆಗಳನ್ನು ಪಡೆದ ನಾವೇ ಧನ್ಯರು.

ಖಲೀಫಾ : ಅಲ್ಲ. ನಿಮ್ಮಂಥ ಬಾಲಕರನ್ನು ಪಡೆದ ನಾನೇ ಧನ್ಯನು. ಇಂದಿನಿಂದ ಈ ರಾಜ್ಯದಲ್ಲಿ ಮಕ್ಕಳ ಶಾರೀರಿಕ, ಬೌದ್ಧಿಕ, ನೈತಿಕ, ಬೆಳವಣಿಗೆಗೆ ಮೊದಲ ಸ್ಥಾನ, ಮಕ್ಕಳೇ ದೇಶದ ನಿಧಿ–ನಿಧಾನ! ಮನೆಗೆ ಹೋಗಿರಿ ಮಕ್ಕಳೆ, ಬಗದಾದಿನ ಬಾನಿನ ಚುಕ್ಕೆಗಳೆ. ನೀವಿನ್ನು ನನ್ನ ಮಕ್ಕಳು ಕೂಡ! ಎತ್ತರಕ್ಕೆ ಬೆಳೆಯಿರಿ, ಬಿತ್ತರಕ್ಕೆ ಹರಡಿರಿ. ಆಳಕ್ಕೆ ಇಳಿಯಿರಿ, ಬೆಳಗಿನ ಬಾಳು ಬಾಳಿರಿ, ನಿಮ್ಮ ದೇಶವನ್ನು ಬೆಳಗಿರಿ!

(ಮನೆಯತ್ತ ಕುಣಿಯುತ್ತ ಹೊರಟ ಜಕಿ, ಜಾಕೋಬ, ಜಯ–ಜಾರ್ಜರು ಆರಂಭದ ಕೂಡು ಹಾಡನ್ನು ಹಾಡುತ್ತ ಹೋಗುತ್ತಾರೆ)

ನಾಡಿನ ನರದಲಿ ನೆತ್ತರು ನಾವು
ನುಡಿಯ ಬಳ್ಳಿಯಲಿ ನಾವೇ ಹೂವು
ನಾಳಿನ ಕನಸಿನ ಅರ್ಥವು ನಾವು,
ನಾವು ಬಾಲರು!

# ಶುಕವನ



ಜಗತ್ತಿನಲ್ಲಿರುವ ಎಲ್ಲ ತರದ ಗಿಳಿಗಳನ್ನು ಒಂದೇ ಕಡೆಗೆ ನೋಡಬೇಕಾದರೆ ಅಮೇರಿಕೆಯ ಫ್ಲೋರಿಡಾ ರಾಜ್ಯದಲ್ಲಿ ಮಿಯಾಮಿ ನಗರದ ಬಳಿ ಇರುವ ಗಿಳಿಬನಕ್ಕೆ ಹೋಗಬೇಕು. ಒಂದೇ ದೇಶದ ಹಲವು ಗಿಳಿಗಳನ್ನು, ಮಾದರಿಗಾಗಿ ಬೇರೆ ದೇಶಗಳ ಕೆಲವು ಗಿಳಿಗಳನ್ನು ಆಯಾ ಪ್ರಾಣಿ ಸಂಗ್ರಹಾಲಯಗಳಲ್ಲಿ ನೋಡಬಹುದಾಗಿದೆ. ಆದರೆ ಎಲ್ಲ ದೇಶಗಳ ಎಲ್ಲ ತಳಿಗಳ ಗಿಳಿಗಳನ್ನು ಸಂಗ್ರಹಿಸಿದ ಶ್ರೇಯಸ್ಸು ಈ ಶುಕವನಕ್ಕೆ ಸಲ್ಲಬೇಕು. ಸಹಜವಾಗಿಯೇ ಇದು ದೇಶ ವಿದೇಶಗಳಲ್ಲಿ ಹೆಸರಾದ ಪ್ರವಾಸಿ ಕೇಂದ್ರವಾಗಿದೆ.

ಇದು ಅಮೇರಿಕೆಯಲ್ಲಿದೆ. ಆದರೆ ಇದನ್ನು ಆರಂಭಿಸಿದವ ಆಸ್ಟ್ರಿಯಾದಲ್ಲಿ ಹುಟ್ಟಿ ಹೊಟ್ಟೆ ಹೊರೆಯಲು ಅಮೇರಿಕೆಗೆ ಬಂದಿದ್ದ ಒಬ್ಬ ವ್ಯಕ್ತಿ ಎಂದು ಹೇಳಿದರೆ ಅಚ್ಚರಿಯೆನಿಸಬಹುದಲ್ಲವೆ? ಸಾಹಸಗುಣವೊಂದಿದ್ದರೆ ಎಂಥ ಕಠಿಣ ಕಾರ್ಯವನ್ನೂ ಮಾಡಿ ತೋರಿಸಬಹುದೆಂಬುದಕ್ಕೆ ಈ ಫ್ರಾಂಝ್ ಸ್ಕೆರ್ ನಿದರ್ಶನವಾಗಿದ್ದಾನೆ. ಮೊದಲು ಏನೇನೋ ಮಾಡಿ ಸೋತ ಇವನು ತನ್ನ ಪ್ರೀತಿಯ ಪ್ರಕೃತಿ ಮಾತೆಯನ್ನೇ ಆಶ್ರಯಿಸಲು ನಿರ್ಧರಿಸಿದ. ೧೯೩೬ನೆಯ ಇಸ್ವಿಯ ಡಿಸೆಂಬರ ತಿಂಗಳಿನ ೨೦ರಂದು ತಾನು ಕಟ್ಟಿದ ಸಣ್ಣ ಪ್ರಮಾಣದ ಶುಕವನವನ್ನು ಪ್ರೇಕ್ಷಕರಿಗೆ ತೋರಿಸಿದ. ಸುಂದರವಾದ ವನದ ನಡುವೆ ಬಣ್ಣ ಬಣ್ಣದ ಬಗೆಬಗೆಯ ಗಿಳಿಗಳನ್ನು ನೋಡಿದ ನೂರು ಪ್ರೇಕ್ಷಕರು ಬೆರಗಾಗಿ ಹಿಂದಿರುಗಿದರು. ಅವನ ಶ್ರಮ ಸಾರ್ಥಕವಾಯಿತು.



ಹೊಸ ಹುರುಪಿನೊಡನೆ ಬೆಳೆಸತೊಡಗಿದ ಗಿಳಿ–ಬನವನ್ನು. ಬೇರೆ ಬೇರೆ ದೇಶಗಳ ಗಿಳಿಗಳನ್ನು ತರಿಸಿದ. ತನ್ನ ಇಪ್ಪತ್ತು ಎಕರೆಗಳ ಭೂಮಿಯಲ್ಲಿ ಭೂಲೋಕದ ನಂದನವನದಂತಿರುವ ವನವನ್ನು ಬೆಳೆಸಿದ. ಅಲ್ಲಿ ನೂರಾರು ಜಾತಿಯ ಸಾವಿರಾರು ಗಿಳಿಗಳನ್ನು ಸಾಕಿದ. ಅವುಗಳಿಗೆ ಮಾತು ಕಲಿಸಿದ. ಅವುಗಳಿಗೆ ಆಟ–ಪಾಟ ಕಲಿಸಿದ. ಸರ್ಕಸ್ಸಿನ ಕಸರತ್ತುಗಳನ್ನು ಕಲಿಸಿದ. ಅವುಗಳಿಗಾಗಿಯೇ ಒಂದು ರಂಗಮಂಚವನ್ನು ರಚಿಸಿದ. ಅಲ್ಲಿ ಅವುಗಳ ಸರ್ಕಸ್ ಪ್ರದರ್ಶನ ಪ್ರಾರಂಭಿಸಿದ.

ಕೇಳುವುದೇನು? ಮಕ್ಕಳಿಂದ ಮುದುಕರವರೆಗೆ ದೇಶ–ವಿದೇಶಗಳಿಂದ ಪ್ರವಾಸಿ ಜನರು ನೋಡಲು ಬರತೊಡಗಿದರು. ಅದಕ್ಕೆ ತಕ್ಕಂತೆ ಶುಕವನವೂ ಬೆಳೆಯತೊಡಗಿತು. ತೋಟಗಾರಿಕೆಯಲ್ಲಿ ನಡೆದ ವಿವಿಧ ಪ್ರಯೋಗಗಳ ಲಾಭ ಪಡೆದು ಶುಕವನವನ್ನು ಇನ್ನೂ ಸುಂದರಗೊಳಿಸಲಾಯಿತು. ಪ್ರವೇಶದ್ವಾರ ಹವಳದ್ದು. ಒಳಗೆ ಪ್ರವೇಶಿಸುತ್ತಲೇ ತಮ್ಮ ತಮ್ಮೊಳಗೆ ಮಾತನಾಡುತ್ತಿರುವ, ಕರೆದರೆ ಬಂದು ಭುಜಗಳ ಮೇಲೆ ಕುಳಿತುಕೊಳ್ಳುವ, ಕ್ಯಾಮರಾ ಕಂಡರೆ ಫೋಟೋ ತೆಗೆಸಿಕೊಳ್ಳಲು ಸಿದ್ಧವಾಗುವ ಗಿಳಿಗಳಿಂದ ಸ್ವಾಗತ. ಹಚ್ಚ ಹಸುರಿನ ನೆಲ, ಅದರಲ್ಲಿ ಹೊರಲಾರದಷ್ಟು ಹೂ ಬಿಟ್ಟಿರುವ, ಹಣ್ಣು ಹೊತ್ತಿರುವ ತರತರದ ಮರಗಳು, ಅವುಗಳ ಮಧ್ಯದಲ್ಲಿ ತುಳಿಯಲೋ ಬೇಡವೋ ಎಂಬ ಅಂಕುಡೊಂಕಾದ ದಾರಿ. ಮೇಲೆ ಬಗೆಬಗೆಯ ಬಳ್ಳಿಗಳ ಹಂದರ. ಅಲ್ಲಲ್ಲಿ ಚಿಕ್ಕ ಚಿಕ್ಕ ಜಲಪಾತಗಳು, ಸಣ್ಣ ಸಣ್ಣ ಸರೋವರಗಳು. ಅವುಗಳಲ್ಲಿ ಹೊಳೆವ ಮೀನುಗಳು, ತೇಲುವ ಚಲುವಿನ ಪಕ್ಷಿಗಳು. ದಾರಿಯ ಎರಡೂ ಬದಿಗಳಲ್ಲಿ ಹಾಯಾಗಿ ಹರಿಯುವ ತಿಳಿನೀರಿನ ಕಾಲುವೆಗಳು, ಕಾರಂಜಿಗಳು, ಚಿಲುಮೆಗಳು. ಕಡಲೆಕಾಯನ್ನೋ ಹಣ್ಣನ್ನೋ ಮುಂದೆ ಹಿಡಿದರೆ ಹಾರಿ ಬಂದು ತೆಗೆದುಕೊಂಡು ಹೋಗುವ ಕಪಿಗಳು. ಒಂದೇ ಎರಡೇ ಎಷ್ಟೊಂದು ಆಕರ್ಷಣೆಗಳು ದಾರಿಯುದ್ದಕ್ಕೂ!



ಸ್ವಲ್ಪ ದೂರ ಹೋದ ಮೇಲೆ ಫ್ಲೇಮಿಂಗೋ ಸರೋವರ ಬರುತ್ತದೆ. ಇದನ್ನು ತಲುಪುವಾಗ ಇನ್ನೊಂದು ಕಿರಿಸರೋವರದಲ್ಲಿ ಅಂಚೆ, ನೀರಗೋಳಿ ಇತ್ಯಾದಿಗಳ ಅನೇಕ ಮಾದರಿಗಳನ್ನು ಕಾಣುತ್ತೇವೆ. ಅಂದಚಂದದ ಪಂಜರಗಳಲ್ಲಿ ಅನೇಕ ವಿಧವಾದ

ಸುಂದರ ಪಕ್ಷಿಗಳನ್ನು ನೋಡುತ್ತೇವೆ. ಫ್ಲೇಮಿಂಗೋ ಸರೋವರವಂತೂ ನೋಡಿಯೇ ನಂಬಬೇಕಾದ ಅದ್ಭುತ ರಮ್ಯ ನೋಟ! ಸುತ್ತು ನೂರು ಬಗೆಯ ದಾಸವಾಳದ, ಬೋಗನ್ ವಿಲಿಯದ ಇನ್ನೂ ಅನೇಕ ಬಗೆಯ ನಗುವಹೂವುಗಳು. ಸರೋವರದಲ್ಲಿ ನೋಡಿದ ಸಲಕ್ಕೊಮ್ಮೆ ಬೇರೆ ಬಣ್ಣವಾಗಿ ಕಾಣುವ ಫ್ಲೇಮಿಂಗೋ ಪಕ್ಷಿಗಳ ಹಿಂಡು-ಹಿಂಡುಗಳು, ಸಾಲು ಸಾಲುಗಳು! ಇಲ್ಲಿ ಮನ ಚೆಲುವನ್ನು ನೋಡಿ ಹಿಗ್ಗಬೇಕೋ, ಪಕ್ಷಿಗಳ ಸೊಬಗನ್ನು ಹೀರಿ ಹಿಗ್ಗಬೇಕೋ, ಸರೋವರದ ಸಿರಿಯನ್ನು ಕಂಡು ಹಿಗ್ಗಬೇಕೋ ತಿಳಿಯದಾಗಿದೆ. ಈ ನಿಬ್ಬೆರಗಿನಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಶುಕರಂಗಮಂಚ ಕಂಗೊಳಿಸುತ್ತದೆ. ಅಲ್ಲಿ ಪ್ರಾರಂಭವಾಗುತ್ತದೆ, ಗಿಳಿಗಳ ಸರ್ಕಸ್ಸು! ಎತ್ತ ಎತ್ತರದ ತಂತಿಯ ಮೇಲೆ ಬೈಸಿಕಲ್ ನಡೆಸುವ ಗಿಳಿ, ರಥಗಳ ಪಂದ್ಯದಲ್ಲಿ ಭಾಗವಹಿಸುವ ಗಿಳಿ, ಜಾರು ಬಂಡೆಯಾಡುವ ಗಿಳಿ, ಕಾರು ನಡೆಸುವ ಗಿಳಿ, ದೂರವಾಣಿಯಲ್ಲಿ ಮಾತನಾಡುವ ಗಿಳಿ, ಕಳ್ಳನನ್ನು ಕಂಡುಹಿಡಿಯುವ ಗಿಳಿ, ಹೀಗೆ ಒಟ್ಟು ಮೂವತ್ತು ತರದ ಕಸರತ್ತುಗಳನ್ನು ತೋರಿಸುವ ಗಿಳಿಗಳು ನೋಡುವವರನ್ನು ಬೆಕ್ಕಸು ಬೆರಗುಗೊಳಿಸುತ್ತವೆ.



ಎಲ್ಲ ಗಿಳಿಗಳಿಗೂ ಹೆಸರುಗಳಿವೆ. ಎಲ್ಲ ಗಿಳಿಗಳಿಗೂ ಹಾಸುಗೆಗಳಿವೆ. ಅವುಗಳ ಹೆಸರು ಹಿಡಿದು ಕೂಗಿದಾಗ ಅವು ಬಂದು ತಂತಮ್ಮ ಹಾಸಿಗೆಗಳ ಮೇಲೆ ಮಲಗುವದನ್ನು ನೋಡುವುದೇ ಒಂದು ಸೊಗಸು. ಅವುಗಳು ಆಹಾರವನ್ನೇ ಸೇವಿಸಲಿ ಆಟಗಳನ್ನೆ ಆಡಲಿ, ಪ್ರೀತಿಯನ್ನೆ ಮಾಡಲಿ, ಸುಮ್ಮನೆ ಹಾರಾಡಲಿ ಎಲ್ಲವೂ ಸೊಗಸು.

ಎಲ್ಲ ನೋಡಿ ಹೊರಗೆ ಬಂದಾಗ ಎಂಥ ಸೊಬಗಿನ ಸೂರೆಯನ್ನು ನೋಡಿದೆವೆಂಬ ಸಂತೃಪ್ತಿಯು ಇರುತ್ತದೆ. ಇಂಥದನ್ನು ಬಿಟ್ಟು ಹೋಗಬೇಕಲ್ಲ ಎಂಬ ಖಿನ್ನತೆಯೂ ಮನದಲ್ಲಿ ಪುಟಿಯುತ್ತಿರುತ್ತದೆ. ನಮ್ಮೂರಲ್ಲಿಯ ಮರಗಳನ್ನು ಬೆಳೆಸಬೇಕು ಪ್ರಾಣಿಗಳನ್ನು ಉಳಿಸಬೇಕು. ಹಕ್ಕಿಗಳನ್ನು ಸಾಕಬೇಕು, ನಮ್ಮೂರನ್ನು ಸುಂದರಗೊಳಿಸಬೇಕೆಂಬ ಬಯಕೆ ಚಿಗುರುತ್ತದೆ.

# ಸಮುದ್ರ ಲೋಕ

ಸಮುದ್ರ ಲೋಕವೆಂದರೇನು?

ಸಮುದ್ರ ಪ್ರಾಣಿಗಳನ್ನೆಲ್ಲ ಒಂದೆಡೆಗೆ ತೋರಿಸುವ ವ್ಯವಸ್ಥೆ. ಕುಟುಂಬದ ಎಲ್ಲರಿಗೂ ಮನರಂಜನೆ ನೀಡಬಲ್ಲ ನಾನಾ ಪ್ರಕಾರದ ಮೋಜಿನ ಕೇಂದ್ರ. ಅದರ ನಾಲ್ಕೂ ಕಡೆಗೆ ಸಮುದ್ರ. ಇದು ಸಮುದ್ರಲೋಕದ ಸ್ಥೂಲ ಪರಿಚಯ.



ಒಂದೇ ದೇಶದಲ್ಲಿ ಇಂಥ ಮೂರು ಸಮುದ್ರಲೋಕಗಳಿವೆ, ಆ ದೇಶ ಅಮೇರಿಕಾ. ಇನ್ನೂ ಹೆಚ್ಚಿದ್ದರೂ ಇರಬಹುದು. ನನಗೆ ಗೊತ್ತಿರುವುವು ಮೂರು. ಕ್ಯಾಲಿಫೋರ್ನಿಯ ರಾಜ್ಯದ ಸ್ಯಾನ್‌ಡಿಯೆಗೋದಲ್ಲಿ ೧೯೬೪ರಲ್ಲಿ ಆರಂಭವಾದ ಸಮುದ್ರಲೋಕ. ಓಹಿಯೋ ರಾಜ್ಯದ ಕ್ಲೆವ್‌ಲ್ಯಾಂಡಿಗೆ ೨೩ ಮೈಲುಗಳ ದೂರದಲ್ಲಿ ೧೯೭೦ರಲ್ಲಿ ಉದಯವಾದ ಸಮುದ್ರಲೋಕ ಹಾಗೂ ಫ್ಲೋರಿಡಾ ರಾಜ್ಯದಲ್ಲಿ ಒರ್ಲೆಂಡೊಕ್ಕೆ ಐದು ಮೈಲುಗಳ ಅಂತರದಲ್ಲಿ



೧೯೭೩ರಲ್ಲಿ ಮೈದೋರಿದ ಸಮುದ್ರಲೋಕ. ಇವು ಮೂರು ಒಂದಕ್ಕೊಂದು ಪೂರಕವಾಗಿ ಋತುಗಳ ಬದಲಾವಣೆಗೆ ತಕ್ಕಂತೆ ಒಂದರ ಪ್ರಾಣಿಗಳನ್ನು ಇನ್ನೊಂದಕ್ಕೆ ಸಾಗಿಸುತ್ತಾರೆ. ಅದೂ ಒಂದು ಅದ್ಭುತವೇ!

ಆ ಮೂರೂ ದಿನ ದಿನಕ್ಕೆ ಬೆಳೆಯುತ್ತಲಿರುವ ಸಮುದ್ರಲೋಕಗಳೇ. ಒಂದೊಂದಕ್ಕೂ ಕೋಟ್ಯಾನು ಕೋಟಿ ಹಣ ವೆಚ್ಚವಾಗಿ ಒಂದೊಂದೂ ಒಂದು ಅಚ್ಚರಿಯಂತಿದ್ದರೂ ಅವುಗಳನ್ನು ಇನ್ನೂ ಬೆಳೆಸುವ ಆಸೆ ಚಾಲಕರಿಗೆ. ಬೆಳವಣಿಗೆಯೇ ಜೀವನದ ಲಕ್ಷಣ ಅವರ ಪಾಲಿಗೆ. ಬೆಳವಣಿಗೆ ನಿಂತಿತೋ ಮರಣ ಬಂದ ಹಾಗೆ. ಈ ಮೂರರಲ್ಲಿ ಇತ್ತೀಚಿನದಾದ ಫ್ಲೋರಿಡಾ ರಾಜ್ಯದ ಸಮುದ್ರಲೋಕವು ವರ್ಷದುದ್ದಕ್ಕೂ ತೆರೆದಿರುವ ಉಳಿದ ಎರಡಕ್ಕಿಂತಲೂ



ಮುಂದುವರಿದ ಸಮುದ್ರಲೋಕವಾಗಿದೆ. ೧೨೫ ಎಕರೆ ವ್ಯಾಪಿಸಿರುವ ಈ ಲೋಕವನ್ನು ನೋಡುವ ಸುಯೋಗ ನನಗೆ ಸಿಕ್ಕಿದ್ದು ೧೯೭೪ರಲ್ಲಿ.

ಆರಂಭದಲ್ಲಿಯೇ ಒಂದು ಅದ್ಭುತ ಪ್ರದರ್ಶನ. ದೊಡ್ಡ ಉಪ್ಪುನೀರಿನ ಕೆರೆ. ಅದರಲ್ಲಿ ೧೮ ಅಡಿ ಉದ್ದದ ೪೭೦೦ ಪೌಂಡು ತೂಕದ ೪ ಇಂಚು ನೀಳವಾಗಿರುವ ೪೪ ದೈತ್ಯ ದಂತಗಳ ತಿಮಿಂಗಿಲವೊಂದು ರಭಸದಿಂದ ಈಸುತ್ತಿರುವುದನ್ನು ನೋಡುತ್ತೇವೆ. ತನ್ನ ಅಂಗಾಂಗಳನ್ನೆಲ್ಲ ಕಸುವಿನಿಂದ ಚಲಿಸುತ್ತ ರಭಸದೊಡನೆ ಈಸುತ್ತಿರುವ ಅದು ಒಮ್ಮೆಗೆ ತನ್ನ ಉದ್ದ ಎರಡರಷ್ಟು ಎತ್ತರಕ್ಕೆ ಜಿಗಿಯುತ್ತದೆ. ನೆರೆದ ಸಾವಿರಾರು ನೋಟಕರು ಬೆಕ್ಕಸ ಬೆರಗಾಗುತ್ತಾರೆ.

ಇದಕ್ಕೂ ಬೆರಗಾಗಿಸುವ ನೋಟ ಆ ಮೇಲೆ ಕಾಣುತ್ತದೆ. ಅದು ತನ್ನ ರಕ್ಕಸ ಬಾಯಿ ತೆರೆಯುತ್ತದೆ–ಎಷ್ಟು ಅಗಲ ತೆರೆಯಬಹುದೋ ಅಷ್ಟು ಅಗಲ ತೆರೆಯುತ್ತದೆ. ಅದರ ಎರಡೂ ಹಲ್ಲಿನ ಸಾಲುಗಳ ಮಧ್ಯದಲ್ಲಿ ಅದನ್ನು ಆಡಿಸುವವ ತನ್ನ ತಲೆ ಇರಿಸುತ್ತಾನೆ. ಕಚ್ಚಿದರೆ ಚಪ್ಪಡಿಯಾಗುತ್ತದೆ ಅವನ ತಲೆ. ಆದರೆ ಅದು ಕಚ್ಚುವುದಿಲ್ಲ. ಕಲಿಸಿದರೆ ಎಂಥ ಕ್ರೂರ ಪ್ರಾಣಿಗಳೂ ಮನುಷ್ಯ ಹೇಳಿದಂತೆ ಕೇಳುವುವೆಂಬುದಕ್ಕೆ ಇದು ಉದಾಹರಣೆ.



ಇದಾದ ಮೇಲೆ ಅದು ಎತ್ತರಕ್ಕೆ ನೆಗೆದು ಮಿಣಿ ದಾಟಿ ಬೀಳುತ್ತದೆ. ಉದ್ದಕ್ಕೆ ಜಿಗಿಯುತ್ತದೆ. ಏನೇನೋ ಕಸರತ್ತುಗಳಿಂದ ಜನರನ್ನು ತಣಿಸುತ್ತದೆ. ಸಮುದ್ರದ ಭಯಂಕರವಾದ ಪ್ರಾಣಿ ಇಲ್ಲಿ ಆನಂದಕರವಾಗಿ ಕೆಲಸ ಮಾಡುತ್ತದೆ.

ಪೆಂಗ್ವಿನ್ (ಒಂದು ಜಾತಿಯ ಕಡಲ ಕೋಳಿ) ಹಾಗೂ ಸೀಲ್ ಪ್ರಾಣಿ (ಒಂದು ಬಗೆಯ ಕಡಲ ಕರಡಿ)ಗಳ ಕಸರತ್ತುಗಳನ್ನು ಆಮೇಲೆ ತೋರಿಸುವರು. ಹಿನ್ನೆಲೆಯಲ್ಲಿ ಒಂದು ದೈತ್ಯಾಕಾರದ ನೀರ್ಗುದುರೆ ನಿಂತು ಇವುಗಳ ಕಸರತ್ತುಗಳನ್ನು ನೋಡಿ ನಗುವವರಿಗೆ, 'ನಗಬೇಡಿ ನಾನಿದ್ದೇನೆ ಇಲ್ಲಿ ನಿಮ್ಮೆದೆಗಳನ್ನು ಅದುರಿಸಲು!' ಎಂದು ಹೇಳುವಂತೆ ಇರುತ್ತದೆ.

'ಡಿಂಗ್–ಅಲಿಂಗ್ ಬಂಧುಗಳ ಸರ್ಕಸ್' ಎಂದು ಕರೆಯಲಾಗಿರುವ ಈ ಪೆಂಗ್ವಿನ್–ಸೀಲ್ ಪ್ರಾಣಿಗಳ ಕಸರತ್ತುಗಳು ಬಾಲಕ ಬಾಲಕಿಯರನ್ನು ಬಹಳ ಆಕರ್ಷಿಸುತ್ತವೆ.

ಇದಾದ ಮೇಲೆ ಒಂದು ಜಪಾನಿ ಹಳ್ಳಿಗೆ ಕರೆದೊಯ್ಯುತ್ತಾರೆ. ಅದು ನಿಜವಾಗಿಯೂ ಅಮೇರಿಕೆಯಲ್ಲಿರುವ ಒಂದು ಜಪಾನಿ ಹಳ್ಳಿಯಂತೆ ಕಾಣುತ್ತದೆ. ಆ ಮನೆಗಳೊ, ಗುಡಿಸಲುಗಳೊ, ಅಂಗಡಿಗಳೊ, ಉಪಹಾರ ಗೃಹಗಳೋ–ಎಲ್ಲವೂ ಜಪಾನಿನಲ್ಲಿರುವಂತೆಯೇ ಇವೆ. ಅಲ್ಲಿ ಕೆಲಸ ಮಾಡುವವರೂ ಜಪಾನೀಯರೇ! ಜಪಾನಿ ಹುಡುಗಿಯರ ವೇಷ ಭೂಷಣಗಳು, ಅವರ ಮೂಕ ನಗೆಗಳು ಒಮ್ಮೆಗೆ ನಮ್ಮನ್ನು ಬೇರೊಂದು ದೇಶಕ್ಕೆ ಕರೆದೊಯ್ಯುತ್ತವೆ. ಅಲ್ಲಿ ತೋರಿಸುವ ಎಲ್ಲವನ್ನು ಇಲ್ಲಿ ಬಣ್ಣಿಸಲು ಆಗುವದಿಲ್ಲ. ಆದರೆ ಒಂದನ್ನು ಬಣ್ಣಿಸಲೇಬೇಕು. ಒಂದು ಮರಿಕಡಲನ್ನು ಮಾಡಿದ್ದಾರೆ. ಅದರ ಸುತ್ತಲೂ ಜನರು ನಿಂತು ನೋಡುತ್ತಿರುವಂತೆ ವಿಶೇಷ ವೇಷ ಧರಿಸಿದ ಜಪಾನಿನ ಚೆಲುವೆಯರು ಅದರ ತಳಕ್ಕಿಳಿದು ಒಡಲಲ್ಲಿ ಮುತ್ತನ್ನು ಹುದುಗಿಕೊಂಡಿರುವ ಸಿಂಪುಗಳನ್ನು ಕೊಂಡು

ಮೇಲಕ್ಕೆ ಬರುತ್ತಾರೆ. ಎದೆಗಾರಿಕೆಯುಳ್ಳ ನೋಟಕರು ಆ ಉಡುಪು ತೊಟ್ಟುಕೊಂಡು ಮುಳುಗಿ ಮುತ್ತುಗಳನ್ನು ತರಬಹುದು. ಆ ಮುತ್ತುಗಳು ಮಾರಾಟಕ್ಕೆ ದೊರೆಯುತ್ತವೆ ಅಲ್ಲಿ.

ಮುಂದಿನ ಮೋಜು ಕಾರಂಜಿಗಳ ಕುಣಿತ. ಇದಕ್ಕಾಗಿಯೇ ರಚಿಸಿದ ರಂಗಮಂಚದಲ್ಲಿ ಅನೇಕ ಬಗೆ ಬಗೆಯ ಬಣ್ಣಗಳ ಕಾರಂಜಿಗಳ ವ್ಯವಸ್ಥೆ. ಒಂದು ಗುಂಡಿ ಒತ್ತುತ್ತಲೆ ಅವೆಲ್ಲ ಪುಟಿದು ಕುಣಿಯುತ್ತವೆ, ಹಾಡುತ್ತವೆ. ಅದೊಂದು ಕಂಡ ಕಣ್ಣು  ನಂಬದಂಥ ನೋಟ. ನೃತ್ಯ ಒಂದೇ ಬಗೆಯದಲ್ಲ; ದೇಶವಿದೇಶಗಳ ನೃತ್ಯಗಳೆಲ್ಲವನ್ನು ಕಾರಂಜಿಗಳು ಕುಣಿದು ತೋರಿಸುತ್ತವೆ. ಇದೊಂದು ಮಾಯಾಬಜಾರ.

ಇನ್ನೊಂದು ಅದ್ಭುತವನ್ನು ವಿವರಿಸಿ ವಿರಮಿಸಬಹುದು. ಗೋಲಗುಮ್ಮಟಕ್ಕಿಂತಲೂ ದೊಡ್ಡದಾದ ಒಂದು ಗಾಜಿನ ಗೋಲ, ಅದರ ತುಂಬ ನೀರು. ಅದರಲ್ಲಿ ಅಕ್ಟೋಪಸ್‌ದಂಥ ಭೀಕರ ಪ್ರಾಣಿಯಿಂದ ಚಲಿಸದಂತೆ ಹೊಳೆಯುವ ಮೀನುಗಳವರೆಗೆ ಎಲ್ಲ ತರದ ಸಮುದ್ರ ಜೀವಿಗಳು, ಅಲ್ಲಲ್ಲಿ ಹವಳದ ದ್ವೀಪಗಳು, ಹಸಿರು ಜೊಂಡುಗಳು. ಒಡೆದು ಮುಳುಗಿದ ನೌಕೆಗಳು. ಮಧ್ಯದಲ್ಲಿ ಕಡಲುಡಿಗೆಯನ್ನು ತೊಟ್ಟು ಈಜುತ್ತ ಒಂದೊಂದೇ ಪ್ರಾಣಿಯನ್ನು ಸುತ್ತು ನಿಂತು ನೋಡುವ ಜನರೆದುರಿಗೆ ತಂದು ತೋರಿಸುತ್ತ ಸೊಬಗು ಬೀರುವ ಸುಂದರಿ. ಆಚೆ ಸಾವಿರಾರು ಅಡಿ ಮೇಲೇರಿ ಒಟ್ಟು ನೋಟವನ್ನು ನೋಡುವ ಸೌಕರ್ಯ.

ಇನ್ನುಳಿದ ಇಳ ಅಕ್ವೆರಿಯಮ್ಮುಗಳಲ್ಲಿ ಡಾಲ್ಫಿನ್ (ಹಂದಿ ಮೀನು)ಗಳು ಒಂದರಲ್ಲಿದ್ದರೆ ನೂರಾರು ಜಾತಿಯ ಮೀನುಗಳು, ಆಮೆಗಳು ಇತರ ಜಲಚರ ಪ್ರಾಣಿಗಳು ಉಳಿದವುಗಳಲ್ಲಿ. 'ನೋಡು–ಮುಟ್ಟು–ತಿನ್ನಿಸು' ಎಂಬುದಲ್ಲಿ ಸೂತ್ರ. ಅವುಗಳನ್ನು ಜನ ನೋಡಿ ನಲಿಯುತ್ತಾರೆ, ಮುಟ್ಟಿ ಹಿಗ್ಗುತ್ತಾರೆ, ಅವುಗಳಿಗೆ ಏನಾದರೂ ತಿನ್ನಿಸಿ ಮೋದ ಪಡುತ್ತಾರೆ.

ಇವೆಲ್ಲವುಗಳನ್ನು ಆವರಿಸಿರುವ ಹಸಿರು ನೆಲ, ಹೂ ಗಿಡಗಳ ಹೂತ ಲತೆಗಳು, ಫಲಭರಿತ ವೃಕ್ಷಗಳು, ತರ ತರದ ಕಳ್ಳಿ ಬಳ್ಳಿಗಳು–ಎಲ್ಲ ಸೊಗಸು ನೋಡಿ ಹಿಂದಿರುಗುವಾಗ ಒಂದು ಸಮುದ್ರವೇ ನಮ್ಮ ತಲೆಗಳಲ್ಲಿ ಹೊಕ್ಕಿರುವಂಥ ಅನುಭವ!

# ವಾಲ್ಟ್ ಡಿಸ್ನಿ ಲೋಕ

ಅದ್ಭುತ ಕನಸುಗಾರ ವಾಲ್ಟ್ ಡಿಸ್ನಿಯ ಮೊದಲನೆಯ ಮಕ್ಕಳ ಮಾಯಾಬಜಾರವು ಪ್ರಾರಂಭವಾದುದು ಕ್ಯಾಲಿಫೋರ್ನಿಯಾ ರಾಜ್ಯದ ಆನ್‌ಹೀಮ್ ಎಂಬ ಸ್ಥಳದಲ್ಲಿ ೧೯೫೫ನೆಯ ಇಸ್ವಿಯಲ್ಲಿ. 'ತಂದೆ ತಾಯಿಗಳಿಗೂ ಮಕ್ಕಳಿಗೂ ಸಮಾನ ಸಂತೋಷವನ್ನು ನೀಡುವ ನೆಲೆ' ಅದಾಗಬೇಕೆಂಬುದು ವಾಲ್ಟ್ ಡಿಸ್ನಿಯ ಉದ್ದೇಶವಾಗಿತ್ತು. ಆ ಉದ್ದೇಶ ಈಡೇರಿ ಇದುವರೆಗೆ ವರ್ಷಕ್ಕೆ ಸುಮಾರು ಒಂದು ಕೋಟಿ ತಾಯ್ತಂದೆ ಮಕ್ಕಳು ಅದನ್ನು ನೋಡಿ ನಲಿಯುತ್ತ ಬಂದಿದ್ದಾರೆ. ಇದನ್ನು ನೋಡಿ ನಲಿದವರಲ್ಲಿ ರಾಜ ರಾಣಿಯರಿದ್ದಾರೆ, ರಾಷ್ಟ್ರಪತಿಗಳಿದ್ದಾರೆ, ಪ್ರಧಾನಿಗಳಿದ್ದಾರೆ, ದೇಶ ವಿದೇಶಗಳ ಮಕ್ಕಳಿದ್ದಾರೆ. ಮಕ್ಕಳ ಮನೋರಂಜನೆಯಲ್ಲಿ ಇದನ್ನು ಮೀರಿಸುವ ಇನ್ನೊಂದು ಸ್ಥಳವಿಲ್ಲವೆಂಬ ಖ್ಯಾತಿ ಇದರದಾಯಿತು.

ಇನ್ನೊಬ್ಬರು ವಾಲ್ಟ್ ಡಿಸ್ನಿಯವರನ್ನು ಮೀರಿಸದಿದ್ದರೂ ಅವರೇ ತಮ್ಮನ್ನು ತಾವೇ ಮೀರಿದರು. ವನ ಸರೋವರಗಳ ಸುಂದರ ರಾಜ್ಯವಾದ ಫ್ಲೋರಿಡಾದಲ್ಲಿ, ಓರ್ಲ್ಯಾಂಡೋ ನಗರದಿಂದ ೧೫ ಮೈಲುಗಳ ಅಂತರದಲ್ಲಿ ಅಕ್ಟೋಬರ್ ೧೯೭೧ರಲ್ಲಿ ಹೊಸ ಡಿಸ್ನಿ ಲೋಕ ಹುಟ್ಟಿತು; ಅವರ ಕನಸಿನ ಗೋಪುರಕ್ಕೆ ಕಳಸವಿಟ್ಟಿತು. ಇದು ವಾಲ್ಟ್ ಡಿಸ್ನಿಯವರ ನನಸಾದ ಕನಸಾದರೆ ಇದನ್ನು ನೋಡುವ ಕೋಟಿ ಕೋಟಿ ಜನರಿಗೂ ಇದು ನನಸಾದ ಕನಸೇ! ಅವರ ಕನಸಿನ ಲೋಕವೂ ಇಷ್ಟೊಂದು ವಿಸ್ಮಯಕಾರಿಯಾಗಿರಲಾರದು. ಮಾನವರು ತಮ್ಮ ಕನಸು ಕಲ್ಪನೆಗಳಲ್ಲಿಯೂ ಕಾಣಲಾಗದುದನ್ನು ವಾಸ್ತವಲೋಕವನ್ನಾಗಿ ಸೃಜಿಸಿದ ಘನತೆ ಈ ಧೀರನದು.



ಈ ಯಕ್ಷಿಣೀ ಲೋಕವನ್ನು ಸಮೀಪಿಸುತ್ತಿದ್ದಂತೆ ಮಾತು ಮೂರ್ಛಿತವಾಗುತ್ತದೆ. ಕಣ್ಣು ಕಾಣುವವರೆಗೂ ಕಾರುಗಳು, ತರತರದ ಕಾರುಗಳು, ಬಣ್ಣ ಬಣ್ಣದ ಕಾರುಗಳು. ಈ ಕಾರುಗಳ ಕಡಲಿನಲ್ಲಿ ನಿಮ್ಮ ಕಾರು ಬಿಟ್ಟು



ಹೊರಗೆ ಬರುವುದೇ ಒಂದು ಸಾಹಸ ಯಾತ್ರೆಯೆನಿಸುತ್ತದೆ. ಹೊರಗೆ ಬಂದಿರೋ ಮೋನೊ ರೇಲುಗಾಡಿಗಳು ನಿಮಗಾಗಿ ಕಾದಿರುತ್ತವೆ. ಬೆಡಗಿನ ಹುಡುಗಿಯರೇ ನಡೆಸುವ ಈ ಅಂದ ಚೆಂದಗಳ ಗಾಡಿಗಳಲ್ಲಿ ಕುಳಿತುಕೊಳ್ಳುವುದೇ ಒಂದು ಸೊಗಸು. ಡಿಸ್ನಿ ಲೋಕದ ಮಹಾದ್ವಾರದ ಮುಂದೆ ನಿಂತಾಗ ಮೂಕರಾಗುತ್ತೀರಿ. ಎಲ್ಲೆಲ್ಲಿಯ ಜನ, ಎಲ್ಲೆಲ್ಲಿಯ ಮಕ್ಕಳು ಅದೊಂದು ಸಂಕ್ಷಿಪ್ತ ಬ್ರಹ್ಮಾಂಡ.

ಒಳಗೆ ಏನೇನಿದೆಯೆಂಬುದನ್ನು ವಿವರಿಸಲು ಹತ್ತು ಹೊತ್ತಗೆಗಳು ಸಾಲವು. 'ಅಲ್ಲಿ ಏನೇನಿದೆ?' ಎಂಬ ಪ್ರಶ್ನೆಗೆ 'ಏನಿಲ್ಲ?' ಎಂಬ ಮರು ಪ್ರಶ್ನೆಯೇ ಉತ್ತರ! ನೂರಾರು ಟನ್ನುಗಳಷ್ಟು ಉಕ್ಕನ್ನು ಉಪಯೋಗಿಸಿ ಒಂದು ಮಹಾ ಮರವನ್ನು ಮಾಡಿದ್ದಾರೆ. ಅದರಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಆ ಮನೆಗಳಲ್ಲಿ ಎಲ್ಲ ಸೌಕರ್ಯಗಳಿವೆ. ಅಲ್ಲಿ ಇರಲಾಸೆಯೇ ನಿಮಗೆ? ಇದ್ದು ಬಿಡಿರಿ. ಅಲ್ಲಿ ವಾಸಮಾಡುತ್ತ ತಂತಿಗಳಿಗೆ ತೂಗು ಬಿದ್ದು ಓಡುವ ತೊಟ್ಟಿಲುಗಳಂತಹ ವಾಹನಗಳಲ್ಲಿ ಕುಳಿತು ಡಿಸ್ನಿ ಲೋಕದ ಆಶ್ಚರ್ಯಗಳನ್ನು ನೋಡಿರಿ. ತರತರದ ತಿಂಡಿ-ತಿನಿಸುಗಳ, ಪಾನಕ ಪೇಯಗಳ, ಮೋಜು ಮನರಂಜನೆಗಳ ಉಪಹಾರ ಗೃಹಗಳಲ್ಲಿ ನಿಮಗೆ ರುಚಿಸುವದನ್ನು ಭುಜಿಸಿ ಆನಂದಿಸಿರಿ.

ಮಿಕಿಮೌಸ್ ಥಿಯೇಟರಿಗೆ ಹೋಗಿ ಅಲ್ಲಿ ನಾನಾ ಪ್ರಕಾರಗಳ ಬೊಂಬೆಯಾಟಿಗೆಗಳನ್ನು, ವ್ಯಂಗ್ಯ ಚಿತ್ರಗಳನ್ನು, ವಿವಿಧ ವಿನೋದಾವಳಿಗಳನ್ನು ನೋಡಿರಿ. ಮಿಕಿಮೌಸನ ವಿಜೃಂಭಣೆಯ ಮೆರವಣಿಗೆಯಲ್ಲಿ ಪಾಲುಗೊಳ್ಳಿರಿ. ದೇಶ ವಿದೇಶಗಳ ವಾಸ್ತುಶಿಲ್ಪಗಳ ಮಾದರಿಗಳನ್ನು ನೋಡಿ ತಣಿಯಿರಿ. ಕೃತ್ರಿಮ ಜಲಪಾತಗಳನ್ನು ನೋಡಿ ಕುಣಿಯಿರಿ, ಜಗತ್ತಿನ ಎಲ್ಲ ಪ್ರಕಾರಗಳ ಮಕ್ಕಳ ಆಟಪಾಟಗಳಲ್ಲಿ ಸೇರಿ ಸಂತಸಗೊಳ್ಳಿರಿ. ಹೂವಿನಂಥ ಹೂಮಗುಗಳನ್ನು ನೋಡಿ ನಲಿಯಿರಿ. ಒಂದನ್ನು ನೋಡಲು ಮರೆಯಬೇಡಿರಿ. ಅದೇ–ಹಾಲ್ ಆಫ್ ಪ್ರೆಸಿಡೆಂಟ್ಸ್. (ಅಧ್ಯಕ್ಷರುಗಳ ಸಭಾಂಗಣ). ಅಲ್ಲಿ ಅಮೇರಿಕೆಯ ಇದುವರೆಗಿನ ಅಧ್ಯಕ್ಷರುಗಳ ಆಳೆತ್ತರದ ಪ್ರತಿಮೆಗಳನ್ನು ನೋಡುವಿರಿ. ಅವು ಜೀವಂತ ಪುತ್ಥಳಿಗಳು. ಅವರನ್ನು ನೋಡುತ್ತಿದ್ದಂತೆ ಅಮೇರಿಕೆಯ ಇತಿಹಾಸ ಪರಂಪರೆ, ಸಾಧನೆಗಳ ಚಿತ್ರ ನಿಮ್ಮ ಕಣ್ಮುಂದೆ ಸುಳಿಯುತ್ತದೆ. ಅಲ್ಲಿಗೆ ಬರುವ ಮಕ್ಕಳು ಇವುಗಳನ್ನು ನೋಡಿ ಅಮೇರಿಕೆಯ ಬಗ್ಗೆ ಅಭಿಮಾನ ತಾಳಿ ಹಿಂದಿರುಗುತ್ತಾರೆ. ನಮ್ಮ ದೇಶದಲ್ಲಿಯೂ ಇಂಥದೊಂದು ಸ್ಥಳ ಸೃಷ್ಟಿಗೊಳ್ಳಬಾರದೆ?

ಇಲ್ಲಿ ಏಳು ಸಾಹಸ ಯಾತ್ರೆಗಳನ್ನು ನೀವು ಕೈಕೊಳ್ಳಲೇಬೇಕು. ಭೂಮಿಯೊಳಗೆ ನಿರ್ಮಿತವಾದ ಜಲಮಾರ್ಗಗಳಲ್ಲಿ ಒಂದೊಂದು ಯಾತ್ರೆಯೂ ಒಂದೊಂದು ಅದ್ಭುತವನ್ನು ತೆರೆದು ತೋರಿಸುತ್ತವೆ ನಿಮಗೆ. ಮೊದಲನೆಯ ಜಲಮಾರ್ಗದಲ್ಲಿ ಇಳಿಯುತ್ತಲೇ ಆಚೆ ಈಚೆ ಎರಡು ಪ್ರಾಚೀನ ಕೋಟೆಗಳನ್ನು ಕಾಣುವಿರಿ. ನಿಮ್ಮನ್ನು ನೋಡುತ್ತಲೇ ಎರಡೂ ಕೋಟೆಗಳ ಕೃತಕ ಸೈನಿಕರು ಯುದ್ಧ ಪ್ರಾರಂಭಿಸುತ್ತಾರೆ. ಕೋವಿ ಫಿರಂಗಿಗಳೊಡನೆ, ಗುಂಡುಗಳು



ನಿಮ್ಮ ಎಡ ಬಲಗಳಲ್ಲಿಯೇ, ನಿಮ್ಮ ತಲೆಗಳ ಮೇಲೆಯೇ ಹಾರಿ ಹೋಗುತ್ತವೆ, ಹೆದರಬೇಡಿ, ನಿಮಗಾವ ಅಪಾಯವೂ ಇಲ್ಲ!

ಈ ಜಲಮಾರ್ಗದುದ್ದಕ್ಕೂ ನೀವು ನೋಡುವುದು ನಾನಾ ರೀತಿಯ ಯುದ್ಧಗಳನ್ನೇ!

ಆದಿಮಾನವನಿಂದ ಆಧುನಿಕ ಮಾನವನವರೆಗೆ ನಡೆಯುತ್ತ ಬಂದಿರುವ ಯುದ್ಧಗಳ ಎಲ್ಲ ಮಾದರಿಗಳನ್ನು ನೀವಿಲ್ಲಿ ನೋಡುವಿರಿ. ಬಿಲ್ಲು ಬಾಣಗಳ ಯುದ್ಧ, ಜಲ ಯುದ್ಧ, ಆಕಾಶ ಯುದ್ಧ, ಎಷ್ಟು ತರದ ಯುದ್ಧಗಳು! ಈ ಯಾತ್ರೆಯನ್ನು ಮುಗಿಸುವಷ್ಟರಲ್ಲಿ ಯುದ್ಧ ಪಂಡಿತರಾಗಿಯೇ ಹೊರ ಬರುವಿರಿ.

ಇನ್ನೊಂದು ಜಲಮಾರ್ಗದಲ್ಲಿ ಎಲ್ಲ ರಾಷ್ಟ್ರದ ಮಕ್ಕಳು ತಮ್ಮ ರಾಷ್ಟ್ರೀಯ ಪೋಷಾಕುಗಳಲ್ಲಿ, ತಮ್ಮ ರಾಷ್ಟ್ರಗೀತೆಗಳನ್ನು ಹಾಡುತ್ತ ನಿಮ್ಮನ್ನು ಸ್ವಾಗತಿಸುತ್ತಾರೆ. ಭರತ ಭೂಮಿಯಲ್ಲಿ ತಾಜಮಹಲು, ಅದರೆದುರು ಭಾರತದ ಮಕ್ಕಳು ದೇಶದ ರಾಷ್ಟ್ರೀಯ ಉಡುಪು ಧರಿಸಿ, ದೇಶದ ವಾದ್ಯಗಳನ್ನು ನುಡಿಸುತ್ತ, ನಮ್ಮ ರಾಷ್ಟ್ರಗೀತೆ ಹಾಡುತ್ತ ನಿಮ್ಮನ್ನು ಸ್ವಾಗತಿಸುವರು. ನಿಮಗೆ ನಮ್ಮ ರಾಷ್ಟ್ರಗೀತೆ ಬರುತ್ತದೆಯೋ? ಹಾಡಿರಿ ನೋಡೋಣ! 'ಅದಿನಾಯಕ' ಅಲ್ಲ,



'ಅಧಿನಾಯಕ' ಎನ್ನಿರಿ, 'ಬಾರತ ಬಾಗ್ಯವಿದಾತಾ' ಅಲ್ಲ, 'ಭಾರತ ಭಾಗ್ಯವಿಧಾತ' ಎನ್ನಿರಿ. ಹಾಂ ಈಗ ಸರಿಯಾಗಿ ಹಾಡಿದಿರಿ 'ಶಬಾಷ್'!

ಇನ್ನೊಂದು ಜಲಮಾರ್ಗದಲ್ಲಿ ಭೂತ ಪ್ರಪಂಚವನ್ನು ನೋಡುವಿರಿ. ನೋಡುವಾಗ ಮೈಯೊಳಗಿನ ರಕ್ತವೆಲ್ಲ ಹೆಪ್ಪುಗಟ್ಟಿದಂತಹ ಅನುಭವ! ಅಳ್ಳೆದೆಯವರಾದರೆ ಅಂಜಿಕೆಯಿಂದ ಎದೆಯೊಡೆದು ಹೋಗಬೇಕು ಅಂಥ ಭೀಕರವಾದ ನೋಟಗಳನ್ನಿಲ್ಲಿ ನೋಡುವಿರಿ. ಅರಣ್ಯಪ್ರಪಂಚ, ಗಿರಿಪ್ರಪಂಚ ಇತ್ಯಾದಿ, ಕಡಲ ಪ್ರಪಂಚ ಜಲಾಂತರ್ಗತ ನೌಕೆ (ಸಬ್ ಮೆರಿನ್)ಯಲ್ಲಿ ಕುಳಿತು ಹೊರಡುವಿರಿ. ಮೇಲೆ ನೀರು, ಕೆಳಗೆ ನೀರು, ಎಡಕ್ಕೆ ನೀರು, ಬಲಕ್ಕೆ ನೀರು! ಆ ನೀರಿನಲ್ಲಿ ಕಾಣುವವು ಜಲಚರ ಪ್ರಾಣಿಗಳು–ಚಿಕ್ಕ ದೊಡ್ಡ ಮೀನುಗಳು, ತಿಮಿಂಗಿಲಗಳು, ಆಕ್ಟೊಪಸ್‌ಗಳು, ಇನ್ನೂ ಏನೇನೋ! ಒಡೆದು ಮುಳುಗಿದ ಹಡಗುಗಳು, ಹಾಳುಬಿದ್ದ ನಗರಗಳು, ಹವಳದ ದ್ವೀಪಗಳು. ಅವುಗಳಲ್ಲಿ ಸಮುದ್ರ ಸರ್ಪಗಳು, ಸಿಂಪುಗಳು, ಶಂಖಗಳು ಏನೇನೋ! ಯಾತ್ರೆ ಮುಗಿಸಿದಾಗ ಸಮುದ್ರ ಗರ್ಭದ ಸೋಜಿಗಗಳನ್ನೆಲ್ಲ ಕಂಡ ತೃಪ್ತಿ! ಸಾಗರ ಗರ್ಭದಲ್ಲಿ ಸುಳಿದು ಬಂದ ಹೆಮ್ಮೆ!

ಈ ಎಲ್ಲ ಯಂತ್ರಗಳೂ, ಅಲ್ಲಿ ಕಾಣುವ ಎಲ್ಲ ದೃಶ್ಯಗಳೂ, ಜೀವಿಗಳೂ ಕಂಪ್ಯೂಟರ್ ನಿಯಂತ್ರಿತಗಳೆಂದು ಹೇಳಿದರೆ ನಿಮಗೆ ನಂಬಲು ಕಷ್ಟವಾಗುವುದಿಲ್ಲವೆ? ಸೋಜಿಗವೆನಿಸಿದರೂ ಸತ್ಯ ಸಂಗತಿಯಿದು, ಅಮೇರಿಕೆಯ ಬೆರಗುಗೊಳಿಸುವ ವೈಜ್ಞಾನಿಕ, ತಾಂತ್ರಿಕ ಪ್ರಗತಿಯ ಪ್ರತೀಕ ಈ ಡಿಸ್ನಿಲೋಕ. ಇಲ್ಲಿ ಮನೋರಂಜನೆ ಮುಖಾಂತರ ಹೊಸ ಜ್ಞಾನ ದೊರೆಯುತ್ತದೆ. ಹೊಸ ವಿಜ್ಞಾನ ದೊರೆಯುತ್ತದೆ. ಹೊಸ ತಾಂತ್ರಿಕ ಪರಿಜ್ಞಾನ ದೊರೆಯುತ್ತದೆ. ಎಷ್ಟು ಬರೆದರೂ ಮುಗಿಯದು ಈ ಲೋಕದ ವರ್ಣನೆ.

'ನಾಳಿನ ಲೋಕ' ಎಂಬುದೇ ಈ ವಿಭಾಗ. ಇಲ್ಲಿ ವಿದ್ಯೆ–ವಿಜ್ಞಾನಗಳ ಕ್ಷೇತ್ರದಲ್ಲಿ ಮಾನವ ಇದುವರೆಗೆ ಸಾಧಿಸಿದುದರ ಅರುಂಧತೀ ದರ್ಶನವಾಗುತ್ತದೆ. ಇಲ್ಲಿ ಯಾವಾಗಲೂ ಏನಾದರೊಂದು ಹೊಸ ಉಪಕ್ರಮ ನಡೆದೇ ಇರುತ್ತದೆ. ವಾಲ್ಟ್ ಡಿಸ್ನಿಯ ಘೋಷಣೆಯೇ ಇದು : 'ಇದು ಮಾನವನಲ್ಲಿ ಕಲ್ಪಶಕ್ತಿ ಉಳಿದಿರುವವರೆಗೂ ಹೊಸ ಹೊಸದನ್ನು ಹುಟ್ಟಿಸುತ್ತಲೇ ಹೋಗುವ ವಿಭಾಗ. ಎಂದೂ ಮುಗಿಯದ ವಿಭಾಗ!' ಹೌದು, ಮಾನವನಲ್ಲಿ ಹೊಸದನ್ನು ಹುಟ್ಟಿಸುವ ಶಕ್ತಿ ಇರುವವರೆಗೂ ಹೊಸದು ಹುಟ್ಟುತ್ತಲೇ ಇರುತ್ತದೆ.

# ಗ್ರ್ಯಾಂಡ್ ಕಾನ್ಯನ್



ಮಕ್ಕಳೆ, ಹಿಮಾಲಯವನ್ನು ನೀವು ನೋಡಿರುವಿರಾ? ಕನಿಷ್ಠ ದೂರದರ್ಶನದಲ್ಲಿ ಅದರ ಅದ್ಭುತ ದೃಶ್ಯಗಳನ್ನು ನೋಡಿರುವಿರಾ? ಕೊನೆಗೆ ಭಾರತದ ನಕ್ಷೆಯಲ್ಲಂತೂ ನೋಡಿರಲೇಬೇಕು. ಅದು ಪ್ರಪಂಚದ ಪರಮಾದ್ಭುತ.

ಅದನ್ನುಳಿದರೆ ಗ್ರ್ಯಾಂಡ್ ಕಾನ್ಯನ್ ನಿಸರ್ಗದ ಇನ್ನೊಂದು ಅದ್ಭುತ. ಇದನ್ನು ಹುಟ್ಟು ಹಾಕಿರುವುದು ಒಂದು ನದಿಯೆಂದು ಹೇಳಿದರೆ ನಿಮಗೆ ಆಶ್ಚರ್ಯವೆನಿಸಬಹುದಲ್ಲವೆ? ಸೋಜಿಗವೆನಿಸಿದರೂ ಸತ್ಯ ಸಂಗತಿ ಇದು. ಆ ನದಿ ಹೆಸರು ಕೊಲೋರೇಡೋ. ಇದು ವಿಸ್ತೀರ್ಣದಲ್ಲಿ ನಮ್ಮ ದೇಶದ ಮುಮ್ಮಡಿಯಷ್ಟಿರುವ ಅಮೇರಿಕಾ ದೇಶದಲ್ಲಿದೆ. ನೂರಕ್ಕೆ ಹನ್ನೆರಡರಷ್ಟು ಭಾಗವನ್ನು ತಟ್ಟುತ್ತದೆ. ಒಟ್ಟು ೧೪೦೦೦ ಮೈಲಿಗಳಿಗೂ ಮಿಕ್ಕಿ ಹರಿಯುತ್ತದೆ. ಇದು ಆರು ದಶಲಕ್ಷ ವರ್ಷಗಳಿಂದ ಇಲ್ಲಿ ನೆಲ ಕೊರೆಯುವ ಕಾರ್ಯವನ್ನು ಮಾಡುತ್ತ ಬಂದಿದ್ದು ೨೭೭ ಮೈಲು ಉದ್ದದ ರುದ್ರಕಮ್ಮರಿ ಗ್ರ್ಯಾಂಡ್‌ಕಾನ್ಯನ್ ನಿರ್ಮಿಸುವಲ್ಲಿ ಯಶಸ್ವಿಯಾಗಿದೆ. ಇದರ ಕಾರ್ಯ ಇನ್ನೂ ನಿಂತಿಲ್ಲವಂತೆ ವಿಜ್ಞಾನಿಗಳ ಹೇಳಿಕೆಯಿದು. ಇನ್ನು ಮುಂದೆ ಏನೇನು ಮಾಡಲಿದೆಯೋ, ಈಗ ಮಾಡಿದುದೇ ನೋಡಿದವರು ಬೆಕ್ಕಸ ಬೆರಗಾಗುವಷ್ಟು ರುದ್ರ ರಮಣೀಯವಾಗಿದೆ.



ಅಮೇರಿಕೆಯ ನಾಲ್ಕು ರಾಜ್ಯಗಳ ೧೩೦೦೦೦ ಚದುರ ಮೈಲಿನಷ್ಟು ಕ್ಷೇತ್ರವನ್ನು ಕೊಲೋರೇಡೋ ಪ್ರಸ್ಥಭೂಮಿಯು ಭ್ರಮಾ ಭೂಮಿ (Fantasy land) ಎಂದೇ ಪ್ರಸಿದ್ಧವಾಗಿದೆ. ಇದರಲ್ಲಿ ಕೈಬಾಬ್ ಪ್ರಸ್ಥಭೂಮಿಯನ್ನು ಕೊರೆದು ಕೊರೆದು ಕೊಲೋರೇಡೋ ನದಿ ಈ ಅದ್ಭುತ ರಮ್ಯ ಕಮ್ಮರಿಯನ್ನು ನಿರ್ಮಿಸಿದೆ. ಇದರ ಆಳ ಸರಾಸರಿ ಒಂದು ಮೈಲಿ, ಅಗಲ ಹದಿನೆಂಟು ಮೈಲಿಗಳವರೆಗೆ; ಉದ್ದ ಈಗಾಗಲೇ ವಿವರಿಸಿದಂತೆ ೨೭೭ ಮೈಲಿಗಳು; ಕ್ಷೇತ್ರ ವಿಸ್ತೀರ್ಣ ೧೯೦೦ ಮೈಲಿಗಳು, ಗ್ಲೆನ್ ಕಾನ್ಯನ್ ಜಲಾಶಯವನ್ನು ಕಟ್ಟುವುದಕ್ಕೆ ಮೊದಲು ಇದು ಕ್ಯಾಲಿಫೋರ್ನಿಯಾ ಕೊಲ್ಲಿಗೆ ಸಾಗಿಸುತ್ತಿದ್ದ ಮರಳು ಮಣ್ಣು ದಿನಕ್ಕೆ ೫ ಲಕ್ಷ ಟನ್ನುಗಳು!

ಗ್ರ್ಯಾಂಡ್ ಕಾನ್ಯನ್ ಎಲ್ಲ ಋತುಗಳಲ್ಲಿ ನೋಡಲು, ದಿನವೊಂದರಲ್ಲಿಯೇ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಿಂತು ನೋಡಲು ವರ್ಷಗಳೇ ಬೇಕಾಗಬಹುದು. ಅದೊಂದು ನಿಸರ್ಗದ ರಸಲೀಲಾರಂಗ. ಕ್ಷಣ ಕ್ಷಣಕ್ಕೂ ಹೊಸದಾಗಿ ತೋರುವುದೇ ರಮಣೀಯತೆಯ ರೂಪವೆಂದು ಹೇಳುತ್ತಾರೆ. ಅಂಥ ರಮಣೀಯತೆ ಇಲ್ಲಿ ಹೆಜ್ಜೆ ಹೆಜ್ಜೆಗೂ ಸೂರೆಯಾಗಿದೆ. ನೋಡ ನೋಡುತ್ತಿದ್ದಂತೆ ಅದರ ರೂಪ ಬದಲಾಗುತ್ತದೆ. ಮುಂಜಾನೆ ಸಂಜೆಯ ಇಂದ್ರಜಾಲವಂತೂ ಸರಿಯೆ. ಉಳಿದ ಸಮಯಗಳಲ್ಲಿಯೂ ಏನದರ ಗಾಡಿ! ಏನದರ ಮೋಡಿ! ಎಂಥ ಭವ್ಯತೆ!

ಆಚೆ ಈಚೆಯ ದಡದ ಕಲ್ಲಿನ ಬಣ್ಣಗಳು ತರತರ; ಅಲ್ಲಿ ಸಹಜವಾಗಿ ಮೂಡಿರುವ ಆಕಾರಗಳು ತರತರ; ನದಿಯ ಅಂಕು ಡೊಂಕುಗಳಿಗೆ ಅನುಗುಣವಾಗಿ ಕಮ್ಮರಿ ತಳೆದ ಅಂಕು ಡೊಂಕುಗಳು ತರತರ; ಸೂರ್ಯಪ್ರಕಾಶದ ಏರಿಳಿತಗಳಿಗೆ ತಕ್ಕಂತೆ ಕಮ್ಮರಿಯ ನೋಟಗಳು ತರತರ; ತೀರದ ತರುಲತೆಗಳು, ಅವುಗಳ ಹೂವು ಕಾಯಿಗಳು ತರತರ! ಏನೆಲ್ಲ ಆಕಾರಗಳು ರೂಪುಗೊಂಡಿವೆ ಅಲ್ಲಿ! ನಮ್ಮ ತ್ರಿಮೂರ್ತಿಗಳು ಅಲ್ಲಿದ್ದಾರೆ; ಅಪ್ಸರೆಯರೂ ಅಲ್ಲಿದ್ದಾರೆ. ರಾಕ್ಷಸಾಕೃತಿಯವರೂ ಅಲ್ಲಿದ್ದಾರೆ; ಸರ್ಪಾಕೃತಿಗಳೂ ಅಲ್ಲಿವೆ. ಪಶು ಪಕ್ಷಿಗಳು ಸಸ್ಯ ವೃಕ್ಷಗಳ ಮಾದರಿಗಳೂ ಅಲ್ಲಿವೆ. ಅಲ್ಲಿ ಏನಿದೆ, ಏನಿಲ್ಲ?

ಲೋಕ ಸ್ವೀಕರಿಸಿರುವ ಏಳು ಹವಾಗುಣ ವಲಯಗಳಲ್ಲಿ ಆರು ಅಲ್ಲಿ ಬೀಡುಬಿಟ್ಟಿವೆ! ಎಪ್ಪತ್ತು ಬಗೆಯ ಸಸ್ತನಿಗಳು, ಇನ್ನೂರ ಐವತ್ತು ತರದ ಪಕ್ಷಿಗಳು, ಇಪ್ಪತ್ತೈದು ವಿವಿಧ ಸರೀಸೃಪಗಳು, ಐದು ಜಾತಿಯ ಉಭಯ ಜೀವಿಗಳು, ಐದು ಪಂಗಡಗಳ ಕೆಂಪು ಹಿಂದೀಯರು ಅದರ ಇಕ್ಕೆಲಗಳಲ್ಲಿ ನೆಲೆಸಿದ್ದಾರೆ. ಕಮ್ಮರಿಯ ಶಿಲಾ ಪದರುಗಳೇ ಇಪ್ಪತ್ತೊಂದು ಬಗೆಯವು. ಒಂದೊಂದಕ್ಕೂ ಒಂದೊಂದು ಚೆಲುವು. ಅವು ಒಂದರೊಳಗೊಂದು ಸೇರಿ ಬಗೆಬಗೆಯ ಬಣ್ಣದ ಕಲ್ಲಿನ ಕಸೂತಿ ಕೆಲಸವಾಗಿ ಕಂಗೊಳಿಸಿದಾಗ ತಳೆಯುವ ಚೆಲುವಂತೂ ಎಣೆಯಿಲ್ಲದುದು.

೧೯೦೮ರಲ್ಲಿ ಅಮೇರಿಕೆಯ ರಾಷ್ಟ್ರೀಯ ಸ್ಮಾರಕವಾಗಿ ಮಾರ್ಪಟ್ಟ ಗ್ರ್ಯಾಂಡ್ ಕಾನ್ಯನ್ ೧೯೧೯ರಲ್ಲಿ ರಾಷ್ಟ್ರೀಯ ಉದ್ಯಾನವಾಗಿಯೂ ಪರಿವರ್ತಿತವಾಗಲು ಸುವರ್ಣಕ್ಕೆ ಸುಗಂಧ ಸೇರಿದಂತಾಯಿತು. ಗಿರಿ–ಕಮ್ಮರಿ–ವನ–ಉದ್ಯಾನಗಳ ಈ ಅಪೂರ್ವ ಸಮ್ಮಿಲನ ಅದನ್ನು ರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸಿತು. ಅದರ ಬೆಳವಣಿಗೆ ಭರದಿಂದ ಸಾಗಿತು. ಬೆಳೆಯಿತು, ಬೆಳೆಯಿತು, ಬೆಳೆದೇ ಬೆಳೆಯಿತು! ಈಗಂತೂ ವರ್ಷಕ್ಕೆ ಒಂದು ಕೋಟಿ ಜನ ಇದನ್ನು ನೋಡಲು ಬರುತ್ತಾರೆ; ನೋಡಿ ರೋಮಾಂಚನಗಳ ಬೆಳೆಯನ್ನು ಒಕ್ಕಿಕೊಂಡು ಹಿಂದಿರುಗುತ್ತಾರೆ. ಇಷ್ಟು ಜನರಿಗೂ ಸಾಕಾಗುವಷ್ಟು ಊಟ, ವಸತಿ, ವಾಹನ, ವಿಹಾರ ಸೌಕರ್ಯಗಳು ಸೃಷ್ಟಿಯಾಗಿವೆ ಅಲ್ಲಿ. ಉಚಿತ ಲಲಿತ ವಾಹನಗಳು, ಮಾರ್ಗದರ್ಶಕ ನಕ್ಷೆ–ಪುಸ್ತಿಕೆಗಳು, ನಾಟಕ, ನೃತ್ಯ, ಸಂಗೀತ ಇತ್ಯಾದಿ ಮನೋರಂಜನೆ ಕಾರ್ಯಕ್ರಮಗಳು, ಈಜುಗೊಳಗಳು, ದೂರದರ್ಶನ ಕೇಂದ್ರಗಳು–ಇಂದಿನ ವಿಜ್ಞಾನ ತಂತ್ರಜ್ಞಾನಗಳು ಏನೇನನ್ನು ಒದಗಿಸಬಹುದೋ ಆ ಎಲ್ಲವೂ ಅಲ್ಲಿವೆ. ಇವೆಲ್ಲವುಗಳಿಗೆ ಕಲಶಪ್ರಾಯವಾಗಿ ಕೊಂಚವೂ ಲೋಪಕ್ಕೆಡೆಗುಡದ ಸುವ್ಯವಸ್ಥೆ. ನಗೆಮೊಗದ ಸೇವೆಗಳು, ಆದರೋಪಚಾರಗಳು, ಗಡಿಯಾರದಂತೆ ಸಮಯ ನಿಷ್ಠೆಯಿಂದ ಸಾಗುವ ಕಾರ್ಯ ಕಲಾಪಗಳು, ಸ್ವಚ್ಛತೆ, ಶಾಂತಿ, ಸೌಜನ್ಯಗಳು ಬಂದ ವಿಹಾರಿಗಳಿಗೆ ನಂದನದ ಆನಂದವನ್ನೇ ನೀಡುತ್ತವೆ. ಒಮ್ಮೆ ಅಲ್ಲಿಗೆ ಹೋದವರು ಮತ್ತೆ ಮತ್ತೆ ಅಲ್ಲಿಗೆ ಹೋಗಲು ಹಂಬಲಿಸುವಂತೆ ಮಾಡುತ್ತವೆ.

# ಲೂರೇ ಗುಹೆಗಳು



ಪಶ್ಚಿಮ ಅಮೇರಿಕೆ ಯಲ್ಲಿ ಕಮ್ರಿಗಳು ಸಮೃದ್ಧವಾಗಿರುವಂತೆ ಪೂರ್ವ ಅಮೇರಿಕೆಯಲ್ಲಿ ನಿಸರ್ಗ ನಿರ್ಮಿತ ಗುಹೆಗಳು ಹೇರಳ ವಾಗಿವೆ. ಇವು ಮೂರು ರೀತಿಯಲ್ಲಿ ರೂಪಿತ ವಾಗುತ್ತವೆ. ಸಮುದ್ರದ ಪೆರ್ದೆರೆಗಳು ಕಡಲ ದಡಗಳಿಗೆ ಅಪ್ಪಳಿಸಿ ಉಂಟಾಗುವ ಗುಹೆಗಳು

ಒಂದು ರೀತಿಯಾದರೆ; ಜ್ವಾಲಾಮುಖಿಗಳು ಚಿಮ್ಮುವ ಲಾವಾರಸ ದಿಂದ ಮೈದಾಳುವ ಗುಹೆಗಳು ಇನ್ನೊಂದು ರೀತಿಯವು. ಮೂರನೆಯ ರೀತಿಯ ಗುಹೆಗಳಂತೂ ಅತ್ಯಂತ ಆಶ್ಚರ್ಯಕರ ವಾದುವುಗಳು. ಸುಣ್ಣದ ಕಲ್ಲಿನ ಬೆಟ್ಟಗಳಲ್ಲಿ ಈ ಮೂರನೆಯ ರೀತಿಯ ಗುಹೆಗಳನ್ನು ಕಂಡು ಹಿಡಿಯಲಾಗಿದೆ.

ಇವು ಉಂಟಾದ ಪರಿಯೇ ಬೆರಗುಗೊಳಿಸುವಂಥದು. ಭೂಮಿಯ ಮೇಲೆ ಬಿದ್ದ ನೀರು ಭೂಮಿಯ ಬಿರುಕುಗಳ ಮೂಲಕ ಜಿನುಗುತ್ತದೆ. ಹಾಗೆ ಜಿನುಗಿದಾಗ ಅಂಗಾರಾಮ್ಲ ದ್ರಾವಕವು ಸುಣ್ಣದ ಕಲ್ಲುಗಳ ಅಂಶವನ್ನು ಅರಗಿಸಿಕೊಂಡು ಕೆಳಗೆ ಹರಿದುಹೋಗುತ್ತದೆ. ಈ ರೀತಿ ಸುಣ್ಣದ ಬೆಟ್ಟದಲ್ಲಿ ಸುರಂಗಗಳು ಒಡಮೂಡುತ್ತವೆ. ಕಾಲಕ್ರಮದಲ್ಲಿ ಈ ಸುರಂಗಗಳು ವಿಶಾಲವಾಗಿ ಗುಹೆಗಳಾಗಿ ಮಾರ್ಪಡುತ್ತದೆ. ಅಲ್ಲಿ ಆಕಾರಗಳು ಮೂಡತೊಡಗುತ್ತವೆ. ಕಂಬಗಳಂತೆ, ತೆರೆಗಳಂತೆ, ಜಾಲರಿಗಳಂತೆ, ಮರಬಳ್ಳಿಗಳಂತೆ, ಮನುಷ್ಯರಂತೆ ತೋರುವ ಈ ಆಕಾರಗಳು ಬಿಳಿ, ಗುಲಾಬಿ, ನೀಲಿ, ಹಸಿರು ಮೊದಲಾದ ಬಣ್ಣಗಳನ್ನು ತಳೆದು ಮಾಯಾಲೋಕವನ್ನೇ ಸೃಷ್ಟಿಸಿಬಿಡುತ್ತವೆ.

ಇಂಥದೊಂದು ಮಾಯಾಲೋಕ ಸಾರ್ವಜನಿಕ ರಾಜ್ಯದ ವ್ಹರ್ಜಿನಿಯಾ ರಾಜ್ಯದ ಬ್ಲ್ಯೂರಿಜ್ (Blue Ridge) ಪರ್ವತಾವಳಿಯ ಕಣಿವೆಯ ಲೂರೇ ಗುಹೆಗಳಲ್ಲಿ ಮೈವೆತ್ತು ನಿಂತಿದೆ. ಸುತ್ತಲೂ ಸೂರೆಯಾಗಿರುವ ಸೃಷ್ಟಿ ಸೌಂದರ್ಯದ ಮಧ್ಯದಲ್ಲಿ ಮೇಲ್ನೋಟಕ್ಕೆ ಸಾಧಾರಣವಾಗಿ ಕಂಡು ಒಳಗಿಳಿದು ಸುತ್ತಿದಂತೆ ಅದ್ಭುತ ರಮ್ಯವಾಗಿ ತೋರುವ ಈ ಗುಹೆಗಳು ವಿಸ್ತಾರದಲ್ಲಿ, ಚಿತ್ರವೈಚಿತ್ರ್ಯಗಳಲ್ಲಿ, ರೂಪವೈವಿಧ್ಯದಲ್ಲಿ ಒಟ್ಟಂದದಲ್ಲಿ ಅನುಪಮವಾಗಿವೆ. ಒಳಗೆ ಪ್ರವೇಶಿಸುತ್ತಲೇ ಒಳ ಹಜಾರದ ಹರಹು ಶಿಲ್ಪಶ್ರೀ ಹಾಗೂ ಸುಕುಮಾರಾಕೃತಿಗಳು ನಮ್ಮನ್ನು ದಂಗುಗೊಳಿಸುತ್ತವೆ. ಮುಂದೆ ಮುಂದೆ ಸಾಗಿದಂತೆ ವಾಷಿಂಗ್‌ಟನ್‌ನ ಸ್ತಂಭ, ಹೂದೋಟ, ನಾಟಕರಂಗ, ಕೆಸರಿನ ತೊರೆಯ ಮೇಲಿನ ನೈಸರ್ಗಿಕ ಸೇತುವೆ, ಮೀನಿನ ಮಾರುಕಟ್ಟೆ, ಸ್ಫಟಿಕ ಕಾರಂಜಿ, ಪ್ರೇತ, ಒಬೆಗಾನನ ಕೃತಕ ಗುಹೆ, ಟೈಟಾನಿಯಾಳ ಜನನಿಕೆ, ಸಾರೆನವನ ಡೇರೆ, ಆರ್ಗನ್ ವಾದ್ಯ, ಸಿಂಹಾಸನ ಗೊಂದಲ ಗೋಪುರ, ಚಕ್ರವರ್ತಿನಿಯ ಸ್ತಂಭ, ಎಬ್ಲಿನ್ನಿನ ಸಭಾಂಗಣ, ಜೋಡಿ ಕಂಬಗಳು, ನೀರ್ ಬೀಳು ಬುಗ್ಗೆ, ಡ್ರೇಗನ್ ರಾಣಿಯ ಕಂಠವಸ್ತ್ರ, ತೊಯ್ದ ಕಂಬಳಿ, ಚಾಪಮನ್ನನ ಕೆರೆ, ಷಾಹೀ ಬುಗ್ಗೆ, ಪಂಜರು ಅವಳಿ ಕೆರೆಗಳು ಎಲ್ಲ ಜಿನುಗುವ ನೀರು ಸುಣ್ಣದ ಬೆಟ್ಟದಲ್ಲಿ ಸಾವಿರಾರು ವರ್ಷಗಳ

ಸುದೀರ್ಘ ಕಾಲದಲ್ಲಿ ಕಂಡರಿಸಿದ, ಕುಸುರಿಸಿದ ಕಲಾಕೃತಿಗಳು ಬೆರಗಿನಿಂದ ನಿಬ್ಬೆರಗಿಗೆ ಕರೆದೊಯ್ಯುತ್ತವೆ ನೋಡುವವರನ್ನು!

ಮೇಲಿನಿಂದ ಜೋಲುಬಿದ್ದ ಕಲ್ಲಿನ ಬಿಳಿಲುಗಳು, ಬಳ್ಳಿಗಳು, ಜಾಲರಿಗಳು ಕೆಳಗಣ ನಿಜ ನೀರಿನ ಕೆರೆಯಲ್ಲಿ ಪ್ರತಿಬಿಂಬಿಸಿದಾಗ ತೋರು ನೋಟ ರಸದೂಟ. ಜಗತ್ತಿನಲ್ಲಿಯೇ ಅನನ್ಯವಾದ ನಿಸರ್ಗನಿರ್ಮಿತ ವಾದ್ಯ ಶಾಲೆಯಲ್ಲಿ ವಿದ್ಯುತ್ತಿನ ಗುಂಡಿಯೊಂದನ್ನು ಒತ್ತಿದಾಗ ನವಿರೇಳಿಸುವ ಸ್ವರಸಮ್ಮೇಳನವನ್ನು ಅಲ್ಲಿಯೇ ಕೇಳಿ ಆನಂದಿಸಬೇಕು. ಭೂಮಿಯ ಹೊಟ್ಟೆಯಲ್ಲಿಯೇ ನೃತ್ಯಭವನವೊಂದನ್ನು ನೋಡಿದಾಗ ಕುಣಿಯದವರಿಗೂ ಕುಣಿಯಬೇಕೆನ್ನಿಸಿದರೆ ಅಚ್ಚರಿಯೇನು? ಅಲ್ಲಿಯೂ ಒಂದು ಬಯಕೆ ಈಡೇರಿಸುವ ಬಾವಿ! ಬಂದವರಲ್ಲಿ ಭಾವುಕರಾದವರಿದ್ದರೆ ಆ ಬಾವಿಯಲ್ಲೊಂದು ಪೆನ್ನಿಯನ್ನು ಹಾಕಿ ತಮ್ಮ ಬಯಕೆಯನ್ನು ಈಡೇರಿಸಲು ಬೇಡಿಕೊಳ್ಳುತ್ತಾರೆ. ನಂಬಿಕೆ ಕುರುಡಾದರೂ ಆ ಗುಹೆಗಳಿಗೇಕೆ, ಪಾತಾಳಕ್ಕೂ ಹೋಗಬಹುದಲ್ಲವೆ? ಅದು ನೋಡಿ ಮೀನಿನ–ಮಂಡಿ! ಮೀನು ತಿನ್ನುವವರು ಅದರ ಮುಂದೆ ನಿಂತಾಗ ಅಲ್ಲಿರುವುವು ನಿಜವಾದ ಮೀನುಗಳೆಂದೇ ಭ್ರಮಿಸಿ ಬಾಯಿ ಚಪ್ಪರಿಸಬಹುದಾಗಿದೆ. ಒಂದೆಡೆಗೆ ಎರಡು ಹುರಿದ ತತ್ತಿ (ಮೊಟ್ಟೆ)ಗಳನ್ನಿರಿಸಿದ್ದಾರೆ ನಿಸರ್ಗಮಾತೆ. ಮನೆಯಲ್ಲಿ ಹುರಿದ ಮೊಟ್ಟೆಗಳಿಗೂ ಅಲ್ಲಿರುವ ಕಲ್ಲಿನ ಮೊಟ್ಟೆಗಳಿಗೂ ಭೇದವನ್ನೇ ಕಾಣದೆ ಕೈಯಿಟ್ಟು ನೋಡಿ ಕಲ್ಲಿನವೆಂದು ಖಾತರಿ ಮಾಡಿಕೊಳ್ಳುವವರುಂಟು. ಬಾಲಕ ಬಾಲಿಕೆಯರಂತೂ ಭ್ರಮಿಸಿಯೇ ತೀರುತ್ತಾರೆ. ಅಲ್ಲೊಂದು ಚಿತ್ರ ಚಿತ್ತಾರದ ಜೋಡಿಕಂಬ. ಅದನ್ನು ನೋಡುತ್ತ ಪುರಾಣೇತಿಹಾಸಗಳಲ್ಲಿ ಪ್ರಸಿದ್ಧವಾಗಿರುವ ಪ್ರಣಯಿಗಳನ್ನು ಸ್ಮರಿಸಿ ನೆಟ್ಟ ಕಾಲು ನೆಟ್ಟ ನೋಟವಾಗಿ ನಿಲ್ಲುವವರೂ ಉಂಟು.

ಅಂತೂ ಸಾವಿರಾರು ಎಕರೆಗಳಷ್ಟು ವಿಸ್ತೀರ್ಣವನ್ನು ಆಕ್ರಮಿಸಿ ಹೊರಗಿಂದ ಬರುವವರನ್ನು ಅಣಕಿಸುತ್ತ ನಿಂತಿರುವ ಈ ಗುಹೆಗಳು ಇನ್ನೂ ಹೊಸ ಆಕಾರಗಳನ್ನು ಹುಟ್ಟುಹಾಕುತ್ತ, ಹೊಸ ಚಿತ್ರ ವಿಚಿತ್ರಗಳನ್ನು ಬರೆಯುತ್ತ, ಹೊಸ ಆಕರ್ಷಣೆಗಳನ್ನು ಸೃಜಿಸುತ್ತ ಮೆರೆಯುತ್ತಿವೆ. ಇವುಗಳನ್ನು ನೋಡಿ ಹೊರಗೆ ಬಂದಾಗ ಯಕ್ಷಿಣೀ ಲೋಕವೊಂದರಿಂದ ಹೊರಗೆ ಬಂದ ಹಾಗೆನಿಸುತ್ತದೆ. ಕಣ್ಣು ತುಂಬ ಆ ಚಿತ್ರ ವಿಚಿತ್ರ ಆಕೃತಿಗಳೇ! ಮನಸ್ಸಿನ ತುಂಬ ಮಧುರ ಸ್ಮೃತಿಗಳೇ!

# ಬಹುದೊಡ್ಡ ವಿಜ್ಞಾನ–ವ್ಯೂಹ

ಜಗತ್ತಿನಲ್ಲಿ ನಿಸರ್ಗ ನಿರ್ಮಿತ ಅದ್ಭುತಗಳು ಇವೆ. ಮಾನವ–ನಿರ್ಮಿತ ಅದ್ಭುತಗಳೂ ಇವೆ. ಇಂಥ ಮಾನವ–ನಿರ್ಮಿತ ಅದ್ಭುತಗಳಲ್ಲಿ ಮೆಕ್ಸಿಕೋ ರಾಜ್ಯದಲ್ಲಿ ಸೋಕೋರೋದ ಬಳಿ ಇರುವ ವ್ಹೆರೀ ಲಾರ್ಜ ಅರೇ (ಬಹುದೊಡ್ಡ ವಿಜ್ಞಾನ ವ್ಯೂಹ) ಒಂದಾಗಿದೆ. ಇದು ಇಂದಿನ ಖಗೋಲ ವಿಜ್ಞಾನದ ತ್ರಿವಿಕ್ರಮ ಹೆಜ್ಜೆಯಾಗಿರುವಂತೆ ಮಾನವನ ವಿಜಿಗೀಷುಮತಿಯ ಪತಾಕೆಯೂ ಆಗಿದೆಯೆನ್ನಬಹುದು. ಇಲ್ಲಿ ಉಪಯೋಗಿಸಿರುವ ಶಬ್ದಗಳು ಸ್ವಲ್ಪ ಕಠಿಣವೆನಿಸಿದರೂ ಮಕ್ಕಳಿವನ್ನು ಕಲಿತುಕೊಳ್ಳುವದು ಕ್ಷೇಮ.

೧೯೭೨ರಲ್ಲಿ ಮಂಜೂರಾದ ಈ ಯೋಜನೆ ಪೂರ್ಣವಾದದ್ದು ೧೯೮೧ರಲ್ಲಿ. ತಗುಲಿದ ವೆಚ್ಚ ೭೮೭ ಕೋಟಿ ಡಾಲರುಗಳು. ಕಳೆದ ಐದಾರು ವರ್ಷಗಳಲ್ಲಿಯೇ ಈ ಕೇಂದ್ರ





ಖಗೋಲ ವಿಜ್ಞಾನ ಪ್ರಪಂಚಕ್ಕೆ ನೀಡಿರುವ ಕಾಣಿಕೆ ಬಹು ದೊಡ್ಡದು. ಅನೇಕ ಎಂಟೆನ್ನಾಗಳನ್ನೂ, ಅತಿಸೂಕ್ಷ್ಮ ಎಲೆಕ್ಟ್ರಾನಿಕ್ ಉಪಕರಣಗಳನ್ನೂ ಗಣಕಯಂತ್ರ ಪದ್ಧತಿಗಳನ್ನೂ ಹೊಂದಿದೆ ಈ ಕೇಂದ್ರ. ಹಾಲು ಹಾದಿಯಲ್ಲಿರುವ ರೇಡಿಯೋ ನಕ್ಷತ್ರಗಳ, ಹೊಸ ನಕ್ಷತ್ರಗಳ ಹುಟ್ಟಿಗೆ ಹೊಟ್ಟೆಯೆನಿಸಿದ ಅನಿಲ (Gas) ಮೇಘಗಳ ಸೂಪರ್ ನೋವಾದಿಂದ ತೀರಿ ಹೋಗುವ ತಾರೆಗಳು ಸೃಷ್ಟಿಸುವ ರೇಡಿಯೋ ಸಂಶೋಧನೆ ಈ ಕೇಂದ್ರದ ಕಾರ್ಯ. ಇದು ಸಂಪರ್ಕಿಸುವ ಅತಿ ದೂರದ ಗೋಲ ಅದರಿಂದ ೬೦೦೦೦೦೦೦೦೦೦೦೦೦೦೦೦೦೦೦೦೦ ಮೈಲಿಗಳಾಚೆ ಇದೆಯಂತೆ. ಅದನ್ನು ಆರರ ಮುಂದೆ ಇಪ್ಪತ್ತೊಂದು ಸೊನ್ನೆಯೆಂದು ಕರೆಯಬಹುದಾಗಲಿ ಇದಕ್ಕೆ ಹೆಸರೊಂದನ್ನು ಸಂಖ್ಯಾಶಾಸ್ತ್ರದಲ್ಲಿ ಹುಡುಕುವದು ಕಷ್ಟದ ಕೆಲಸ. ಬೆಳಕಿನ ವರ್ಷಗಳಲ್ಲಿ ಹೇಳುವುದಾದರೆ ನೂರಕ್ಕೂ ಹೆಚ್ಚು ಬೆಳಕಿನ ವರ್ಷಗಳಾಗಬಹುದೇನೋ? ಅಲ್ಲಿಯವರೆಗೂ ಚಾಚಿದೆ ಈ ಕೇಂದ್ರದ ಸಂಶೋಧನೆ.

ಮೇಲ್ಕಾಣಿಸಿದ ಸಂಖ್ಯೆಯೇ ಸರಿಯಿಲ್ಲವೊ ಇಲ್ಲವೆ 'ಸಂಪರ್ಕ' ಶಬ್ದದ ಅರ್ಥ ಸಂದಿಗ್ಧವೋ ತಿಳಿಯದು. ಯಾಕೆಂದರೆ ನಮ್ಮ ತೇಜೋಮಂಡಲದ ತುದಿಗಿರುವ M31

ಎಂಬ ಗೋಲ ೧೫೦೦೦ ಬೆಳಕಿನ ವರ್ಷಗಳಾಚೆ ಇದೆಯೆಂದು ಹೇಳುತ್ತಾರೆ. ನೂರು ಬೆಳಕಿನ ವರ್ಷಗಳಾಚೆಯನ್ನು ಸಂಪರ್ಕಿಸಿದ್ದರೂ ಸಣ್ಣ ಸಾಧನೆಯೇನಲ್ಲ. ಆದರೆ ವಿಶ್ವದ ಅನಂತ ಅಗಣಿತ ವಿಸ್ತಾರವನ್ನು ಗಮನಿಸಿದಾಗ ಇದೊಂದು ಮಕ್ಕಳಾಟಿಕೆಯೇ ಸರಿ. ಹನ್ನೊಂದು ಬಿಲಿಯನ್ ಬೆಳಕಿನ ವರ್ಷಗಳಾಚೆ ಹೋದಾಗಲೂ ಅಲ್ಲಿಯ ಅಸಂಖ್ಯ ಗ್ಯಾಲಕ್ಸಿ (ಆಕಾಶಗಂಗೆ)ಗಳು ಗೋಚರಿಸುವಂತೆ ಅವೆಲ್ಲವನ್ನೂ ಸಂಶೋಧಿಸಿಯೆ ತೀರುವೆವೆಂದು ವಿಜ್ಞಾನಿಗಳು ಹೇಳಲಾರರು.

ಎಂದ ಮೇಲೆ ಈಗ ನಡೆಸಿರುವ ಈ ದುಬಾರಿ ಸಂಶೋಧನೆಗಳು ಯಾವ ಪುರುಷಾರ್ಥಕ್ಕೆಂದು ಯಾರಾದರೂ ಕೇಳಬಹುದಾಗಿದೆ. ಆದರೆ ಹೀಗೆಂದು ಸಂಶೋಧನೆಗೇ ಎಳ್ಳು ನೀರು ಬಿಡಲಿಕ್ಕಾಗುವದೆ? ಈ ದಿಶೆಯಲ್ಲಿ ಕಳೆದ ಅರ್ಧ ಶತಮಾನದಲ್ಲಿ ಆಗಿರುವ ಸಂಶೋಧನೆ ಮುಂದಿನ ಸಂಶೋಧನೆಗೆ ಮೀಟುಗೋಲು. ಸಂಶೋಧನೆಯು ಕೊನೆ ಮುಟ್ಟಲಾಗದಿದ್ದರೂ ಅದನ್ನು ಮುಂದಿನ ಹಂತಕ್ಕೆ ಒಯ್ಯುವ ಕೆಲಸ ಅದೆಷ್ಟು ಉಲ್ಲಾಸಕಾರಿ!

ಎರಡು ದಶಲಕ್ಷ ಬೆಳಕಿನ ವರ್ಷಗಳಾಚೆ ಇರುವ ಯಾವುದೋ ಗ್ಯಾಲಕ್ಸಿಯನ್ನು ಬಿಟ್ಟು ಹೊರಟ ಹೈಡ್ರೋಜನ್ ಅಣುವಿನ ಶಾಖ ಪ್ರಸರಣಾಂಶವೊಂದು ಬಂದು ನನಗೆ ಜನ್ಮ ಕೊಟ್ಟ ಅಣು ನಿಮ್ಮ ಪ್ರಯೋಗಾಲಯದಲ್ಲಿರುವ ಅಣುವಿನಂತೆಯೇ ಇದೆಯೆಂದು ಉಸಿರಿಸಿದಾಗ ಯಾವ ವಿಜ್ಞಾನಿಗೆ ಖಗೋಲ ಸಂಶೋಧನೆಯನ್ನು ಮುಂದುವರಿಸಿ ವಿಶ್ವರಹಸ್ಯದ ವಿನೂತನಾಂಶಗಳನ್ನು ತಿಳಿದುಕೊಳ್ಳಬೇಕೆಂಬ ತವಕ ಹುಟ್ಟುವುದಿಲ್ಲ?

ಅಂತೆಯೇ ಈ ಕೇಂದ್ರಕ್ಕೆ ದೇಶವಿದೇಶಗಳ ಖಗೋಲ ವಿಜ್ಞಾನಿಗಳು ಬರುತ್ತಾರೆ. ತಮ್ಮ ಸಮೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸುತ್ತಾರೆ. ಈ ಫಲಿತಾಂಶಗಳ ತೌಲನಿಕ ಅಧ್ಯಯನ ನಡೆಯುತ್ತದೆ. ಸರ್ವ ಸಮ್ಮತ ಅಂಶಗಳು ಹೊರಬೀಳುತ್ತವೆ. ವಿಶ್ವ ರಹಸ್ಯಗಳ ಮೇಲೆ ಹೊಸ ಬೆಳಕು ಬೀಳುತ್ತದೆ. ಸಂಶೋಧನೆ ಮತ್ತೆ ಮುಂದುವರಿಯುತ್ತದೆ. ಅದರೊಡನೆ ನಮ್ಮ ತಿಳಿವಿನ ಸೀಮೆಗಳೂ ವಿಸ್ತಾರ ಹೊಂದುತ್ತವೆ. ಸಾಲದೆ ಇಷ್ಟು ಸಮರ್ಥನೆ ಸಂಶೋಧನೆಗೆ?

# ನಯಾಗರ ನೀರು ಬೀಳು

ಎರಡು ನಗರಗಳನ್ನು ಕೂಡಿಸುವ ಸೇತುವೆಗಳುಂಟು. (ಉದಾಹರಣೆಗೆ ಹೈದರಾಬಾದು ಸಿಕಂದರಾಬಾದುಗಳನ್ನು ಕೂಡಿಸುವ ಸೇತುವೆ) ಎರಡು ರಾಜ್ಯಗಳನ್ನು ಕೂಡಿಸುವ ರಾಜಧಾನಿಗಳುಂಟು. (ಉದಾಹರಣೆಗೆ ಚಂಡೀಗಡ). ಆದರೆ ಎರಡು ದೊಡ್ಡ ದೇಶಗಳನ್ನು ಕೂಡಿಸುವ ಜಲಪಾತವೆಂದರೆ ನಯಾಗರ ಜಲಪಾತವೊಂದೇ ಎಂದು ತೋರುತ್ತಿದೆ. ಇದರ ಕೀರ್ತಿ ಇಷ್ಟಕ್ಕೆ ಮುಗಿಯಲಿಲ್ಲ, ಇದು ಅತ್ಯಂತ ವಿಶಾಲವಾದ ಜಲಪಾತ! ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ತನ್ನತ್ತ ಎಳೆಯುತ್ತಿರುವ ಜಲಪಾತ! ತನ್ನ ಸುತ್ತಲೂ ಅದ್ಭುತ ರಮ್ಯ ನಗರವೊಂದನ್ನು ನಿರ್ಮಿಸಿಕೊಂಡಿರುವ ಜಲಪಾತ!



ಕುದುರೆಯ ಲಾಳದ ಆಕಾರದಲ್ಲಿರುವ ಈ ನಿತಾಂತ ಮನೋಹರ ನೀರು ಬೀಳು ಅಮೇರಿಕಾ ಕೆನಡಾ ದೇಶಗಳ ಗಡಿಯಲ್ಲಿದೆ. ಅಮೇರಿಕಾಕ್ಕೆ ಸೇರಿದ ಪ್ರದೇಶದಲ್ಲಿರುವುದು ಒಂದು ಚಿಕ್ಕ ಜಲಪಾತ. ಕೆನಡಾಕ್ಕೆ ಸೇರಿದ ಪ್ರದೇಶದಲ್ಲಿಯೇ ಬೃಹತ್ ಜಲಪಾತ

ಭೋರ್ಗರೆಯುತ್ತಿದೆ. ಇದನ್ನು ನೋಡಲು ಹೋಗುವ ವಿಹಾರಿಗಳ ಸಂಖ್ಯೆಯೇ ಹೆಚ್ಚು. ಎರಡೂ ಬದಿಗಳಲ್ಲಿರುವ ಹೊಟೇಲುಗಳು, ಮೊಟೇಲುಗಳು, ವಿಶ್ರಾಂತಿ ಗೃಹಗಳು, ಫಲಹಾರ ಮಂದಿರಗಳು, ತರತರದ ಅಂಗಡಿಗಳು ಎಷ್ಟೆಂಬುದನ್ನು ಅವುಗಳ ಲೆಕ್ಕವಿಟ್ಟವರೇ ಹೇಳಬೇಕು. ಮೊದಲ ಸಲ ಅಲ್ಲಿಗೆ ಹೋದವರು ಅವುಗಳ ಅಸಂಖ್ಯತೆ, ಎತ್ತರ, ಬಿತ್ತರ, ಚಿತ್ತಾರಗಳನ್ನು ನೋಡಿ ದಂಗುಬಡಿದುಬಿಡುತ್ತಾರೆ. ಕೆಲವು ಹೊಟೇಲುಗಳಲ್ಲಿ ಐದ್ಯೆದು ಸಾವಿರ ಕೋಣೆಗಳಿರುತ್ತವೆಂದಮೇಲೆ ಅವುಗಳ ಬಗ್ಗೆ ಹೆಚ್ಚಿಗೆ ಹೇಳಬೇಕೇನನ್ನು! ಅಮೇರಿಕಾದ ಅಧ್ಯಕ್ಷ ಪದವಿಯ ಸ್ಪರ್ಧೆಗೆ ಅಲ್ಲಿಯ ಡೆಮಾಕ್ರೆಟಿಕ್ ರಿಪಬ್ಲಿಕನ್ ಪಕ್ಷಗಳು ನಡೆಸುವ ನೆರವಿಗಳು ಅದ್ಭುತವಾದವುಗಳು. ಅಂಥ ನೆರವಿಗಳಿಗಾಗಿ ನಯಾಗರವನ್ನು ಮತ್ತೆ ಮತ್ತೆ ಆಶಿಸುವರೆಂದಮೇಲೆ ಇದರ ಬೃಹತ್ತು ಮಹತ್ತುಗಳಿಗೆ ಬೇರೆ ಪುರಾವೆ ಬೇಕಿಲ್ಲ.

ಈ ನೀರ್ ಬೀಳಿನ ಇನ್ನೊಂದು ವಿಶೇಷವೇನೆಂದರೆ ಚಳಿಗಾಲದಲ್ಲಿ ಉತ್ತರ ಅಮೇರಿಕಾದ ನದಿ ಸರೋವರಗಳು ಹೆಪ್ಪುಗಟ್ಟುತ್ತವೆ. ಆದರೆ ನಯಾಗರ ಜಲಪಾತ ಮಾತ್ರ ಹೆಪ್ಪುಗಟ್ಟುವುದಿಲ್ಲ. ರಭಸದಿಂದ ನುಗ್ಗುವ ಅದರ ನೀರು ತನ್ನ ಆರ್ಭಟದಿಂದಲೇ ಸಾಕಷ್ಟು ಶಾಖವನ್ನು ಹುಟ್ಟಿಸುತ್ತ ಹೆಪ್ಪುಗಟ್ಟುವುದನ್ನು ತಡೆಯುತ್ತದೆ. ಆದರೂ ಚಳಿಗಾಲದಲ್ಲಿ ಹೆಪ್ಪುಗಟ್ಟದಿದ್ದರೂ ಗಡ್ಡೆ ಕಟ್ಟಿದ ನೀರು ನಯಾಗರ ಜಲಪಾತದಲ್ಲಿ ಧುಮುಕುತ್ತಿರುವುದನ್ನು ನೋಡಲು ಅನೇಕರು ಹೋಗುತ್ತಾರೆ. ನಾನಾ ಆಕೃತಿಗಳಲ್ಲಿ ಗಡ್ಡೆಗಟ್ಟಿದ ನೀರು ಧೋ–ಧೋ ಎನ್ನುತ್ತ ಕೆಳಗೆ ಬೀಳುತ್ತಿರುವಾಗ ನೋಡಲು ರೋಮಾಂಚಕವಾಗಿರುತ್ತದೆ. ರಾತ್ರಿ ಬಣ್ಣ ಬಣ್ಣದ ಲಕ್ಷ ವಿದ್ಯುದ್ದೀಪಗಳ ತರತರದ ಪ್ರಕಾಶ ಆ ಉರುಳುವ ನೀರ್ ಬಂಡೆಗಳ ಮೇಲೆ ಬಿದ್ದಾಗ ಅದೊಂದು ಯಕ್ಷ ಕಿನ್ನರರ ಲೋಕವಾಗಿ ಕಾಣತೊಡಗುತ್ತದೆ.

ಇದುವರೆಗೆ ಎಷ್ಟು ಜನರು ನೋಡಿರುವರೋ, ಇನ್ನು ಮುಂದೆ ಎಷ್ಟು ಜನರು ನೋಡಲಿರುವರೋ ಈ ಜಗತ್ ಪ್ರಸಿದ್ಧ ಜಲಪಾತವನ್ನು! ವರ್ಷಕ್ಕೆ ದಶಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಜನರು ಈ ನಿಸರ್ಗ ಸ್ವರ್ಗವನ್ನು ನೋಡುತ್ತಾರೆ. ಇದಕ್ಕೆ ತಕ್ಕಂತೆ ಅಲ್ಲಿ ಸೌಕರ್ಯಗಳನ್ನು ಸೃಷ್ಟಿಸಿದ್ದಾರೆ. ಆ ಮೈ ನಡುಗಿಸುವ ಅಗಲದ, ಪಿಂಡದ ನೀರ್ ಬೀಳಿನ ಹಿಂದೆ ಹೋಗಿ ಅದನ್ನು ತೀರ ಹತ್ತಿರದಿಂದ ನೋಡುವ ವ್ಯವಸ್ಥೆಯುಂಟು. ಅದು ಬೀಳುವಲ್ಲಿಗೆ ಹೋಗಿ, ವಿಶೇಷ ಉಡುಪು ತೊಟ್ಟು, ತೊಯ್ಸಿಕೊಳ್ಳುವ ಆ ಮಂಜಿನ ಬಾಲೆಯೆಂಬ ತಾಣದ ಅಪ್ರತಿಮವಾದ ಅಂದ ಚೆಂದಗಳನ್ನು ಈಕ್ಷಿಸಬಹುದು. ನದಿಗೆ ಅಡ್ಡಲಾಗಿ ಕಟ್ಟಿರುವ ಹಗ್ಗ ಹಾದಿಗಳ ತೂಗು ತೊಟ್ಟಿಲುಗಳಲ್ಲಿ ಕುಳಿತು ಸಮಸ್ತ ಸನ್ನಿವೇಶದ ಸೊಬಗನ್ನು ಸವಿಯಬಹುದು.



ಎಲ್ಲಕ್ಕೂ ಮಿಗಿಲಾಗಿ ಸ್ಕೈಲಾನ್ ಗೋಪುರ ಹತ್ತಿ ಸಮಗ್ರ ದೃಶ್ಯದ ಸಿಂಹಾವಲೋಕನ ಮಾಡಬಹುದು. ಈ ಸ್ಕೈಲಾನ್ ಹೊಸ ಜಗತ್ತಿನ ವಿಸ್ಮಯಗಳಲ್ಲಿ ಒಂದು. ಎಂಟು ನೂರು ಅಡಿ ಎತ್ತರದ ಈ ನವ್ಯಭವ್ಯ ಗೋಪುರದ ಮೇಲೆ ನಾಲ್ವತ್ತಕ್ಕಿಂತಲೂ ಹೆಚ್ಚು ಅಂಗಡಿಗಳಿವೆ. ಬುಡದಲ್ಲಿ ವಿವಿಧ ವಿಲಾಸ ವಸ್ತುಗಳ ಅನೇಕ ಅಂಗಡಿಗಳಿವೆ. ತುಟ್ಟ ತುದಿಯ ಮೇಲೆ ಚಕ್ರದಂತೆ ತಿರುಗುವ ಹೋಟೆಲ್ ಇದೆ. ಇಲ್ಲಿ ರಾತ್ರಿಯಲ್ಲಿ ನೃತ್ಯಲಾಸ್ಯಗಳು ನಡೆಯುತ್ತವೆ. ಪಾನಪ್ರಿಯರೂ, ಕಲಾರಸಿಕರೂ, ವಿಲಾಸಿಗಳೂ, ವಿಹಾರಿಗಳೂ ಇದನ್ನು ಭೂಲೋಕದ ಸ್ವರ್ಗವೆಂದು ಭಾವಿಸುತ್ತಾರೆ. ಹಗಲು ಊಟಮಾಡುತ್ತ ಜಲಪಾತದ ಚೆಲುವನ್ನು ಆಸ್ವಾದಿಸಬಹುದು, ರಾತ್ರಿ ನೃತ್ಯ ನೋಡುತ್ತ ಝುಗ ಝುಗಿಸುವ ಬೆಳಕಿನಲ್ಲಿ ನಯಾಗರ ನೀರ್ ಬೀಳಿನ ಬೆಡಗನ್ನು ಸವಿಯಬಹುದು. ನವದಂಪತಿಗಳಿಗಂತೂ ನಂದನವನ ಇದು. 'ನೀವು ಯಾರೇ ಆಗಿರಲಿ ನಿಮ್ಮ ಬಯಕೆ ಏನೇ ಇರಲಿ ಇಲ್ಲಿ ಈಡೇರುತ್ತದೆ' ಎಂಬ

ಫಲಕಗಳು ಅಲ್ಲಲ್ಲಿ ಕೇಳುವದೇನಿದೆ? ಎಲ್ಲ ಋತುಗಳಲ್ಲಿಯೂ ಇಲ್ಲಿ ಎಲ್ಲ ಕೋಣೆಗಳೂ ಭರ್ತಿ. ಮೊದಲೇ ಹಣ ಕೊಟ್ಟು ಕೋಣೆಗಳನ್ನು ಕಾಯ್ದಿರಿಸಿಕೊಳ್ಳಬೇಕು. ಇಲ್ಲಿ ಸಿಕ್ಕದುದು ಯಾವದೂ ಇಲ್ಲ, ಇಲ್ಲವೆ ಇಲ್ಲಿ ಸಿಕ್ಕುವದು ಇನ್ನೆಲ್ಲಿಯೂ ಸಿಕ್ಕದು ಎಂದು ಹೇಳಿದರೂ ಸಲ್ಲುತ್ತದೆ. ಅಂತೆಯೇ ಪ್ರಪಂಚದ ಪ್ರಸಿದ್ಧ ಪುರುಷರು ಇಲ್ಲಿ ತಂಗಿ ಭಾವಪರವಶತೆಯ ದಿನ ರಾತ್ರಿಗಳನ್ನು ಕಳೆದಿದ್ದಾರೆ. ಎಲಿವೇಟರುಗಳ ಮೂಲಕ ಏರುತ್ತಿದ್ದಂತೆಯೇ ಮುಗ್ಧಗೊಳಿಸುವ ಈ ಗೋಪುರದ ಮೋಹಕತೆ ಏರುವವರನ್ನು ಆವರಿಸುತ್ತದೆ. ಏರಿದ ಮೇಲೆ ಕಣ್ಣು ಕೋರೈಸುವ ಬಣ್ಣ ಬಣ್ಣಗಳ ಬೆಳಕಿನಲ್ಲಿ ನಯಾಗರ ನಗರ, ಜಲಪಾತಗಳ ಸುಂದರ ದೃಶ್ಯಾವಳಿ ನೋಡುವವರನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

ಇಲ್ಲಿಯ ಇತರ ಆಕರ್ಷಣೆಗಳೂ ಉಲ್ಲೇಖನೀಯ. ಮಯಣದ ವಸ್ತು ಸಂಗ್ರಹಾಲಯಗಳಿವೆ. ಅವುಗಳಲ್ಲಿ ಮೇಣದಲ್ಲಿ ಮಾಡಿದ ಅನೇಕ ಮಾದರಿಗಳ ವ್ಯಕ್ತಿಗಳ ಮೂರ್ತಿಗಳಿವೆ, ಅವು ನಿಜವಾದ ಧ್ವನಿಯಲ್ಲಿ ಮಾತನಾಡಿದಾಗ ನೋಡುವವರು ಬೆರಗಾಗುತ್ತಾರೆ. ಪ್ರಪಂಚದ ಅನೇಕ ಪುರುಷರ ಶ್ರೇಷ್ಠ ಮೂರ್ತಿಗಳಿವೆ.

ಆ ಪ್ರದೇಶವೆಲ್ಲ ಒಂದು ವಿಶಾಲವಾದ ವೈವಿಧ್ಯಪೂರ್ಣವಾದ ಉದ್ಯಾನವನ. ಅಲ್ಲಿಲ್ಲದ ವೃಕ್ಷಗಳೇ ಇಲ್ಲ. ಭಾರತದ ವೃಕ್ಷಗಳು ಅಲ್ಲಿವೆ. ಅಲ್ಲಿನ ಗುಲಾಬಿವನ ಅನುಪಮ. ಎಲ್ಲ ಬಣ್ಣಗಳು, ಎಲ್ಲ ಜಾತಿಗಳು ಇಲ್ಲಿವೆ. ದೇಶಗಳ ಗುಲಾಬಿಗಳಲ್ಲಿ ಪತ್ರಪುಷ್ಪಗಳಿಂದಲೇ ಮಾಡಿದ ಚಲಿಸುವ ಗಡಿಯಾರವೆ, ನಗರವನ್ನು ಬಳಸಿರುವ ನಯಾಗರ ನದಿಯೆ, ಭೂಮಾಕೃತಿಯೊಡನೆ ಬೀಳುವ ಜಲಪಾತವೆ, ದೇಶವಿದೇಶದ ಪ್ರೇಕ್ಷಕರೆ, ಉಡಿಗೆ ತೊಡಿಗೆಗಳ ಬೆಡಗು ಬಿನ್ನಾಣಗಳೆ, ನೃತ್ಯವೇ, ಗಾನವೆ, ಕ್ರೀಡೆಯೆ ಏನನ್ನು ಬಿಡುವುದು. ಬಣ್ಣನೆ ಪ್ರತ್ಯಕ್ಷ ವೀಕ್ಷಣೆಗೆ ಸರಿಯಾದೀತೇ?

- ಪುರಾಣಿಕರು ೧೯೭೪ರಲ್ಲಿ ಅಮೇರಿಕೆ ಪ್ರವಾಸ ಮಾಡಿ ಅಲ್ಲಿ ನೋಡಿದ ಪ್ರಸಿದ್ಧ ಸ್ಥಳಗಳ ವಿವರಣೆ ಬರೆದಿದ್ದಾರೆ. ಈ ಸ್ಥಳಗಳು ಹಾಗೆಯೇ ಈಗಲೂ ಇವೆ. ಆದರೆ ಅಲ್ಲಿನ ಸೌಲಭ್ಯಗಳು ಮತ್ತು ನೋಡುವ ಆಕರ್ಷಣೆಗಳು ಹೆಚ್ಚಾರಿಗ ಬಹುದು.
- "ಶುಕವನ" ೨೦೦೩ರಲ್ಲಿ ಮಿಯಾಮಿ ಫ್ಲೋರಿಡಾ ಸಮೀಪದ ವಾಟಸನ್ ಐಲಾಂಡ್‌ಗೆ ವರ್ಗಾಯಿಸಲಾಗಿ, ಅದನ್ನು ಈಗ "ಜಂಗಲ್ ಐಲಾಂಡ" ಎಂದು ಹೆಸರಿಸಲಾಗಿದೆ.

# ಸರ್ವರ ಕವಿ ಸರ್ವಜ್ಞ

ಒಂದು ಭಾಷೆಯನ್ನಾಡುವ ಎಲ್ಲ ಜನರೂ ಏಕಪ್ರಕಾರವಾಗಿ ಮೆಚ್ಚುವ ಕವಿಗಳು ವಿರಳ. ಒಂದೊಂದು ಭಾಷೆಯಲ್ಲಿ ಒಬ್ಬಿಬ್ಬರು ದೊರೆಯುತ್ತಾರೆ. ಇಂಥವರು–ತಮಿಳಿನಲ್ಲಿ ತಿರುವಳ್ಳುವರ್, ತೆಲುಗಿನಲ್ಲಿ ವೇಮನ, ಮರಾಠಿಯಲ್ಲಿ ಸ್ವಾಮಿ ರಾಮದಾಸ, ಹಿಂದಿಯಲ್ಲಿ ಕಬೀರ, ಕನ್ನಡದಲ್ಲಿ ಸರ್ವಜ್ಞ ಆಯಾ ಭಾಷೆಯಲ್ಲಿ ಇವರ ಹೆಸರು ಮನೆಮಾತು. ಎಲ್ಲರ ಮನಗಳಲ್ಲಿ ಇವರಿಗೆ ಮನೆ. ಇವರ ಪದ್ಯಗಳಲ್ಲಿ ಕಲೆಗಾರಿಕೆ ಹೆಚ್ಚಿಲ್ಲದಿರಬಹುದು. ಆದರೆ ಲೋಕಾನುಭವದ ಸಾರವೇ ಇವುಗಳಲ್ಲಿ ಹರಳುಗಟ್ಟಿರುವ ಕಾರಣ ಇವು ಎಲ್ಲರಿಗೂ ಪ್ರಿಯವಾಗಿವೆ.

ಬೋಳಿಸಿಕೊಂಡ ಮಂಡೆ, ಹೊದ್ದ ತುಂಡುಗಂಬಳಿ, ಹಿಡಿದ ಬೆತ್ತ, ಮುಖದ ತೇಜಸ್ಸು–ನೋಡಿದವರೆಲ್ಲ ನಿಬ್ಬೆರಗಾಗಿ ನಿಲ್ಲುವಂಥ ಮೂರ್ತಿಸ್ವರೂಪ. ಈ ಹಿಂಡನಗಲಿದ ಗಜಕ್ಕೆ ಯಾರ ಹಂಗೂ ಇಲ್ಲ. ಹಂಗಿನ ಬಾಳು ಅವನಿಂದ ಗಾವುದ ಗಾವುದ ದೂರ. ‘ಹಂಗಿನಮೃತಕ್ಕಿಂತ ತಂಗುಳನ್ನವು ಲೇಸು’, ‘ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು’ ‘ಅಪಮಾನದೂಟದಿಂದುಪವಾಸಕರ ಲೇಸು’ ಎಂದು ಘೋಷಿಸಿದ್ದ ಅವನು ಯಾರ ಹಂಗಿಗೂ ಒಳಗಾಗದೆ, ‘ಜಗದಿ ಸ್ವಾತಂತ್ರ್ಯವೇ ಲೇಸು’ ಎಂಬ ತನ್ನ ನಿಲುವಿಗೆ ತಕ್ಕಂತೆ ಬದುಕಿದ. ‘ಹಿರಿದಪ್ಪನಾಡಿದೆ : ತಿರಿವರಿಂ ಸಿರಿವಂತರಾರು’ ಎಂಬ ನಂಬಿಕೆಯಿದೆ; ವಿಚಾರಗಳಿಂದ ತುಂಬಿದ ತಲೆಯಿದೆ. ಅನುಭವದಿಂದ ತುಂಬಿದ ಎದೆಯಿದೆ; ಇನ್ನೇನು ಬೇಕು ಬಿಡುಗಡೆಯ ಬಾಳಿಗೆ? ‘ಬಾಳುವೆಗೆ ಬಂಧನವೇ ಹೊಲ್ಲ’ ಎಂದಿದ್ದ ಅವನು ಎಂದಿಗೂ ಬಂಧನಕ್ಕೆ ಸಿಲುಕಲಿಲ್ಲ.

## ತ್ರಿಪದಿಯ ತ್ರಿವಿಕ್ರಮ

ಕನ್ನಡ ನಾಡನೆಲ್ಲ ಅಲೆದ ಈ ತ್ರಿವಿಕ್ರಮ ಅನುಭವಿಯ ವೇದವನ್ನೇ ನಮಗೆ ನೀಡಿದ. ಇವನ ರಚನೆಗಳು ವಚನಗಳೆಂದು ಪ್ರಕಟವಾಗಿದ್ದರೂ ಅವುಗಳಿರುವುದು ತ್ರಿಪದಿಯ ರೂಪದಲ್ಲಿ. ತ್ರಿಪದಿ ಕನ್ನಡ ಛಂದಸ್ಸಿನ ಗಾಯತ್ರಿ. ಮಹಾಕಾವ್ಯಗಳಲ್ಲಿ ಅದಕ್ಕೆ ಇಂಬು ದೊರೆಯದಿದ್ದರೂ ಗರತಿಯರ ಹಾಡುಗಳು ಮೈದಳೆದುದು ಅದರಲ್ಲಿ. ಹರಿಹರನ ಕೈಗೆ ರಗಳೆ, ರತ್ನಾಕರವರ್ಣಿಯ ಕೈಗೆ ಸಾಂಗತ್ಯ ಸಿಕ್ಕು ಪರಮೋನ್ನತಿಯನ್ನು ಪಡೆದಂತೆ ಸರ್ವಜ್ಞನ ಕೈಗೆ ತ್ರಿಪದಿ ಸಿಕ್ಕು ತನ್ನ ತ್ರಿವಿಕ್ರಮತೆಯನ್ನು ಸಾಧಿಸಿಕೊಂಡಿತು. ಅದರ ಮೂರು ಪಾದಗಳು ವಾಮನನ ಮೂರು ಪಾದಗಳೇ. ಒಂದೊಂದು ಪಾದದಲ್ಲಿ ಒಂದೊಂದು ಅರ್ಥಪ್ರಪಂಚ.

ಈ ತ್ರಿಪದಿಗಳು ಒಳಗೊಳ್ಳದ ವಿಷಯವಿಲ್ಲವೆಂದರೂ ಸಲ್ಲುತ್ತದೆ. ಅಧ್ಯಾತ್ಮ, ಯೋಗ, ಧರ್ಮ, ನೀತಿ, ವ್ಯವಹಾರ, ವೈದ್ಯ, ವ್ಯವಸಾಯ, ಜ್ಯೋತಿಷ್ಯ, ಕುಲ, ಜಾತಿ, ಪಥ, ಪಂಥ, ಕಾಲಜ್ಞಾನ, ಗುಣ, ದೋಷ, ಸಜ್ಜನ, ದುರ್ಜನ, ಭಾಷೆ, ದೇಶ, ದೇವರು, ರಾಜನೀತಿ–ಏನೆಲ್ಲ ಇಲ್ಲಿ ಚರ್ಚಿತವಾಗಿವೆ. ಮಥಿಸಲ್ಪಟ್ಟಿವೆ; ತಮ್ಮ ಟೊಳ್ಳು ಕಳೆದುಕೊಂಡು ಗಟ್ಟಿಯನ್ನು ಉಳಿಸಿಕೊಂಡಿವೆ. ಎಲ್ಲಿಯೂ ಪೂರ್ವಾಗ್ರಹಕ್ಕೆ ಕಟ್ಟುಬಿದ್ದಿಲ್ಲ; ಎಲ್ಲಿಯೂ ಅದು ಮೇಲು ಇದು ಕೀಳು ಎಂಬ ಕಿತ್ತಾಟ ಇಲ್ಲ. ಲೇಸಾವುದು, ಹೊಲ್ಲ ಯಾವುದು ಎಂದು ಪರೀಕ್ಷಿಸಲಾಗಿದೆಯೇ ಹೊರತು ಯಾವುದನ್ನೂ ಉಪೇಕ್ಷಿಸಿಲ್ಲ. ಅವನ ದೃಷ್ಟಿಯೇ ವಿಶ್ವ ವಿಶಾಲದೃಷ್ಟಿ :



**“ಊರೆಲ್ಲ ನೆಂಟರು, ಕೇರಿಯೆಲ್ಲವು ಬಳಗ ।**

**ಧಾರುಣಿಯೆ ನನ್ನ ಕುಲದೈವವಾಗಿರಲು ಯಾರನ್ನು ಬಿಡಲಿ?”** ಎಂದು ಕೇಳಿದ.

ಅವನು ಬದುಕನ್ನು ಕೆದಕಿ ನೋಡಿ ಅದರೊಳಗಿನ ಹದುಳದ ಅಂಶಗಳನ್ನು ಸರ ಮಾಡಿದ. ಹೊಲ್ಲದ ಅಂಶಗಳನ್ನು ಕೇರಿ, ತೂರಿ, ಹಾರಿಸಿ ಬಿಟ್ಟ. ಹೀಗೆ ಹಾರಿಸಿದವುಗಳಲ್ಲಿ ಅಂಧಶ್ರದ್ಧೆಗಳಿವೆ; ಕುಲಜಾತಿಗಳಿವೆ; ಮೇಲುಕೀಳಿನ ಕಲ್ಪನೆಗಳಿವೆ; ‘ಮುಟ್ಟೀ ತಟ್ಟೀ’ ಎಂಬ ಕೆಟ್ಟ ರೂಢಿಗಳಿವೆ. ದುರ್ಗುಣಗಳಿವೆ: ದುಷ್ಟ ವೃತ್ತಿಗಳಿವೆ–ಬದುಕನ್ನು ಕಂದಿಸುವ, ಕುಂದಿಸುವ, ಬಂಧಿಸುವ ಎಲ್ಲವೂ ಇವೆ. ಎಲ್ಲೆಲ್ಲೂ ವೈಚಾರಿಕತೆಗೆ ಅಗ್ರಪಟ್ಟ, ಮಾನವೀಯತೆಗೆ ಮೊದಲ ಮಣೆ, ವ್ಯಾವಹಾರಿಕತೆಗೆ ಮನ್ನಣೆಯ ಸ್ಥಾನ ಭಾವಾತಿರೇಕಕ್ಕೆ ಜಾಗವೇ ಇಲ್ಲ. ಅತಿಮಾನುಷತೆ, ಅಸಹಜತೆ ಉತ್ಪ್ರೇಕ್ಷೆ ಇತ್ಯಾದಿಗಳಿಗೆ ಸ್ವಾಗತವೇ ಇಲ್ಲ. ಸಹಜತೆ, ಸ್ವಾಭಾವಿಕತೆ, ಯಥಾರ್ಥತೆಗಳೇ ಮುಖ್ಯ ಲಕ್ಷಣಗಳು.

ಇನ್ನು ಈ ತ್ರಿಪದಿಗಳ ಶಕ್ತಿಗೆ ಸಾಕ್ಷಿಯಾಗಿ ಕೆಲವನ್ನಿಲ್ಲಿ ನೋಡಬಹುದಾಗಿದೆ :

ಮಾನವ ಏನಾಗಬೇಕು?

**“ಏನಾದಡೇನಯ್ಯ ತಾನಾಗದನ್ನಕ್ಕ**
**ತಾನಾಗಿ ತನ್ನನರಿದವನು ಲೋಕದಲಿ ಏನಾದಡೇನು–ಸರ್ವಜ್ಞ”**

ಅಜ್ಞಾನ ತೊಲಗುವುದು ಹೇಗೆ?

**“ಧ್ಯಾನದ ಹೊಸಬತ್ತಿ ಮೌನದ ತಿಳಿದುಪ್ಪ**
**ಸ್ವಾನುಭವವೆಂಬ ಬೆಳಗಿನ ಜ್ಯೋತಿಯ ಜ್ಞಾನವನು ಸುಡುಗು”**

ಈ ದೀಪ ಜೀವನದ ಜ್ಯೋತಿಯಾಗದೇ?

ಒಂದು ಅಪ್ರತಿಮ ಪ್ರತಿಮೆ :

**“ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ**
**ಕಡುರೋಷವೆಂಬ ವಿಷವೇರೆ ಸಮತೆ ಗಾರುಡಿಗನಂತಕ್ಕು”**

ಇದು ಕೈಲಾಸಕ್ಕೆ ಪ್ರವೇಶ ಪತ್ರ :

**"ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು**
**ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು-ಸರ್ವಜ್ಞ"**

ಇದು ಕೇಡು ಬರುವಾಗಿನ ಚಿತ್ರ :

**"ಕೇಡು ತಾ ಬರುವಲ್ಲಿ ಕೂಡುವುದು ದುರ್ಬುದ್ಧಿ ।**
**ಕಾಡಿನಲಿ ಕಿಚ್ಚು ಒಗೆದಾಗ ಮಾರುತನು ಕೂಡಿಕೊಂಡಂತೆ ಸರ್ವಜ್ಞ"**

## ಮಾತಲ್ಲ, ಜ್ಯೋತಿ

ಸರ್ವಜ್ಞನ ಕೈಯಲ್ಲಿ ಕನ್ನಡ ಮಾತು ಕೇವಲ ಮಾತಾಗಿ ಉಳಿಯಲಿಲ್ಲ, ಅದು ಜ್ಯೋತಿಯಾಯಿತು. ಆ ಮಾತು ಕಣ್ಣಿಗೇ ಬೀಳಲಿ, ಕಿವಿಗೇ ಬೀಳಲಿ, ಹೃದಯದ ಒಳಗೆ ದೀಪ ಹಚ್ಚಿದಂತಾಗುತ್ತದೆ. ಬೆಳಕು ತುಳುಕುತ್ತದೆ. ಸರ್ವಜ್ಞನ ಕನ್ನಡ ಭಾಷೆಯ ಬಗ್ಗೆ ವರಕವಿ ಬೇಂದ್ರೆಯವರ ಮಾತು ಮನನೀಯ : "ಇಂದಿನ ಯುಗ ಮಾತುಗಾರಿಕೆಯದು. ಮಾತು ಕಲಿಯಬೇಕೆನ್ನುವವರು ಸರ್ವಜ್ಞನ ವಚನಗಳ ಗರಡಿ ಮನೆಯಲ್ಲಿ



ಸಾಧನೆ ಮಾಡಬೇಕು. ಚುರುಕು–ಹರಿತ, ಇರಿತ–ತಿವಿತ, ನಗೆ–ನಯ; ಈ ಪಟ್ಟುಗಳನ್ನು ಕಲಿಯಬೇಕಾದರೆ ಈ ವಚನಗಳೊಡನೆ ಸಲಿಗೆ ಮಾಡಬೇಕು.''

ಸರ್ವಜ್ಞನ ಕೈವಾಡದಿಂದ ಕನ್ನಡ ಮಾತಿಗೆ ಕಸುವು ಬಂದಿದೆ, ಕುಸುರು ಬಂದಿದೆ, ಜಸವು ಬಂದಿದೆ. ಒಂದೊಂದು ತ್ರಿಪದಿಯಲ್ಲೂ ಒಂದೊಂದು ಗಾದೆಯೋ, ನಾಣ್ಣುಡಿಯೋ, ಜಾಣ್ಣುಡಿಯೋ, ನಾಂಟು ನುಡಿಯೋ ಉಂಗುರಕ್ಕೆ ಕುಂದಣದಂತೆ ಸೇರಿಕೊಂಡಿದೆ.

ಮಾತಿನ ಮಹತ್ವವನ್ನು ಅರಿತುಕೊಂಡಿದ್ದರಿಂದಲೇ ಸರ್ವಜ್ಞನ ಮಾತುಗಳಿಗೆ ಜ್ಯೋತಿಯಾಗುವುದು ಸಾಧ್ಯವಾಯಿತು. 'ಮಾತಿನಿಂ ನಗೆನುಡಿಯು, ಮಾತಿನಿಂ ಹಗೆ ಕೊಲೆಯು; ಮಾತಿನಿಂ ಸರ್ವ ಸಂಪದವು, ಲೋಕಕ್ಕೆ ಮಾತೇ ಮಾಣಿಕವು' ಎಂದು ಸಾರಿದ ಅವನ ಮಾತುಗಳೆಲ್ಲ ಮಾಣಿಕಗಳೇ. ನಾವೆಲ್ಲ ಮಾತು ಬಲ್ಲವರಾಗಬೇಕು.

ಮಾತರಿಯದೆ ಕೆಡದಿರಬೇಕಾದರೆ ಸರ್ವಜ್ಞನ ಸೂಳ್ನುಡಿಗಳನ್ನು ತಲೆಯಲ್ಲಿ ತುಂಬಿಕೊಳ್ಳಬೇಕು. 'ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು, ಮಾತು ತಾನರಿಯದಧಮಂಗೆ ಮಾಣಿಕವು ತೂತುಬಿದ್ದಂತೆ' ಎಂಬುದು ಸರ್ವಜ್ಞನ ನಿಲುವು. ಆದರೊಂದು ಎಚ್ಚರಿಕೆ : 'ಮೆಲ್ಲನೆಯ ಸುರಿನೀರು ಕಲ್ಲ ಭೇದಿಸಲಕ್ಕು'. ಆದುದರಿಂದ 'ಕಲ್ಲ ಮೇಲಿನ ನೀರು ಮೆಲ್ಲನೆಯ ಸರಿದಂತೆ ಸೊಲ್ಲನಾರೈದು ನುಡಿವನ ಜಾಣ್ಮೆಯು ಎಲ್ಲಕ್ಕು ಮಿಗಿಲು'. ಇನ್ನು ಮಾತಾಡುವವ ರಸಿಕನಾಗಿದ್ದರೆ ಕೇಳುವುದೇನಿದೆ? 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'.

ಮಾತು ಹೊತ್ತಿಗೆ ಸರಿಯಾಗಿ ಒದಗಿದರೆ ಅದರ ಶಕ್ತಿ ಬಹಳ. 'ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ । ಹೊತ್ತಾಗಿ ನುಡಿದ ಮಾತು ಕೈ ಜಾರಿದ ಮುತ್ತಿನಂತಿಹುದು'. ಸರ್ವಜ್ಞನ ಮಾತುಗಳು ಹೊತ್ತಿಗೊದಗುವ ಮಾತುಗಳು.

**ಸರ್ವಜ್ಞನ ಸಂದೇಶ**

ಸರ್ವಜ್ಞನಿಗೆ ಈ ಜಗತ್ತಿನ ಜೀವನದ ಬಗ್ಗೆ ಜಿಗುಪ್ಸೆಯಿಲ್ಲ. ತಾನು ವಿರಾಗಿಯಾಗಿ ಉಳಿದರೂ, ಯೋಗಿಯಾಗಿ ಬೆಳೆದರೂ ಶ್ರೀಸಾಮಾನ್ಯರು ಸಂಸಾರಿಗಳಾಗಿಯೇ ಸದ್ಗತಿ ಪಡೆಯಬೇಕೆಂಬುದು ಅವನ ಅಭಿಮತ.

ಗುರುವಿಗೆ ಹಿರಿಯ ಸ್ಥಾನ ಸರ್ವಜ್ಞನ ದೃಷ್ಟಿಯಲ್ಲಿ; ಗುರು ನರನಲ್ಲ । "ಸುರತರುವು ಮರನಲ್ಲ, ಸುರಭಿಯೊಂದಾವಲ್ಲ । ಪರುಷ ಪಾಷಾಣದೊಳಗಲ್ಲ, ಗುರುರಾಯ ನರರೊಳಗಲ್ಲ–



ಸರ್ವಜ್ಞ." ಈ ಗುರು ಯಾರಾದರೂ ಸರಿಯೆ. ಸರ್ವಜ್ಞನ ಸಮದೃಷ್ಟಿಗೆ ನಾವು ತಲೆದೂಗಲೇಬೇಕು, ತಲೆ ಬಾಗಲೇಬೇಕು. ಒಂದೇ ಕರಾರು. ಗುರು ನಿಜವನರಿದವನಾಗಿರಬೇಕು. ಶಿಷ್ಯನಿಗೂ ನಿಜವನರಿವ ದಾರಿಯನ್ನು ತೋರುವವನಾಗಿರಬೇಕು.

ದೇವರ ಕಲ್ಪನೆ ಆದಿಯಿಂದಲೂ ಮಾನವನನ್ನು ಕಾಡುತ್ತ ಬಂದಿರುವ ಸಮಸ್ಯೆ, ಆದಿಮಾನವನಿಂದ ವೇದಮಾನವರವರೆಗೆ ಮನುಷ್ಯ ಕಲ್ಪಿಸಿದ ದೇವದೇವಿಯರೆಷ್ಟು? ಸರ್ವಜ್ಞನ ನಿಲುವು ಮಾತ್ರ ಸ್ಪಷ್ಟ.

**"ಒಬ್ಬನಲ್ಲದೆ ಜಗಕೆ ಇಬ್ಬರುಂಟೇ? ಮತ್ತೆ ।**
**ಒಬ್ಬ ಸರ್ವಜ್ಞ ಕರ್ತನೀ ಜಗಕೆಲ್ಲ ಒಬ್ಬನೇ ದೈವ–ಸರ್ವಜ್ಞ॥"**

ಈ ದೈವ ಅನುಗ್ರಹಿಸುವುದು ತನ್ನ ಮಕ್ಕಳ ಮೂಲಕವೇ. ಆದುದರಿಂದ

**"ಆ ದೇವ ಈ ದೇವ ಮಾದೇವನೆನಬೇಡ ।**
**ಆ ದೇವರ ದೇವ ಭುವನದ ಪ್ರಾಣಿಗಳಿಗಾದವನೆ ದೇವ–ಸರ್ವಜ್ಞ"**

ಅವನು ಅಲ್ಲಿರುವ, ಇಲ್ಲಿರುವ ಎಂದು ಹೋರಾಟ ಬೇಡ :

**"ಅಲ್ಲಿಪ್ಪನಿಲ್ಲಿಪ್ಪನೆಲ್ಲಿಪ್ಪನೆನಬೇಡ**
**ಕಲ್ಲಿನಂತಿಪ್ಪ ಮಾನವನ ಮನಕರಗೆ**
**ಅಲ್ಲಿಪ್ಪ ನೋಡ–ಸರ್ವಜ್ಞ"**

ಎದೆಯ ಕಲ್ಲನ್ನು ಕರಗಿಸುವುದೇ ಅವನನ್ನು ಕಾಣುವ ಸುಲಭೋಪಾಯ. ಸದಯ ಹೃದಯವೆ ಅವನ ಸದನ. ಆದುದರಿಂದ ಎದೆ ಕರಗಿ ಭಕ್ತಿಯಾಗಿ ಅವನ ಕಡೆಗೆ, ಗುರುಹಿರಿಯರ ಕಡೆಗೆ ಹರಿಯಬೇಕು. ಮಾನವಪ್ರೇಮವಾಗಿ ಅವನ ಮಕ್ಕಳ ಕಡೆಗೆ ಹರಿಯಬೇಕು: ಪರಿಶುದ್ಧ ಪ್ರೀತಿಯಾಗಿ ತಂದೆ ತಾಯಿಯರ, ಮಡದಿ ಮಕ್ಕಳ, ಬಂಧುಬಳಗದ ಕಡೆಗೆ ಹರಿಯಬೇಕು. ಪವಿತ್ರ ಸ್ನೇಹವಾಗಿ ಗೆಳೆಯರ ಕಡೆಗೆ ಹರಿಯಬೇಕು. ಅನಿಮಿತ್ತ ಅನುಕಂಪೆಯಾಗಿ ಎಲ್ಲ ಜೀವರಾಶಿಗಳ ಕಡೆಗೆ ಹರಿಯಬೇಕು. ಹೀಗಾದಲ್ಲಿ ಹಿಂಸೆಗೆ ಎಡೆಯಿಲ್ಲ; ರಾಗ ದ್ವೇಷಗಳಿಗೆ ಇಂಬಿಲ್ಲ. ಇದು ಒಲಿವ, ಒಲಿಸುವ ಧರ್ಮ, ಕೊಲುವ, ಕೊಲ್ಲಿಸುವ ಧರ್ಮವಲ್ಲ. 'ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕು'. ಆದರೆ ಏನನ್ನೂ ಕೊಲ್ಲದೆ ಬದುಕುವುದೂ ಸಾಧ್ಯವಿಲ್ಲವಲ್ಲ. "ಜೀವಿ ಜೀವಿಯ ತಿಂದು ಜೀವಿಪುದು ಜಗವೆಲ್ಲ. ಜೀವದಿಂ ಹೊರಗೆ ತಿಂಬವರ ನಾ ಕಾಣೆ–ಜೀವವೀ ಜಗವು–ಸರ್ವಜ್ಞ". "ಚರಜೀವವನು ತಿಂದು ಚರಿಸುವುದು ಜಗವರ್ಧ. ಚರಿಸದ ಜೀವಿಗಳ ತಿಂದು ಜಗವರ್ಧ ಚರಿಸುವುದು ನೋಡ–ಸರ್ವಜ್ಞ" ಜಗವೆಲ್ಲ ಜೀವವೇ. ಜೀವಿ ಜೀವಿಯನ್ನು ಸೇವಿಸಿಯೇ



ಬದುಕಬೇಕು. ಆದರೆ ಅದು ಬದುಕುವುದಕ್ಕೆ ಮಾತ್ರ ಸೀಮಿತವಾಗಿರಬೇಕು–ಬೇಟೆಗೆ, ಯುದ್ಧಕ್ಕೆ, ಬಾಯಿ ಚಪಲಕ್ಕೆ ವಿಸ್ತರಿಸಬಾರದು.

'ಓದಿದ ಓದೆಲ್ಲ ಮೇದ ಕಬ್ಬಿನ ಹಿಪ್ಪಿ. ಓದಿನ ಒಡಲನರಿದಂಗೆ ಹಿಪ್ಪಿ ಕಬ್ಬಾದ ತೆರನಂತೆ–ಸರ್ವಜ್ಞ' ಓದಿನ ಒಡಲನ್ನು ಅರಿಯುವತ್ತ ನಮ್ಮ ಗಮನ ಸೆಳೆದಿದ್ದಾನೆ ಸರ್ವಜ್ಞ. ಓದಿನ ಒಡಲೆಂದರೇನು? ಅಕ್ಷರ, ಅಂಕಿ, ಸಂಖ್ಯೆ, ವಿಷಯಗಳಿಗೆ ಸೀಮಿತವಾಗದೆ, ಓದು ವಿವೇಕವನ್ನು ನಮಗೆ ನೀಡಬೇಕು. ಸದಸದ್ವಿವೇಕವೆಂದೂ ಕರೆಯುತ್ತಾರೆ. ಅದರಿಂದ ಸಟೆ–ದಿಟ, ಒಳಿತು–ಕೆಡಕು, ಹಿತ–ಅಹಿತಗಳನ್ನು ತಿಳಿದುಕೊಳ್ಳುವುದು ನಮಗೆ ಸಾಧ್ಯವಾಗುತ್ತದೆ. ಇಂದಿನ ಶಿಕ್ಷಣ ಪಂಡಿತರೂ ವಿಚಾರಿಸಬೇಕಾದ ಅಂಶವಿದು.

ರಾಷ್ಟ್ರದ ಏಳ್ಗೆ ಏತರಿಂದ ಎಂಬ ಬಗ್ಗೆ ಸರ್ವಜ್ಞ ಹೇಳಿರುವುದು ಇಂದಿಗೂ ಪ್ರಸ್ತುತ. ಭಾರತದಂಥ ಕೃಷಿಪ್ರಧಾನ ದೇಶದಲ್ಲಿ ಇನ್ನೂ ಪ್ರಸ್ತುತ:

**"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು**
**ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ**
**ದಾಟವೆ ಕೆಡುಗು–ಸರ್ವಜ್ಞ"** ॥

ಕುಲಗೋತ್ರಗಳ ಖಂಡನೆ :

**ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು ।**
**ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ**।
**ನಡುವೆ ಎತ್ತಣದು–ಸರ್ವಜ್ಞ**॥

ಸರ್ವಜ್ಞ ವಚನಸಾರ

**ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ**
**ಬಲ್ಲಿದರು ಇದ್ದು ಬಲವಿಲ್ಲ, ಸಾಹಿತ್ಯ–**
**ವೆಲ್ಲರಿಗೆ ಇಲ್ಲ, ಸರ್ವಜ್ಞ**॥

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು?
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ–ಸರ್ವಜ್ಞ॥

ತನ್ನ ತಾನರಿದಂಗೆ ಭಿನ್ನ ಭಾವನೆಯಿಲ್ಲ
ತನ್ನವರು ಇಲ್ಲ, ಪರರಿಲ್ಲ, ತ್ರೈಭುವನ
ತನ್ನೊಳಗೆ ಇಹುದು–ಸರ್ವಜ್ಞ॥

ತನ್ನ ಮುಖ ಬೆನ್ನುಗಳು ತನ್ನ ಕಣ್ಣಿಗೆ ಮರೆಯು
ತನ್ನ ಗುಣದೋಷಗಳನರಿಯೆ ಇವನರಿದ
ಇನ್ನೊಬ್ಬ ಬೇಕು–ಸರ್ವಜ್ಞ॥

ಕೋಪವೆಂಬುದು ಕೇಳಿ ಪಾಪದ ನೆಲಗಟ್ಟು,
ಕೂಪದೊಳು ನೇಣು ಹರಿದಂತೆ ನರಕದೊಳು
ಕೋಪಿ ತಾನಿಳಿವ–ಸರ್ವಜ್ಞ॥



ಆಗ ಬಾ, ಈಗ ಬಾ, ಹೋಗಿ ಬಾ ಎನ್ನದಲೆ
ಆಗಲೇ ಕರೆದು ಕೊಡುವವನ ಧರ್ಮ ಹೊ
ನ್ನಾಗದೆ ಬಿಡದು–ಸರ್ವಜ್ಞ॥

ಅನ್ನದಾನಗಳಿಂದ ಮುನ್ನ ದಾನಗಳಿಲ್ಲ
ಅನ್ನಕ್ಕೆ ಮಿಗಿಲು ಇನ್ನಿಲ್ಲ, ಲೋಕಕ್ಕೆ
ಅನ್ನವೇ ಪ್ರಾಣ–ಸರ್ವಜ್ಞ॥

ಎದ್ದು ಮಾತಾಡದಿರು, ಎದ್ದೆದ್ದು ನಿಲ್ಲದಿರು
ಇದ್ದ ಮಾನಿಸರ ಜರಿಯದಿರು ಓಲಗದೊ–
ಳಿದ್ದಾಗ ನೀನು–ಸರ್ವಜ್ಞ॥

ಸಜ್ಜನರ ಸಂಗವದು ಹೆಜ್ಜೇನ ಕೊಡದಂತೆ
ದುರ್ಜನರ ಸಂಗದೊಡನಾಟ ಬಚ್ಚಲಿನ
ರೊಚ್ಚಿನಂತಿಹುದು–ಸರ್ವಜ್ಞ॥

ದಂತಪಂಕ್ತಿಯ ನಡುವೆ ಎಂತಿಪ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ ಸಜ್ಜನನು
ನಿಂತಿಹನು ನೋಡ–ಸರ್ವಜ್ಞ॥

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?
ಜಾತಿ ವಿಜಾತಿಯೆನಬೇಡ, ದೇವನೊಲಿ–
ದಾತನೇ ಜಾತ–ಸರ್ವಜ್ಞ॥

ಆಯ್ಕೆಗೆ ಅಳವಡಲಾಗದಷ್ಟು ಮೌಲಿಕ ವಚನಗಳು ಸರ್ವಜ್ಞನವು. ಮಕ್ಕಳು ಈ ಪುಸ್ತಿಕೆಯಲ್ಲಿ ಬಂದಿರುವಷ್ಟು ವಚನಗಳನ್ನು ನೆನಪಿಟ್ಟರೂ ಸಾಕು, ಅವರ ಬಾಳಿನುದ್ದಕ್ಕೂ ಬೆಳಕು ನೀಡುವುವು ಅವು.

# ಅನುಬಂಧ

## ತುಪ್ಪಾ ರೊಟ್ಟಿ ಗೇ ಗೇ ಗೇ

### ಪ್ರಥಮ ಮುದ್ರಣದ ಮೊದಲ ಮಾತು

**ಎಳೆಯ ಗೆಳೆಯರೇ,**

ನಿಮಗಾಗಿ ಆಗೊಮ್ಮೆ ಈಗೊಮ್ಮೆ ಬರೆದಿದ್ದ ಬಿಡಿ ಕವನಗಳನ್ನು ಇಂದು ಒಂದು ಸಂಗ್ರಹಮಾಡಿ ನಿಮ್ಮ ಕೈಗಳಲ್ಲಿ ಇರಿಸುತ್ತಲಿದ್ದೇನೆ. ನನ್ನ ವಿದ್ಯಾಗುರು ಅಣತಿಯಂತೆ ಬರೆದ ಮೊದಲನೆಯ ಕವನ 'ನನ್ನ ಕುದುರೆ'ಗೆ ಎಳೆಯ ಗೆಳೆಯರಿಂದ ದೊರೆತ ಅಪಾರವಾದ ಮೆಚ್ಚುಗೆಯಿಂದ ಪ್ರೇರಿತನಾಗಿ ಈ ಕವನಗಳನ್ನು ಬರೆದೆ. ನಿಮಗೆ ಇವುಗಳಲ್ಲಿ ಕೆಲವಾದರೂ ಮೆಚ್ಚುಗೆಯಾದರೆ ನನಗೆ ಹಿಡಿಸಲಾಗದ ಹಿಗ್ಗು. ನೀವೇ ದೇವರು, ನಿಮ್ಮನ್ನು ಸಂತೋಷಪಡಿಸುವುದೇ ಪೂಜೆಯೆಂದು ಭಾವಿಸಿದ್ದೇನೆ.

ಇವುಗಳನ್ನು ಬರೆಯುವಾಗ ಒರೆಗಲ್ಲಾಗಿ 'ಇದು ಚೆನ್ನಾಗಿದೆ, ಇದು ಚೆನ್ನಾಗಿಲ್ಲ' ಎಂದು ತೀರ್ಪು ಕೊಟ್ಟವರು ನಿಮ್ಮಂತೆ ಎಳೆಯರಾಗಿರುವ ನನ್ನ ಮಕ್ಕಳು–ವಿಜಯಲಕ್ಷ್ಮಿ, ಶಿವಗೀತಾ, ಭಾರತಿಯರು. ಅವರಿಗೆ ಒಪ್ಪಿತವಾದವುಗಳನ್ನೇ ಇದರಲ್ಲಿ ಸೇರಿಸಿರುವೆನಾದಕಾರಣ ನಿಮಗೂ ಇವು ಒಪ್ಪಿತವಾಗುವುವೆಂದು ನಂಬಿದ್ದೇನೆ. ಭಾರತಿಯಂತೂ 'ಸರಪಳಿ'ಯೊಂದಿಲ್ಲದೆ ಈ ಸಂಗ್ರಹ ಸಂಪೂರ್ಣವಾಗದೆಂದು ಹಟ ಹಿಡಿದು ಇದರಲ್ಲಿ ಸೇರ್ಪಡೆಯಾಗಿರುವ ಸರಪಳಿಯನ್ನು ತಾನೇ ಬರೆದುಕೊಟ್ಟಿದ್ದಾಳೆ. ಆಕೆಯನ್ನು ಇಲ್ಲಿ ಸ್ಮರಿಸಿದರೆ ನಿಮಗೂ ಸಂತೋಷವಾಗುವುದೆಂದು ನಂಬಿದ್ದೇನೆ.

ಬೆಂಗಳೂರು — **ಸಿ. ಪು.**
ಆಗಸ್ಟ್ ೧೯೬೪

### ಎರಡನೆಯ ಆವೃತ್ತಿಯ ಬಗ್ಗೆ ಎರಡು ಮಾತು

ಈ ಮಕ್ಕಳ ಪದ್ಯಗಳ ಸಂಕಲನ ಇಷ್ಟೊಂದು ಜನಪ್ರಿಯವಾಗುವುದೆಂದೂ, ಭಾರತ ಸರಕಾರದ ಪುರಸ್ಕಾರ ಪಡೆವುದೆಂದೂ ನಾನೆಣಿಸಿರಲಿಲ್ಲ. ಇದರ ಎರಡನೆಯ ಆವೃತ್ತಿ ಪ್ರಕಟವಾಗುತ್ತಿರುವುದು ಸಹಜವಾಗಿಯೇ ಸಂತಸದ ಸಂಗತಿ ನನಗೆ. ಇದನ್ನು ಸಾಧ್ಯವಾಗಿಸಿದ ಕನ್ನಡ ನಾಡಿನ ಮಕ್ಕಳಿಗೆ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ಕರ್ಣಾಧಾರರಿಗೆ ನನ್ನ ನೆನಿಕೆಗಳು.

# ಗಿಲ್ ಗಿಲ್ ಗಿಲಗಚ್ಚಿ

## ನನ್ನ ನಾಲ್ಕು ಮಾತು

೧೯೫೦ ಇರಬಹುದು. ಒಮ್ಮೆ ನನ್ನ ಕನ್ನಡ ಗುರುಗಳಾದ ಪ್ರೊ. ಡಿ.ಕೆ. ಭೀಮಸೇನರಾಯರ ಮನೆಗೆ ಹೋದಾಗ ಅವರು "ಸತ್ಯಾಶ್ರಯ ಪಠ್ಯ ಪುಸ್ತಕ ಮಾಲೆ"ಯನ್ನು ರೂಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ನನ್ನನ್ನು ನೋಡುತ್ತಲೆ, ೩ನೆಯ, ೪ನೆಯ ತರಗತಿಯ ಪಠ್ಯ ಪುಸ್ತಕಗಳಿಗಾಗಿ ಎರಡು ಮಕ್ಕಳ ಪದ್ಯಗಳು ಬೇಕು, ಈಗಿಂದೀಗಲೇ ಬರೆದು ಕೊಡು. ಎಂದು ಕಾಗದ ಪೆನ್ನುಗಳನ್ನು ಮುಂದಿರಿಸಿದರು. ಅದಾವ ಅಮೃತ ಗಳಿಗೆಯೋ, "ಅಜ್ಜನ ಕೋಲಿದು ನನ್ನಯ ಕುದುರೆ" ಎಂಬ ಕವಿತೆಯನ್ನೂ. "ಕರಡಿಯ ತಕತಕ ಕುಣಿಸುತ ಬಂದನು ಸಿದ್ದಿದ್ದಿ ಬಾವಾ" ಎಂಬ ಕವಿತೆಯನ್ನೂ ಕೆಲವೇ ನಿಮಿಷಗಳಲ್ಲಿ ಬರೆದು ಒಪ್ಪಿಸಿದೆ. ಅವರಿಗೆ ಅತೀವ ಆನಂದವಾಯಿತು. "ನೀನು ಮಕ್ಕಳ ಪದ್ಯಗಳನ್ನೂ ಸೊಗಸಾಗಿ ಬರೆಯುತ್ತೀ, ಬರೆಯುತ್ತ ಹೋಗು" ಎಂದು ಹುರಿದುಂಬಿಸಿದರು.

ಈ ಎರಡೂ ಪದ್ಯಗಳು ಮಕ್ಕಳಿಗೆ ತುಂಬ ಮೆಚ್ಚುಗೆಯಾದುದನ್ನು ಕಂಡಮೇಲೂ ಮಕ್ಕಳ ಪದ್ಯಗಳ ರಚನೆಯನ್ನು ನಾನು ಮುಂದುವರಿಸಲೇ ಇಲ್ಲ. ಆಗೊಂದು ಈಗೊಂದು ಬರೆಯುತ್ತಾ ಹೋದಕಾರಣ ನನ್ನ ಮಕ್ಕಳ ಪದ್ಯಗಳ ಮೊದಲ ಸಂಗ್ರಹ ಹೊರ ಬೀಳಲು ೧೯೫೪ರವರೆಗೆ ಕಾಯಬೇಕಾಯಿತು. ಆ ವರ್ಷದಲ್ಲಿ ಬೆಂಗಳೂರಿನ "ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ" ಅವರು ನನ್ನ "ತುಪ್ಪಾ ರೊಟ್ಟಿ ಗೇಗೇಗೇ" ಎಂಬ ಮಕ್ಕಳ ಪದಗಳ ಸಂಗ್ರಹವನ್ನು ಪ್ರಕಟಿಸಿದರು. ಅದು ಭಾರತ ಸರಕಾರದ ಪುರಸ್ಕಾರವನ್ನೂ ಪಡೆದು ೧೯೭೩ರಲ್ಲಿ ಎರಡನೆಯ ಮುದ್ರಣವನ್ನು ಕಂಡಿತು.

ಇದಾದ ಮೇಲೆ ನನ್ನ ಮಕ್ಕಳ ಪದ್ಯಗಳ ರಚನೆ ತೂಕಡಿಸತೊಡಗಿತು. ಈ ಮಧ್ಯ ಗೆಳೆಯ ಶಂ.ಗು. ಬಿರಾದಾರರು ಕಲಬುರಗಿಯ "ಜೀವನ ವಿಕಾಸ"ದಲ್ಲಿ ಲೇಖನವೊಂದನ್ನು ಬರೆದು ನನ್ನಂಥವರು ಮಕ್ಕಳಸಾಹಿತ್ಯ ರಚನೆಯನ್ನು ಮುಂದುವರಿಸದಿದ್ದುದು ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಪ್ರಗತಿ ಕುಂಠಿತವಾಗಲು ಕಾರಣವಾಗಿದೆಯೆಂದು ಕಳಕಳಿಯಿಂದ ಹೇಳಿದರು. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಸಾಕಷ್ಟು ಶ್ರಮಿಸುವ, ಸಾಕಷ್ಟು ಒಳ್ಳೆಯ ಮಕ್ಕಳ ಸಾಹಿತ್ಯವನ್ನು ರಚಿಸುವ ಅವರ ಮಾತು ಮನದಲ್ಲಿ ನಾಟಿತು. ಮತ್ತೆ ಮಕ್ಕಳ ಪದ್ಯಗಳ ರಚನೆ ಪ್ರಾರಂಭವಾಯಿತು.

ಇದೇ ಸಮಯಕ್ಕೆ ಸರಿಯಾಗಿ ಮಕ್ಕಳ ಸಾಹಿತ್ಯದ ರಚನೆ, ಪ್ರಕಟಗಳನ್ನೇ ತಮ್ಮ ಜೀವನದ ಜೀವಾಳವನ್ನಾಗಿ ಮಾಡಿಕೊಂಡಿರುವ "ಸಿಸು" ಸಂಗಮೇಶ ಅವರು ತಮ್ಮ ಮಕ್ಕಳ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸಲು ನನ್ನ ಮಕ್ಕಳ ಪದ ಸಂಗ್ರಹವೊಂದನ್ನು ಕೇಳಿದರು. ಇದರಿಂದ ಮಕ್ಕಳ ಪದ್ಯ ರಚನೆಗೆ ಇನ್ನಷ್ಟು ಪುಟಿಗೆ ದೊರೆತು ಒಂದು ಸಂಗ್ರಹಕ್ಕೆ ಸಾಕಾಗುವಷ್ಟು ಪದ್ಯಗಳನ್ನು ಬರೆವ ಪಣತೊಟ್ಟೆ.

ಇದರ ಫಲವಾಗಿ ನನ್ನ ಮಕ್ಕಳ ಕವನಗಳ ಈ ಎರಡನೆಯ ಸಂಗ್ರಹ ಬೆಳಕು ಕಾಣುತ್ತಿದೆ "ಭಾರತೀ ಸಾಹಿತ್ಯ ಭಂಡಾರ"ದ ಮೂಲಕ. ಇದರ ಶ್ರೇಯಸ್ಸು ಗೆಳೆಯರಾದ ಶಂ.ಗು. ಬಿರಾದಾರ ಮತ್ತು "ಸಿಸು" ಸಂಗಮೇಶರಿಗೆ ಸಲ್ಲಬೇಕು. ಸೇರ್ಪಡೆಯಾಗುವ ಪದ್ಯಗಳ ವಿಚಾರ. ದೊಡ್ಡವರೇನೇ ಬರೆಯಲಿ, ಬಿಡಲಿ– ಯಾರಿಗಾಗಿ ಇವುಗಳ ರಚನೆಯಾಗಿದೆಯೋ ಆ ಕನ್ನಡ ಮಕ್ಕಳು ಮೆಚ್ಚಿದರೆ ಸಾಕೆನಗೆ.

"ಶ್ರೀಗಿರಿ"
4/5 A, ಅಲಿ ಅಸ್ಕರ್ ರಸ್ತೆ, ಬೆಂಗಳೂರು–೫೬೦೦೫೨

**– ಸಿದ್ಧಯ್ಯ ಪುರಾಣಿಕ**

# ಬಣ್ಣ ಬಣ್ಣದ ಓಕುಳಿ

## ಸಿರಿಗನ್ನಡಂ ಗೆಲ್ಗೆ

## ನನ್ನ ನಾಲ್ಕು ಮಾತು

ಯಾರಾದರೂ ಬೆನ್ನು ಹತ್ತಿದಾಗಲೇ ಬರೆಯುವುದು ನನ್ನ ಚಾಳಿಯಾಗಿಬಿಟ್ಟಿದೆ. ಈ ಪದ್ಯಗಳನ್ನು ಬೆಂಬತ್ತಿ ಬರೆಸಿದವರು ಕನ್ನಡ ಮಕ್ಕಳ ಸಾಹಿತ್ಯಾಕಾಶದ ಹೊಸ ನಕ್ಷತ್ರ ಶ್ರೀ ಟಿ.ಎಸ್. ನಾಗರಾಜ ಶೆಟ್ಟಿ ಅವರು. ಮಕ್ಕಳ ಸಾಹಿತ್ಯಕ್ಕೇ ತಮ್ಮ ಬಾಳನ್ನು ಮೀಸಲಾಗಿರಿಸಿರುವ ಅವರು ಈಗ ಮಕ್ಕಳ ಸಾಹಿತ್ಯ ಪ್ರಕಾಶನದ ಯೋಜನೆಯೊಂದನ್ನು ಹಮ್ಮಿಕೊಂಡಿದ್ದಾರೆ. ಅವರ ಯೋಜನೆ ಯಶಸ್ವಿಯಾಗಲೆಂದು ಕನ್ನಡ ಮಕ್ಕಳ ಪರವಾಗಿ ನಾನೂ ಪ್ರಾರ್ಥಿಸುತ್ತೇನೆ. ನನ್ನ ಈ ಸಂಗ್ರಹವನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡುದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅಲ್ಲದೆ, ಈ ಪದ್ಯಗಳನ್ನು ಬರೆಯಲು ಶಾಂತ ವಾತಾವರಣವನ್ನು ಕಲ್ಪಿಸಿಕೊಟ್ಟ ಅಳಿಯ ಶ್ರೀ ಕೆ. ಎನ್. ಎಂ. ನಂದೀಶ್ವರ, ಮಗಳು ವಿಜಯಾ ನಂದೀಶ್ವರರಿಗೆ ನೆನಿಕೆಗಳು ಸಲ್ಲಬೇಕು. ಮೊಮ್ಮಕ್ಕಳಾದ ಪಲ್ಲವಿ, ಗಗನ, ರಶ್ಮಿ, ವಿದ್ಯಾ, ಅನಮೋಲ, ಕವನರು ನನ್ನಲ್ಲಿ ಇನ್ನೂ ಮಕ್ಕಳ ಸಾಹಿತ್ಯದ ಸೆಲೆಗಳು ಉಳಿಯುವುದಕ್ಕೆ ಕಾರಣರಾಗಿದ್ದಾರೆ. ಅವರಿಗೆ ಸವಿ ಹರಕೆಗಳು ಸಲ್ಲಬೇಕು.

ಈ ಪದ್ಯ ಸಂಗ್ರಹದ ಪ್ರಕಟಣೆಯೊಂದಿಗೆ ನಾನು ಮೊದಲ ಪದ್ಯಗಳನ್ನು ಕನ್ನಡ ಮಕ್ಕಳಿಗೆ ಕೊಡಬೇಕೆಂದು ಧಾರವಾಡದಲ್ಲಿ ಜರುಗಿದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಮನಸ್ಸಿನಲ್ಲಿ ಮಾಡಿದ್ದ ಸಂಕಲ್ಪ ಸುಮಾರಾಗಿ ಈಡೇರಿದಂತಾಗಿದೆ. ನನಗಿದು ಹಿಗ್ಗಿನ ಸಂಗತಿ. ಕನ್ನಡ ಮಕ್ಕಳಿಗೂ ಹಿಗ್ಗಿನ ಸಂಗತಿಯೇ? ಅವರೇ ಓದಿ ಹೇಳಬೇಕು.

**– ಸಿದ್ಧಯ್ಯ ಪುರಾಣಿಕ**

"ಶ್ರೀಗಿರಿ"
4/5 A, ಅಲಿ ಅಸ್ಕರ್ ರಸ್ತೆ,
ಬೆಂಗಳೂರು–೫೬೦೦೫೨

# ಭಾರತವೆಲ್ಲಕೆ ಬಾವುಟವೊಂದೇ

## ಸಿರಿಗನ್ನಡಂ ಗೆಲ್ಗೆ

## ನುಡಿಕುಡಿ

ಇದು ನನ್ನ ಐದನೆಯ ಮಕ್ಕಳ ಪದ್ಯ ಸಂಗ್ರಹ; ಮತ್ತು ನಾನೇ ಪ್ರಕಟಿಸಿರುವ ಮೊದಲ ಸಂಗ್ರಹ. ಪ್ರಕಾಶಕರ ಬಗ್ಗೆ ಬೇಸರ ಹುಟ್ಟಿದುದೇ "ಶ್ರೀಗಿರಿ ಪ್ರಕಾಶನ"ದಲ್ಲಿ ಇದು ಪ್ರಕಟಗೊಳ್ಳಲು ಕಾರಣ.

ಇದರಲ್ಲಿಯೂ ವಿವಿಧ ವಯೋಮಾನದ ಮಕ್ಕಳಿಗಾಗಿ ಬರೆದ ಪದ್ಯಗಳಿವೆ, ಕನ್ನಡನಾಡಿನ ಮಕ್ಕಳು ನನ್ನ ಇದುವರೆಗಿನ ಮಕ್ಕಳ ಪದ್ಯಗಳನ್ನು ಮೆಚ್ಚಿಕೊಂಡಿದ್ದಾರೆ. ಈ ಪದ್ಯಗಳನ್ನೂ ಮೆಚ್ಚಿಕೊಳ್ಳುವರೆಂದು ನಂಬಿದ್ದೇನೆ.

ನಾನು ಇದುವರೆಗೆ ಬರೆದಿರುವ, ಇನ್ನೂ ಬರೆಯಲಿರುವ ಮಕ್ಕಳ ಪದ್ಯಗಳ ಸಮಗ್ರ ಸಂಪುಟವೊಂದನ್ನು ಪ್ರಕಟಿಸುವ ಅಪೇಕ್ಷೆ ನನಗಿದೆ. ಈಡೇರುವುದೋ ಇಲ್ಲವೋ ನೋಡಬೇಕು.

ಎಂದಿನಂತೆ ಲೋಟಸ್ ಪ್ರಿಂಟರ್ಸ್ ಈ ಕೃತಿಯನ್ನು ಅಂದವಾಗಿ ಅಚ್ಚಿಸಿದೆ. ಅದರ ಒಡೆಯರಿಗೆ ಕೃತಜ್ಞತೆಗಳು.

ಇದಕ್ಕೆ ಒಳ್ಳೆಯ ಚಿತ್ರಗಳನ್ನು ಬರೆದು ಕೊಟ್ಟವರು ಕಲಾವಿದ ಶ್ರೀ ಚಂದ್ರಶೇಖರ ಗುಬ್ಬಿ ಅವರಿಗೆ ನನ್ನ ನೆನಿಕೆಗಳು.

**– ಸಿದ್ಧಯ್ಯ ಪುರಾಣಿಕ**

"“ಶ್ರೀಗಿರಿ"
4/5 A, ಅಲಿ ಅಸ್ಕರ್ ರಸ್ತೆ,
ಬೆಂಗಳೂರು–೫೬೦೦೫೨

# ನ್ಯಾಯ ನಿರ್ಣಯ

## ಬರೆದವನ ಬಿನ್ನಪ

'ಕನ್ನಡದಲ್ಲಿ ಮಕ್ಕಳ ನಾಟಕಗಳ ಕೊರತೆಯಿದೆ; ನೀವು ಮಕ್ಕಲ ನಾಟಕವೊಂದನ್ನು ಬರೆಯಲೇ ಬೇಕು' ಎಂದು ದುಂಬಾಲು ಬಿದ್ದು ನನ್ನಿಂದ ಈ ನಾಟಕ ಬರೆಸಿ, ಅದನ್ನು ತಮ್ಮ 'ಬಾಲ ಭಾರತಿ'ಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದವರು ನನ್ನ ಹಳೆಯ ಗೆಳೆಯರೂ, ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಹೆಚ್ಚುಗೆಗಾಗಿ ಹಗಲಿರುಳೂ ಹೆಣಗುತ್ತಲಿರುವವರೂ ಆದ ಶ್ರೀ 'ಸಿಸು' ಸಂಗಮೇಶ ಅವರು.

ಅವರೀಗ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಮುಂದೆ ಬಂದಿರುವುದು ಆನಂದದ ಸಂಗತಿ ನನಗೆ. ಕಥೆ ಬಹಳ ಹಳೆಯದಾದರೂ ಹೊಸ ಬಗೆಯ ಮಕ್ಕಳ ನಾಟಕವಾಗಿ ಮೈದೆಬೀರಿರುವುದರಿಂದ ಕನ್ನಡ ಮಕ್ಕಳಿಗೆ ಇದು ರುಚಿಸಬಹುದೆಂದು ಭಾವಿಸಿದ್ದೇನೆ. ಇದನ್ನಾಡಲು ನನ್ನ ಪರವಾನಿಗೆಯೇನೂ ಬೇಕಿಲ್ಲ. ಯಾರು ಬೇಕಾದರೂ ಆಡಬಹುದು. ಯಾವಾಗ ಬೇಕಾದರೂ ಆಡಬಹುದು. ಸೂಚಿಸಿದರೆ ಸಾಕು.

ಶ್ರೀ 'ಸಿಸು' ಸಂಗಮೇಶರ, ಅವರ ಸಂಗಡಿಗರ ಪ್ರಯತ್ನಗಳು ಫಲಿಸಿ ಕನ್ನಡದಲ್ಲಿ ಮೇಲ್ಮಟ್ಟದ ಮಕ್ಕಳ ಸಾಹಿತ್ಯ ಸಮೃದ್ಧವಾಗಿ ಹುಟ್ಟಲಿ!

೭-೧-೧೯೮೬ — ಸಿದ್ಧಯ್ಯ ಪುರಾಣಿಕ

# ಮಕ್ಕಳ ಲೋಕ ಸಂಚಾರ

## ನನ್ನವೆರಡು ನುಡಿ

ಸಹೋದರ 'ಸಿಸು' ಸಂಗಮೇಶ ಮಕ್ಕಳ ಮಾಸಪತ್ರಿಕೆ 'ಬಾಲ ಭಾರತಿ'ಗಾಗಿ ಇದರಲ್ಲಿಯ ಐದು ಬರಹಗಳನ್ನು ಬರೆದೆ. ಇವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಿರ್ಧರಿಸಿ ಮತ್ತೆ ಮೂರು ಬರಹಗಳನ್ನು ಬೇಡಿದರು. ಬರೆದಿದ್ದೇನೆ. ಇದೊಂದು ಮಕ್ಕಳಿಗೆ ಬೋಧಪ್ರದವೂ ಆಮೋದ ಪ್ರದವೂ ಆದ ಪುಸ್ತಿಕೆಯಾಗಬಹುದೆಂದು ಬಗೆದಿದ್ದೇನೆ.

ಶ್ರೀ 'ಸಿಸು' ಸಂಗಮೇಶರು ಹಿಂದೆ ಧಾರವಾಡದಲ್ಲಿ ಜರುಗಿದ ದ್ವಿತೀಯ ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಎಳೆದೊಯ್ದಾಗ ಮಕ್ಕಳ ಸಾಹಿತ್ಯದಲ್ಲಿದ್ದ ನನ್ನ ಆಸಕ್ತಿ ಮತ್ತೆ ಚಿಗುರಿತು. ತತ್ಫಲವಾಗಿ ನನ್ನ ನಾಲ್ಕನೆಯ ಮಕ್ಕಳ ಪದ್ಯ ಸಂಗ್ರಹ ಹಾಗೂ ಈ ಪುಸ್ತಿಕೆ ಈಗ ಪ್ರಕಟವಾಗಲಿವೆ. ಇವುಗಳನ್ನು ಬೆನ್ನು ಹತ್ತಿ ಬರೆಸಿದ ಶ್ರೇಯಸ್ಸು ಶ್ರೀ 'ಸಿಸು' ಸಂಗಮೇಶರಿಗೆ ಸಲ್ಲುತ್ತದೆ.

ಕನ್ನಡ ನಾಡಿನ ಮಕ್ಕಳಿಗೆ ನನ್ನ ಕಾಣಿಕೆಯಿದು. ಅವರಿದನ್ನು ಮೆಚ್ಚಿದರೆ ನನಗೆ ತುಂಬ ಸಂತೋಷ.

– ಸಿದ್ಧಯ್ಯ ಪುರಾಣಿಕ

"ಶ್ರೀಗಿರಿ"
4/5 A, ಅಲಿ ಅಸ್ಕರ್ ರಸ್ತೆ,
ಬೆಂಗಳೂರು–೫೬೦೦೫೨

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ

**ಕವನ ಸಂಕಲನಗಳು**

೧. ಜಲಪಾತ (೧೯೫೩)
೨. ಕರುಣಾಶ್ರಾವಣ (೧೯೫೫)
೩. ಮಾನಸ ಸರೋವರ (೧೯೫೯)
೪. ಕಲ್ಲೋಲ ಮಾಲೆ (೧೯೬೮)
೫. ಮೊದಲು ಮಾನವನಾಗು (೧೯೬೯)
೬. ಚರಗ (೧೯೮೭)
೭. ಹಾಲ್ದೆನೆ (೧೯೯೦)
೮. ಮರುಳಸಿದ್ಧನ ಕಂತೆ (೧೯೯೧)
೯. ಸಮಗ್ರ ಕಾವ್ಯ (೨೦೦೮)

**ವಚನ ಸಂಗ್ರಹಗಳು**

೧. ವಚನೋದ್ಯಾನ (೧೯೭೭)
೨. ವಚನ ನಂದನ (೧೯೮೩)
೩. ವಚನಾರಾಮ (೧೯೯೨)
೪. ಸಮಗ್ರ ವಚನಗಳು (೨೦೦೯)

**ನಾಟಕಗಳು**

೧. ಆತ್ಮಾರ್ಪಣ (೧೯೪೨)
೨. ರಜತರೇಖೆ (೧೯೬೨)
೩. ಭಾರತವೀರ (೧೯೬೩)
೪. ಭಗ್ನನೂಪುರ (೧೯೮೪)
೫. ಸಮಗ್ರ ನಾಟಕಗಳು (೨೦೧೦)

**ಕಥಾ ಸಂಕಲನಗಳು**

೧. ಕಥಾ ಮಂಜರಿ (೧೯೫೧)
೨. ತುಷಾರಹಾರ (೧೯೮೭)

**ಕಾದಂಬರಿ**

೧. ತ್ರಿಭುವನ ಮಲ್ಲ (೧೯೭೪)

**ಮಕ್ಕಳ ಕವನ ಸಂಕಲನಗಳು**

೧. ತುಪ್ಪ ರೊಟ್ಟಿ ಗೇಗೇಗೇ (೧೯೬೪)
೨. ಗಿಲ್ ಗಿಲ್ ಗಿಲಗಚ್ಚಿ (೧೯೭೮)
೩. ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ (೧೯೮೧)
೪. ಬಣ್ಣ ಬಣ್ಣದ ಓಕುಳಿ (೧೯೮೭)
೫. ಭಾರತವೆಲ್ಲಕೆ ಬಾವುಟವೊಂದೇ (೧೯೯೧)

**ಮಕ್ಕಳ ನಾಟಕ**

೧. ನ್ಯಾಯ ನಿರ್ಣಯ (೧೯೮೬)

**ಮಕ್ಕಳ ಪ್ರವಾಸ ಸಾಹಿತ್ಯ**

೧. ಮಕ್ಕಳ ಲೋಕ ಸಂಚಾರ (೧೯೮೯)

**ಜೀವನ ಚರಿತ್ರೆಗಳು**

೧. ಶರಣ ಚರಿತಾಮೃತ (೧೯೬೪)
೨. ಸಿದ್ಧರಾಮ (೧೯೭೪)
೩. ಬಸವಣ್ಣನವರ ಜೀವನ ಹಾಗೂ ಸಂದೇಶ (೧೯೭೭)
೪. ನಜೀರ್ ಅಕಬರಾಬಾದಿ (೧೯೭೮)
೫. ಹರ್ಡೇಕರ ಮಂಜಪ್ಪ (೧೯೭೮)
೬. ಮಿರ್ಜಾ ಗಾಲಿಬ್ (೧೯೭೯)
೭. ಮಹಾದೇವಿ (೧೯೮೪)
೮. ಅಲ್ಲಮ ಪ್ರಭು (೧೯೮೯)

**ಇತರ ಕೃತಿಗಳು**

೧. ವಿಕಾಸವಾಣಿ (೧೯೫೫)
೨. ಗ್ರಾಮ ಸ್ವರಾಜ್ಯ (೧೯೮೨)
೩. ಚಿಂತನ ಲಹರಿ (೧೯೮೯)
೪. ಶರಣ ಸರಣಿ (೧೯೯೨)

**ಅನುವಾದಗಳು**

೧. ನಜೀರ್ ಅಕಬರಾಬಾದಿ (೧೯೭೮)
೨. ಒಂದು ಊರಿನ ಕತೆ

# ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ

| | |
|---|---|
| ೧೮-೬-೧೯೧೮- | ಜನನ : ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕಿನ ದ್ಯಾಂಪುರದಲ್ಲಿ. ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು. |
| ೧೯೩೨ – | ೧೪ನೇ ವಯಸ್ಸಿನಲ್ಲಿ 'ಬೆಳಗು' ಕವನ ರಚನೆ. |
| ೧೯೩೭ – | ಹರ್ಡೇಕರ ಮಂಜಪ್ಪನವರೊಂದಿಗೆ ಆಲಮಟ್ಟಿಯಲ್ಲಿ ವಾಸ. |
| ೧೯೪೩ – | ತಹಸಿಲ್ದಾರ ತರಬೇತಿ, ನಾಂದೇಡ, ಹೈದರಾಬಾದ |
| ೧೧-೫-೧೯೪೪ – | ವಿವಾಹ, ಗಿರಿಜಾದೇವಿಯವರೊಡನೆ. |
| ೧೯೪೪-೫೭- | ಅಸಿಸ್ಟೆಂಟ್ ಕಲೆಕ್ಟರ್ (ನಾಂದೇಡ, ಗುಲಬರ್ಗ), ಡೆಪ್ಯೂಟಿ ಕಲೆಕ್ಟರ್ (ತಾಂಡೂರು, ಯಾದಗಿರಿ) |
| ೧೯-೩-೫೮ – | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| ೧೯೬೦-೧೯೭೬- | ಡೆಪ್ಯೂಟಿ ಸೆಕ್ರೆಟರಿ, ನಿರ್ದೇಶಕರು, ಡೆಪ್ಯೂಟಿ ಕಮಿಷನರ್ ಮಡಕೇರಿ ಬೆಳಗಾವಿ, ಕಮಿಷನರ್ (ಸಾರಿಗೆ, ಲೇಬರ್). |
| ೧೯೭೬ – | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ. |
| ೩೦-೬-೧೯೭೬- | ನಿವೃತ್ತಿ ಹಾಗೂ ವಿಶ್ರಾಂತ ಜೀವನ |
| ೧೯೭೮ – | 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ |
| ೧೯೮೦ – | ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ |
| ೧೯೮೧ – | ಮಾಳವಾಡ ಪ್ರಶಸ್ತಿ |
| ೧೯೮೧ – | ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ |
| ೧೯೮೨ – | ಕನ್ನಡ ರಾಜ್ಯೋತ್ಸವ ಪ್ರಶಸ್ತಿ |
| ೧೯೮೫ – | ಧಾರವಾಡ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. |
| ೧೯೮೭ – | ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. |
| ೫-೯-೧೯೯೪ – | ಮರಣ. |